Budget Estimate for 1977-78
Demands for Grants (Contd.) Demands Nos. 37,38 and 1

SRI K. H. RANGANATH (Minister for Co-operation and Parliamentary Affairs). - Madam, on the recommendation of the Governor, I beg to move :

That a sum not exceeding Rs. 3,02,70,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No, 1 "State Legislature and Elections".

MADAM SPEAKER.—Motion moved.

"That a sum not exceeding Rs. 3,02 70,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 1 "State Legislature and Elections".

Demand Nos. 37 and 38 have already been moved on 16th June 1977. All the three Demands are before the House for discussion.

ಶ್ರೀ ಸಿ. ಬೈರೇಗೌಡ.—ನಮಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ, ನಾವು ಹೇಳಿದಂತೆನೇ, ಅವರವರ ಕ್ಷೇತ್ರದಲ್ಲಿ ಅವರವರು ಹೇಳಿದ ರೀತಿಯಲ್ಲಿ ರೀ ಆರ್ಗನೈಜೇಷನ್ ಆಗಬೇಕು, ನಾಮಿನೇಷನ್ ಮಾಡುವುದು ಎಂದು ಹೇಳಿ ಅವತ್ತು ಒಂದು ಒಪ್ಪಂದಕ್ಕೆ ಬಂದಿದ್ದೆವು, ಆದರೆ ಇವತ್ತಿನ ದಿವಸ ಇದೇ ಪರಿಸ್ಥಿತಿ ಮುಂದುವರಿದಿದ್ದೇ ಆದರೆ ಈ ಡಿಮ್ಯಾಂಡ್ ಸಭೆಗೆ ಬರುವುದಕ್ಕೆ ಮುಂಚೆ ಏನು ಪರಿಸ್ಥಿತಿ ಇತ್ತೋ ಇವತ್ತುಕೂಡ ಅದೇ ಪರಿಸ್ಥಿತಿ ಇದೆ ಎಂದು ಅನುಮಾನ ಬರುತ್ತಿದೆ. ನನಗೆ ಮಂತ್ರಿಗಳವರ ಪ್ರೈವೇಟ್ ಸೆಕ್ರಟರಿಯವರಿಂದ ಕಾಗದ ಬಂದಿದೆ. ಆ ಕಾಗದದ ಮೇಲೆ ೧ನೇ ತಾರೀಖು ಇದೆ ನನಗೆ ೪ನೇ ತಾರೀಖು ಕೈಗೆ ಸೇರಿರುತ್ತದೆ. ಇವತ್ತು ಮಂತ್ರಿಗಳವರು ಕಾಗದ ಬರೆಯುವುದಕ್ಕೂ ಬಿಡುವಿಲ್ಲ.

ಅಧ್ಯಕ್ಷರು.—ಅದು ತಪ್ಪೇನೂ ಅಲ್ಲ,

ಶ್ರೀ ಸಿ. ಬೈರೇಗೌಡ.—ಅದು ತಪ್ಪು ಅಂತ ಅಲ್ಲಾ. ನಾನು ಹೇಳುತ್ತಿರುವುದು, ಅವರು ಒಂದನೇ ತಾರೀಖು ಕಾಗದ ಬರೆದಿದ್ದರೆ ಅದು ನನಗೆ ೪ನೇ ತಾರೀಖು ತಲುಪಿದೆ, ಅದರಲ್ಲಿ ಕಣ್ಣು ಮುಚ್ಚಾಲೆ ಆಟ ನಡೆಯುತ್ತಿದೆ ಎಂದು ನನಗೆ ಭಾಸವಾಗುತ್ತಿದೆ. ಎರಡು ದಿವಸಗಳಾದ ಮೇಲೆ ನಾವು ಆಕಡೆಗೆ ಹೊರಟು ಹೋಗುತ್ತೇವೆ ಎಂದು ಸರ್ಕಾರದವರ ಹವಣಿಕೆಯಾಗಿದೆ, ನಮ್ಮನೆಲ್ಲಾ ಆ ಕಡೆಗೆ ಕಳುಹಿಸಿ, ನಮಗೆ ಏನು ಹೇಳಿರುತ್ತಾರೆ ಅದನ್ನೆಲ್ಲಾ ಬದಿಗೊತ್ತಿ.

ಅಧ್ಯಕ್ಷರು.—ಇಷ್ಟು ಹೇಳುವುದಕ್ಕೆ ೫ ನಿಮಿಷ ತೆಗೆದುಕೊಂಡಿರಾ.

ಶ್ರೀ ಸಿ. ಬೈರೇಗೌಡ.—ಇಂಥಾ ಒಂದು ಹವಣಿಕೆ ನಡೆದಿದೆ.

ಅಧ್ಯಕ್ಷರು.—ಕಾಲ ಇಲ್ಲ. ನಿಮ್ಮ ನಾಯಕರು ೮-೧೦ ಜನರ ಪಟ್ಟಿಯನ್ನು ಕಳುಹಿಸಿದ್ದಾರೆ. ನೀವು ಹೀಗೆ ಮಾಡಿದರೆ ಕಾಲ ಹೇಗೆ ಹೊಂದಾಣಿಕೆ ಆಗುತ್ತದೆ ?

ಶ್ರೀ ಸಿ. ಬೈರೇಗೌಡ.—ಇದರ ಬಗ್ಗೆ ಸ್ಪಷ್ಟೀಕರಿಸಿದರೆ ಮುಂದಿನ ಕೆಲಸ ಸುಗಮವಾಗಿ ನಡೆಯುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣೀಯುವರೇ, ೧೪ನೇ ತಾರೀಖು ಬೇಡಿಕೆಗಳನ್ನು ಸಭೆಯ ಮುಂದೆ ಇಡತಕ್ಕಂಥ ಕಾಲದಲ್ಲಿ ಏನು ಒಂದು ಪರಿಸ್ಥಿತಿ ಉಂಟಾಗಿತ್ತು ಎಂಬುದು ತಮಗೆಲ್ಲಾ ಗೊತ್ತಿದೆ. ಮುಖ್ಯ ಮಂತ್ರಿಗಳವರು ಆ ಸ್ಥಿತಿಯಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಮಾನ್ಯ ಶ್ರೀ ಕೆ. ಎಚ್. ರಂಗನಾಥ್‌ರವರೂ ಹೇಳಿಕೆ ಕೊಟ್ಟಿದ್ದಾರೆ. ವಿರೋಧ ಪಕ್ಷದ ಶಾಸಕರು ಇರತಕ್ಕಂಥ ಕ್ಷೇತ್ರದಲ್ಲಿ ಏನು ಸಹಕಾರ ಸಂಘಗಳು, ಸರ್ವೀಸ್ ಕೋ-ಆಪರೇಟಿವ್ ಸೊಸೈಟಿಗಳು ಇವೆ ಅಲ್ಲಿ ರೀ ಅಮಾಲ್ಗಮೇಷನ್ ಆಗಿರತಕ್ಕಂಥವುಗಳೇನಿವೆ, ಅಲ್ಲಿ ಕೆಲವು ತಪ್ಪುಗಳು ಆಗಿವೆ ಅದನ್ನು ಸರಿಪಡಿಸುತ್ತೇವೆ ಮತ್ತು ರೀ ಗ್ರೂಪಿಂಗ್‌ನಲ್ಲಿ ಆಗಿರುವಂಥಾ ತಪ್ಪುಗಳನ್ನೂ ಸರಿಪಡಿಸುತ್ತೇವೆಂದು ಮತ್ತು ನಾಮಿನೇಷನ್ ಮಾಡತಕ್ಕದರ ಬಗ್ಗೆ ಸಹ ಹೇಳಿದ್ದರು. ಇವತ್ತು ಈ ಸಭೆಯಲ್ಲಿ ಮಾನ್ಯ ಸಹಕಾರ ಸಚಿವರು ಬೇಡಿಕೆಯನ್ನು ಮಂಡಿಸಿದ್ದಾರೆ.

ಅದು ಆದಮೇಲೆ ಮಂತ್ರಿಗಳು ವಿಭಾಗವಾರು ಸದಸ್ಯರುಗಳನ್ನು ಚರ್ಚೆಗೆ ಕೂಡ ಕರೆಸಿದ್ದರು. ಮೈಸೂರು ವಿಭಾಗಕ್ಕೆ ಸಂಬಂಧಪಟ್ಟಂತೆ ವಿರೋಧಿ ಪಕ್ಷದ ಸದಸ್ಯರನ್ನು ಕರೆಸಿದರು, ಅದೇರೀತಿ ಬಹುಶಃ ಎಲ್ಲರನ್ನು ಕರೆಸಿದ್ದರೂ ಎಂದು ಕಾಣುತ್ತೆ. ಕೆಲವರನ್ನು ಕರೆಸದೇ ಇದ್ದುದರಿಂದ ಈ ಸಂಶಯಕ್ಕೆ ಎಡೆಗೊಡುವುದಕ್ಕೆ ಕಾರಣವಾಯಿತು. ಕೆಲವರಿಗೆ ಕಾಗದಗಳು ತಲುಪಿಲ್ಲ: ನಿನ್ನೆ ಮೊನ್ನೆ ಕೆಲವರಿಗೆ ಕಾಗದಗಳು ತಲುಪಿವೆ, ನಾನು ಮಂತ್ರಿಗಳ ಬಗ್ಗೆ ಅಪನಂಬಿಕೆ ಪಡುವುದಕ್ಕೆ ಹೋಗುವುದಿಲ್ಲ: ಮಂತ್ರಿಗಳು ಆ ಕೆಲಸವನ್ನು ಮಾಡಲೇಬೇಕು, ನಾಳೆ ಕೊಟ್ಟರೂ ಮಾಡುತ್ತಾರೆ. ಬರದಿರತಕ್ಕ ಸಂಶಯ ಏನು ಅಂದರೆ ಈ ಸದನದ ಕಾರ್ಯಕ್ರಮಗಳನ್ನು ನೋಡಿದ್ದು ಮುಕ್ತಾಯವಾಗುತ್ತದೆ. ನಾವು ಆ ದಿನ ಏನು ನಿರ್ಣಯ ತೆಗೆದುಕೊಂಡೆವೋ ಆ ನಿರ್ಣಯದ ಪ್ರಕಾರ ಪುನರ್ವಿಂಗಡಣೆಗೆ ಸಂಬಂಧ ಪಟ್ಟಹಾಗೆ ನಾಮಕರಣ ಮಾಡುವ ಬಗ್ಗೆ ಇನ್ನೂ ಪೂರ್ಣ ಕಾರ್ಯಗತವಾಗಿಲ್ಲ, ದೋಷ ನಮ್ಮ ಕಡೆಗೂ ಇದೆ, ಅನೇಕ ಸದಸ್ಯರುಗಳಿಗೆ ಸಕಾಲದಲ್ಲಿ ಪಟ್ಟಿಯನ್ನು ಕೊಡುವುದಕ್ಕೆ ಆಗಿಲ್ಲ ಕೆಲವರಿಗೆ ಇವತ್ತು ಬಂದಿದೆ ಎಂದು ಹೇಳುತ್ತಾರೆ. ಮಂತ್ರಿಗಳು ಆಶ್ವಾಸನೆ ಕೊಟ್ಟರೆ, ಡಿಬೇಟನ್ನು ಯಾವ ರೀತಿ ಮುಂದುವರಿಸಬೇಕು ಎಂಬ ಬಗ್ಗೆ ನಮಗೆ ಮಾರ್ಗದರ್ಶನವಾಗುತ್ತದೆ. ಮೊನ್ನೆ ಮುಖ್ಯಮಂತ್ರಿಗಳು ಕೈಗಾರಿಕೆಯ ಇಲಾಖೆಯ ವಿಚಾರವಾಗಿ ಮಾತನಾಡುವಾಗ ಪಕ್ಷದ ಸರ್ಕಾರ ಇರುವಾಗ, ಪಕ್ಷದ ಸದಸ್ಯರುಗಳನ್ನು ನಾಮಕರಣ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇವತ್ತು ಸಹಕಾರಿ ಕ್ಷೇತ್ರದಲ್ಲಿ ಪಕ್ಷದ ರಾಜಕಾರಣ ಯೋಗ್ಯ ಅಲ್ಲವೆನ್ನುವುದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಇವತ್ತು ಸಹಕಾರಿ ಸಂಘಗಳನ್ನು ಪುನರ್ವಿಂಗಡಣೆ ಮಾಡಿದಲ್ಲಿ ಅವು ವಯ್ಯಬಲ್ ಯೂನಿಟ್ ಆದ ಮೇಲೆ ಸ್ಥಳೀಯವಾಗ ಸಹಕಾರಿರಂಗದಲ್ಲಿ ವಿಶ್ವಾಸ ಇರತಕ್ಕಂಥವರನ್ನು ನಾಮಕರಣ ಮಾಡುವಾಗ ಸ್ಥಳೀಯ ಶಾಸಕರನ್ನು ತಿಳಿಯದೆ ಮಾಡಿದ್ದಾರೆ. ನಾನು ಮೊದಲೇ ಹೇಳಿದಹಾಗೆ, ಅಧಿಕಾರಿಗಳು, ಆಡಳಿತಮಂಡಲಿಯವರು ಹಾಗೂ ಶಾಸಕರು ಒಂದು ಕಡೆ ಸೇರಿ ಪಟ್ಟಿಯನ್ನು ತಯಾರುಮಾಡಿಲ್ಲ. ೨೦ ಅಂಶ ಕಾರ್ಯಕ್ರಮದ ಮೇರೆಗೆ ಮಾಡಿರಬಹುದು: ನಾನು ಮತ್ತೆ ಅದನ್ನು ಪುನರುಚ್ಚಾರ ಮಾಡಬೇಕಾಗಿಲ್ಲ. ವಿರೋಧಿ ಸದಸ್ಯರು ಇರತಕ್ಕ ೪೦-೪೨ ಕ್ಷೇತ್ರಗಳು ಇವೆ, ಧಾರವಾಡ ಜಿಲ್ಲೆಗೆ ಇಬ್ಬರು ಇದ್ದಾರೆ. ಈ ಒಂದು ಕ್ಷೇತ್ರಗಳಲ್ಲಿ ಸದನದ ಸದಸ್ಯರು ಕೊಡತಕ್ಕ ಪಟ್ಟಿ ಏನು ಇದೆ. ಅದನ್ನು ಮಾನ್ಯತೆ ಮಾಡಿ ನಾಮಕರಣ ಮಾಡುತ್ತೇವೆಂದು ಹೇಳಿದರೆ, ನಮ್ಮಲ್ಲಿ ಉಂಟಾಗಿರತಕ್ಕ ಜಿಜ್ಞಾಸೆ, ಸಂಶಯ, ಅನುಮಾನ ಬಗೆಹರಿಯುತ್ತದೆ. ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಮಂತ್ರಿಗಳು ಈ ಬಗ್ಗೆ ವಿವರಣೆ ಕೊಡುತ್ತಾರೆಂದು ಆಶಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಹೇಳಿದ್ದು, ವಾಸ್ತವಾಂಶ ಕೆಲವರಿಗೆ ತಡವಾಗಿ ಹೋಗಿದೆ. ನಾಲ್ಕು ಡಿವಿಷನ್ನಿನವರನ್ನು ಕರೆಸಿ ಮಾತನಾಡುವುದಕ್ಕೆ ನಾಲ್ಕು ದಿವಸವಾಯಿತು. ಒಟ್ಟಿಗೆ ಕರೆದು ಮಾತನಾಡುವ ಉದ್ದೇಶದಿಂದ ನಾನೇ ಸ್ವತಃ ನನ್ನ ಸ್ವಹಸ್ತದಿಂದ ಕಾಗದ ಬರೆದಿದ್ದೇನೆ. ಕೆಲವು ಮಿತ್ರರಿಗೆ ಹೋಗಿದೆ: ಪ್ರಿಂಟೆಡ್ ಲಿಸ್ಟ್ ನೋಡಿ ಅದರಂತೆ ಕಳುಹಿಸಿದ್ದಾರೆ, ಕೆಲವರು ಆ ಕಡೆಯಿಂದ ಈ ಕಡೆ ಬಂದಿದ್ದಾರೆ. ಕೆಲವು ಮಿತ್ರರಿಗೆ ಹೋಗಿಲ್ಲ. ಸತ್ಯನಾರಾಯಣ ಸಿಂಗರವರು ಬಂದು, ಗುಲ್ಬರ್ಗಾ ವಿಭಾಗಕ್ಕೆ ಬಂದಿಲ್ಲ ಎಂದು ಹೇಳಿದಾಗ ಪೋನ್ ಮಾಡಲು ತದನಂತರ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ. ನಂತರ ಪತ್ರ ಬರೆದು ಹಾಕಿದ್ದಾರೆ, ನಿನ್ನೆಯಿಂದ ಪತ್ರ ಹೋಗಿದೆ, ಅದನ್ನು ತೀವ್ರವಾಗಿ ತೆಗೆದುಕೊಳ್ಳುವುದಾದರೆ ಕ್ಷಮೆಕೇಳುತ್ತೇನೆ. ಗುಲ್ಬರ್ಗ ಮತ್ತು ಮೈಸೂರು ಡಿವಿಜನ್ನಿನಿಂದ ಕೆಲವು ಮಿತ್ರರಿಂದಬಂದಿದೆ. ಎಷ್ಟು ಜನರದ್ದು ಬಂದಿದೆ ಎನ್ನುವ ಬಗೆ ನನ್ನ ಹತ್ತಿರ

ಒಂದು ಪಟ್ಟಿ ಇದೆ, ಬಹಳ ಕಡಿಮೆ ಇದೆ ಕೆಲವರು ಸಮಯ ಬೇಕೆಂದು ಹೇಳಿದ್ದಾರೆ. ಒಟ್ಟಿಗೆ ಎಲ್ಲ ಸೇರಿ ಮಾನ್ಯ ಸದಸ್ಯರುಗಳನ್ನು ಕರೆದು ವಿಚಾರಮಾಡಿ ಈಗ ಕೊಟ್ಟಂತ ಹೆಸರಿನಲ್ಲಿ ಯೋಗ್ಯವಾಗಿರತಕ್ಕ, ಸಾಮಾನ್ಯವಾಗಿ ಒಪ್ಪತಕ್ಕ ಕಾಮನ್ ನೇಮ್ಸ್‌ಗಳನ್ನು ಕಾರ್ಯಗತ ಮಾಡುವುದರ ಬಗ್ಗೆ ಭಿನ್ನಾಭಿಪ್ರಾಯ ವಿಲ್ಲ. ಆದುದರಿಂದ ಮಾನ್ಯಸದಸ್ಯರುಗಳು ಸಂಶಯಕ್ಕೆ ಒಳಗಾಗಬೇಕಾದುದು ಅನಾವಶ್ಯಕ. ಬಹಳ ಜನ ಸ್ನೇಹಿತರು ಇನ್ನೂ ಪಟ್ಟಿ ಕೊಟ್ಟಿಲ್ಲ. ಸುಮಾರು ೧೨ ಜನ ಸ್ನೇಹಿತರು ಕೊಟ್ಟಿದ್ದಾರೆ. ಉಳಿಕೆಯವರು ಕೊಟ್ಟಮೇಲೆ ಎಲ್ಲರನ್ನು ಕರೆಸಿ ಮಾತನಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಕೊಟ್ಟ ಮೇಲೆ ಮಾಡುತ್ತೇನೆಂದು ಹೇಳಿದ್ದಾರೆ ಇವರು ಕಡೆಯಿಂದ ಕೊಡುವುದು, ಅವರ ಕಡೆಯಿಂದ ಕೊಡುವುದು ಈ ಚೌಚೌ ಮಾಡುವುದು ಏತಕ್ಕೆ ?

ಅಧ್ಯಕ್ಷರು.—ಬೈರೇಗೌಡರೆ ಇದೆಲ್ಲ ಬಹಳ ಜಾಸ್ತಿಯಾಯಿತು.

ಶ್ರೀ ಕೆ ಎಚ್. ರಂಗನಾಥ್.—ನಿಮ್ಮನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದೇನೆ. ಇದನ್ನು ಹೆಚ್ಚು ಎಳೆಯುವುದು ಬೇಡ.

ಶ್ರೀ ಎಚ್ ಡಿ ದೇವೇಗೌಡ.—ಈ ಸಂಶಯ ಉದ್ಭವವಾಗಿದ್ದು ರಾಜಕಾರಣದಿಂದಲೇ ಮಾನ್ಯ ಸಚಿವ ಪ್ರಾಮಾಣಿಕತೆ ಬಗ್ಗೆ ಯಾವುದೇ ಸಂದರ್ಭದಲ್ಲೂ ಅಪನಂಬಿಕೆ ಪಡುವುದಕ್ಕೆ ಹೋಗಿಲ್ಲ. ರಾಜಕೀಯ ಒತ್ತಡಗಳಿಂದ ಮಾಡಿರತಕ್ಕ ತೀರ್ಪುಗಳನ್ನು ಬದಲಾವಣೆ ಮಾಡುವುದು ಕಷ್ಟ ಇದೆ. ನನ್ನ ಮನಸ್ಸಿನಲ್ಲಿರು ವುದನ್ನು ಹೇಳುತ್ತೇನೆ; ವೈಯಕ್ತಿಕವಾಗಿ ನಾನು ಕೊಟ್ಟಿರುವುದನ್ನು ಮಾಡದೇ ಇದ್ದರೂ ಪರವಾಯಿಲ್ಲ. ಸೊಸೈಟಿ ಇಟ್ಟು ಗೆದ್ದು ಬರಬೇಕೆಂಬ ಹಂಬಲ ನನಗೇನೂ ಇಲ್ಲ. ಮಾನ್ಯ ಶ್ರೀಕಂಠಯ್ಯನವರಾದರೆ ಗೊಬ್ಬರಕ್ಕೆ ಅದಕ್ಕೆ ಇದಕ್ಕೆ ಎಂದು ೨೦ ಲಕ್ಷ ರೂಪಾಯಿ ಖರ್ಚು ಮಾಡಬಹುದು. ತಾವು ಅಧಿಕಾರಿಗಳು ಕೊಟ್ಟಂತ ಪಟ್ಟಿಯನ್ನು ತರಿಸಿ ಮಾಡಿದ್ದರೆ ಈ ಸಂಶಯ ಉದ್ಭವವಾಗುತ್ತಾ ಇರಲಿಲ್ಲ. ವಿರೋಧಿ ಪಕ್ಷದ ಸದಸ್ಯರು ಪ್ರತಿನಿಧಿಸಿರತಕ್ಕ ಕ್ಷೇತ್ರದಲ್ಲಿರುವ ಸಹಕಾರಿ ರಂಗದಲ್ಲಿ ಇರತಕ್ಕವರ ಪಟ್ಟಿಯನ್ನು ಏನು ಕೊಟ್ಟಿದ್ದಾರೆ. ನಾನು ಒಬ್ಬ ಶಾಸಕನಾಗಿ ಸಕ್ಕರೆ ಮಾರುವವನ ಹೆಸರನ್ನು ಕೊಟ್ಟರೆ ತಪ್ಪಾಗುತ್ತದೆ. ದೇವೇಗೌಡರು ಸ್ವಾರ್ಥಕ್ಕಾಗಿ ಈ ರೀತಿ ಮಾಡಿಕೊಂಡಿದ್ದಾರೆಂದು ನಾಳೆ ಜನ ಅಂದು ಕೊಳ್ಳುತ್ತಾರೆ. ನಾವು ಕೂಡ ಜನತೆಗೆ ಉತ್ತರ ಹೇಳಬೇಕಾಗಿದೆ. ಈಗ ಏನು ಪಟ್ಟಿಕೊಟ್ಟಿದ್ದಾರೆ ಅದನ್ನು ಮಾನ್ಯತೆ ಮಾಡುತ್ತೇವೆಂದು ಹೇಳಿದರೆ ಇನ್ನು ಒಂದು ಚಕಾರ ಶಬ್ದ ಕೂಡ ಹೇಳುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ .—ಅಧ್ಯಕ್ಷರೇ, ನಾನು ಅವರನ್ನೇ ಕೂರಿಸಿಕೊಂಡು ಅವರ ಎದುರಿಗೆ ಮಾಡುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ರಂಗನಾಥ್ ಅವರು ಬಹಳ ಬುದ್ಧಿವಂತರು ಇದ್ದಾರೆ, ಲಾಯರ್ ಇದ್ದಾರೆ.

ಶ್ರೀ ಕೆ.ಎಚ್. ರಂಗನಾಥ್.—ಅಧ್ಯಕ್ಷರೆ, ತಾವು ಹೇಳುವುದಾದರೆ ಬಹುಮತ ಕೋಡೋಣ. ಒಟ್ಟು ೪೫ ಕ್ಷೇತ್ರದಲ್ಲಿರತಕ್ಕ ಸೊಸೈಟಿಗಳಲ್ಲಿ ೯ ಜನರು ಇರುತ್ತಾರೆ. ಅದರಲ್ಲಿ ಒಬ್ಬರು ಹರಿಜನರು ಇರುತ್ತಾರೆ. ನಂತರ ೪ ಜನ ಸಣ್ಣ ರೈತರು, ೪ ಜನ ದೊಡ್ಡ ರೈತರು ಇರುತ್ತಾರೆ. ಆದ್ದರಿಂದ ಅದರಲ್ಲಿ ೫ ಜನ ಮೆಜಾರಿಟಿ ತಮಗೆ ಕೋಡೋಣ.

ಶ್ರೀ ಎಚ್.ಡಿ. ದೇವೇಗೌಡ.—ಈಗ ಮಾನ್ಯಮಂತ್ರಿಗಳು ೫ ಜನ ಮೆಜಾರಿಟಿ ಕೊಡುತ್ತೇವೆ ಎಂದು ಹೇಳಿರುವ ಬಗ್ಗೆ ಸಮಾಧಾನ ಪಟ್ಟುಕೊಳ್ಳೋಣ.

ಶ್ರೀ ಸಿ ಬೈರೇಗೌಡ.—ಅಧ್ಯಕ್ಷರೆ, ಈಗ ನಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂದರೆ....

ಅಧ್ಯಕ್ಷರು.—ಈಗ ನಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂಬುದು ತಮಗೆ ಗೊತ್ತಿದೆಯೇ...

4-30 P. M.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಮಂಡಿಸಿರ ತಕ್ಕ ಈಬೇಡಿಕೆಯನ್ನು ನಾನು ವಿರೋಧ ಮಾಡಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಈಗತಾನೆ ಎಲ್ಲರ ಮನಸ್ಸಿನಲ್ಲೂ ಉದ್ಭವಿಸಿದಂಥ ಗೊಂದಲ ಪರಿಹಾರ ಮಾಡುವುದಕ್ಕೆ ಮಾನ್ಯ ಸಚಿವರು ಒಂದು ಮಾತನ್ನು ಹೇಳಿದ್ದಾರೆ. ಈ ಪರಿಸ್ಥಿತಿಗೆ ನಾವು ಬಂದು ಮುಟ್ಟಿರಬೇಕಾದರೆ ಇದರಲ್ಲಿ ಒಂದ

ರಾಜಕೀಯ ಸ್ವಾರ್ಥ ಸಾಧನೆ ಮಾಡಬೇಕೆಂಬ ಹಂಬಲ ಮುಖ್ಯವಾಗಿ ಇರಲಿಲ್ಲ. ನಮ್ಮ ಉದ್ದೇಶ ಏನಿತ್ತು ಎಂದರೆ ಸರ್ಕಾರ ಕೈಗೊಂಡಿರತಕ್ಕ ಪುನರ್‌ವಿಂಗಡಣೆ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರ ಮತ್ತಷ್ಟು ಪ್ರಬಲಗೊಳ್ಳಬೇಕು ಹಾಗೂ ಉತ್ತಮಗೊಳ್ಳಬೇಕು ಎಂಬುದು ಇದ್ದದ್ದು ಈಗ ಅದರ ಬಗ್ಗೆ ಸ್ವಲ್ಪಮಟ್ಟಿನ ಪರಿಹಾರಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಇವೊತ್ತು ನಮ್ಮ ರಾಜ್ಯದಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಇದ್ದಂಥ ಸಹಕಾರ ಸಂಘಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡಿಲ್ಲ. ಅವು ೨೨ ಸಾವಿರಕ್ಕೂ ಜಾಸ್ತಿ ಇವೆ. ಇವೊತ್ತು ಆ ಸಂಖ್ಯೆಯನ್ನು ಕೆಳಗೆ ಇಳಿಸತಕ್ಕದ್ದನ್ನು ಪುನರ್‌ಸಂಘಟನೆ ಮಾಡತಕ್ಕದ್ದರಲ್ಲಿ ಮಾಡಿದ್ದಾರೆ. ಇವೊತ್ತು ಸಹಕಾರ ಸಂಘಗಳು ತಾವು ನಿರೀಕ್ಷಿಸಿದ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡುವುದೇ ಮುಖ್ಯವಾದ ಗುರಿಯಾಗಿರಬೇಕು ಎಂದು ಎಲ್ಲರ ಅಪೇಕ್ಷೆ. ಆದರೆ ವಾಸ್ತವಸ್ಥಿತಿ ಬಹು ಸಂಖ್ಯೆಯಲ್ಲಿ ಸಹಕಾರ ಸಂಘಗಳು ಕೆಲಸ ನಿರ್ವಹಿಸುತ್ತಾ ಇರಲಿಲ್ಲ. ವೈಯಾಬಲ್ಲ ಎಂದು, ಈ ಕೊರತೆ ನೀಗಿಸುವ ಒಂದು ಉದ್ದೇಶ ಇಟ್ಟುಕೊಂಡು ಪುನರ್‌ಸಂಘಟನೆ ಮಾಡುವ ಉದ್ದೇಶ ಮಾಡಿದರು. ಈಗ ಮಾಡತಕ್ಕ ಕೆಲಸದಲ್ಲಿ ಅವರು ಒಂದು ನಿರ್ದೇಶ ಅಂಶಗಳನ್ನು ಇಟ್ಟುಕೊಂಡಿದ್ದಾರೆ. ಆ ಆಧಾರದ ಪ್ರಕಾರ ಇವರು ಆ ಕೆಲಸ ಮಾಡಲಿಲ್ಲ ಎನ್ನುವುದೇ ನನಗೆ ಇರತಕ್ಕ ದೊಡ್ಡ ಅತಂಕ. ಈಗ ವಿರೋಧಪಕ್ಷದವರು ಹೇಳಿದಂಥ ಸೂಚನೆಗಳನ್ನು ಅಂಗೀಕರಿಸಿ ಹೊಸ ಸದಸ್ಯರನ್ನು ನೇಮಕ ಮಾಡತಕ್ಕದ್ದನ್ನು ಮಾಡಬೇಕು ಎಂದು ಮಾಡಿದ್ದಾರೆ ಇದು ಒಂದು ಭಾಗವಾಗುತ್ತದೆ. ಈಗ ಒಟ್ಟು ರಾಜ್ಯದ ಚಿತ್ರದಲ್ಲಿ ಲೆಕ್ಕಹಾಕಿದರೆ ಪುನರ್ ಸಂಘಟನೆ ಮಾಡಿರತಕ್ಕ ಕೆಲಸ ಏನು ಇದೆ ಅದು ಸಮರ್ಪಕವಾಗಿ ಆಗಿಲ್ಲ ಅದನ್ನು ಇನ್ನಷ್ಟು ಶುದ್ಧೀಕರಣ ಮಾಡಬೇಕು ಎಂದು ಹೇಳುತ್ತೇನೆ. ಈಗ ಇವರು ಆರು ಸೂತ್ರಗಳನ್ನು ಇಟ್ಟುಕೊಂಡಿದ್ದಾರೆ. ಆ ಸೂತ್ರಗಳನ್ನು ಮಾತ್ರ ಹೇಳುತ್ತೇನೆ. ಈ ಸೂತ್ರಗಳಲ್ಲಿ ಕೆಲವು ಮಾರ್ಪಾಡು ಮಾಡಬೇಕಾಗುತ್ತದೆ. ಇವೊತ್ತು ನಾವು ಸಹಕಾರ ಸಂಘಗಳನ್ನು ನಂಬಿಸಿ ರಾಜಕೀಯದಲ್ಲಿ ಬದುಕಬೇಕಾಗಿಲ್ಲ. ಇದು ಪ್ರಾಸಂಗಿಕವಾಗಿ ಬರುತ್ತದೆ. ನಂತರ ಹೋಗುತ್ತದೆ. ಭ್ರಷ್ಟಾಚಾರದಲ್ಲಿ ಇರತಕ್ಕವರು ನಮ್ಮ ಸ್ನೇಹಿತರು ಇದ್ದಾರೆ, ಯಾರೂ ಭ್ರಷ್ಟಾಚಾರದಲ್ಲಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಇವರು ಆರು ಸೂತ್ರಗಳನ್ನು ಏನು ಇಟ್ಟುಕೊಂಡಿದ್ದಾರೆ ಆ ಸೂತ್ರದ ಆಧಾರದ ಮೇಲೆ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಮಾಡತಕ್ಕ ಕೆಲಸದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ ನಿಸ್ಸಹಾಯಕರಾಗಿದ್ದಾರೆ. ಇದು ರಾಜಕಾರಣಿಗಳ ಒತ್ತಡದಿಂದ ತುರ್ತುಪರಿಸ್ಥಿತಿ ಕಾಲದ ಅವಧಿಯಲ್ಲಿ ನಡೆದಿದೆ. ಆಗ ಬೇರೆಯವರಿಗೆ ಹೇಳಲಿಕ್ಕೆ ಬಾಯಿ ಇರಲಿಲ್ಲ. ಮನುಷ್ಯರಾಗಿದ್ದರೂ ಮೂಕ ಪ್ರಾಣಿಗಳಂತೆ ಬದುಕುತ್ತಿದ್ದರು, ಆಗ ಇದನ್ನು ಮಾಡಿದರು, ಆಗ ನಾವು ಕೂಡ ಮೂಕ ಪ್ರೇಕ್ಷಕರಾಗಿ ಇದ್ದೆವು. ಆಗ ಯೂತ್‌ಕಾಂಗ್ರೆಸ್‌ನವರು ಎಲ್ಲರೂ ಸೇರಿಕೊಂಡು ಡೆಪ್ಯುಟಿ ರಿಜಿಸ್ಟ್ರಾರರವರ ಮೇಲೆ ಒತ್ತಡ ತರುತ್ತಿದ್ದರು. ಅವರು ಏನು ಹೇಳುತ್ತಿದ್ದರು ಎಂದರೆ ನಾವು ಹೇಳಿದ ಹಾಗೆ ಮಾಡದೇ ಇದ್ದರೆ ಏನು ಎಂದು ತಿಳಿದುಕೊಂಡಿದ್ದೀರಿ, ಎಂದು ಹೇಳುತ್ತಿದ್ದರು. ಆ ಸಂದರ್ಭದಲ್ಲಿ ನಾವು ಏನಾದರೂ ಹೇಳಲಿಕ್ಕೆ ಹೋದರೆ ಅವರ ಎದುರಿನಲ್ಲಿ ಮಾತನಾಡಬೇಡಿ ಚೀಟಿ ಬರೆದು ಕಳುಹಿಸಿ ಕೊಡಿ ಆಮೇಲೆ ಮಾತನಾಡೋಣ ಎಂದು ಹೇಳುತ್ತಿದ್ದರು. ಅವರು ನಿರ್ಭೀತರಾಗಿ ಕೆಲಸ ಮಾಡತಕ್ಕ ಸ್ಥಿತಿಯಲ್ಲಿ ಇರಲಿಲ್ಲ, ಅಷ್ಟೊಂದು ನಿಸ್ಸಹಾಯಕರಾಗಿದ್ದರು. ಇವೊತ್ತು ಆ ಭಯದ ವಾತಾವರಣ ಹೋಗಿ ಎಲ್ಲರೂ ಹೇಳಲಿಕ್ಕೆ ಅವಕಾಶ ಸಿಕ್ಕಿದೆ ಅವರು ಏನು ಏನು ತಮ್ಮ ಸೂತ್ರಗಳನ್ನು ಇಟ್ಟುಕೊಂಡು ಮಾಡಬೇಕು ಎಂದು ಹೇಳಿದ್ದರು. ಅವರು ಭಯದ ಒಂದೇ ಕಾರಣದಿಂದ ಮಾಡಲಿಕ್ಕೆ ಆಗಲಿಲ್ಲ, ಅದನ್ನು ಈಗಲಾದರೂ ಸರಿಪಡಿಸಿ ಎಂದು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಧಾರವಾಡದ ಮುಖಂಡರಾದ ಶ್ರೀಮಾನ್ ನಾಯ್ಕರ್ ಅವರು ಬಂದರು. ಇವರು ಒಂದು ಕಡೆಗೆ ಎಳೆಯುವುದಕ್ಕೆ ಮಾಡಿದರು ಮತ್ತೊಂದು ಕಡೆಗೆ ಕೆ. ಎಚ್. ಪಾಟೀಲರು ಎಳೆಯುವುದಕ್ಕೆ ಮಾಡಿದರು.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಅಷ್ಟು ದೂರ ಹೋದರೆ ಹೇಗೆ ? ಇವರು ಏಕ್ಸ್‌ರೆ ಏನಾದರೂ ಹಾಕಿಕೊಂಡಿದ್ದಾರೆ ಏನು ? ನಾನು ಸ್ವಲ್ಪ ನೋಡಿದ ಮೇಲೆ ಮಾಡಿರತಕ್ಕ ನನ್ನ ತೀರ್ಮಾನವೇ ಹೊರತು, ಮಾನ್ಯ ಮಂತ್ರಿಗಳಾದ ಕೆ. ಎಚ್. ಪಾಟೀಲರವರಾಗಲಿ, ಮಾನ್ಯ ಮಂತ್ರಿಗಳಾದ ನಾಯ್ಕರ್ ಅವರಾಗಲಿ, ಅಥವಾ ಮಾನ್ಯ ಮುಖ್ಯ ಮಂತ್ರಿಗಳಾಗಲಿ ಹೇಳಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಿದ್ದರೆ ನಮ್ಮ ಹಂತದಲ್ಲೇ ನಿಂತಿದ್ದರೆ ನಾನು ಅನುಮಾನ ಮಾಡಲಿಕ್ಕೆ ಅವಕಾಶ ಇರಲಿಲ್ಲ. ಇದುವರೆಗೆ ಆಗದೆ ಇರುವ ಕಾರಣ ಆರು ಸೂತ್ರಗಳನ್ನು ಇಟ್ಟುಕೊಂಡದ್ದು.

(i) Each society should cover 5,000 acres of gross cultivated area.

(ii) The society should have a minimum short term lending potential to the extent of Rs. 2 lakhs.

(iii) The area of operation should be as far possible not exceeding redius of 8 Kms. from headquaters of the society.

(iv) There should normally be not more than one such society in a village.

(v) As far as possible there should not be overlapping in the area of operation of Co-operative Societies.

(vi) Each society should be capable of serving atleast 600 families. (In case of Co-operative Societies in Hilly Tracts and inaccessible area, the above norms may be relaxed to the extent necessary. ಈಗ ೨ ಲಕ್ಷ ರೂಪಾಯಿ ಕೊಡುವುದನ್ನು ಇಟ್ಟುಕೊಂಡಿದ್ದಾರೆ. ೫ ಸಾವಿರ ಎಕರೆ ಇರಬೇಕು ಎಂದು ಮಾಡಿದರು ಎಲ್ಲಾ ಸೊಸೈಟಿಯವರು ರೀ ಆರ್ಗನೈಜೇಷನ್ ಮಾಡಿಲ್ಲ. ಇವೊತ್ತು ನಮ್ಮ ಕಡೆ ಅಡಿಕೆ ಬಾಗಾಯ್ತು ಇದೆ. ಒಂದು ಎಕರೆಗೆ ನಾರ್ಮಲ್ ಕ್ರಾಪ್ ಲೋನ್ ೫ ಸಾವಿರ ರೂಪಾಯಿ ಕೊಡುತ್ತಾರೆ. ಅಲ್ಲಿ ೨೫ ಜನರು ಷೇರು ಹೋಲ್ಡರ್ಸ್ ಇದ್ದರೆ ಒಬ್ಬೊಬ್ಬರದು ಎರಡೆರಡು ಎಕರೆ ಎಂದರೆ ೫೦ ಎಕರೆ ಆಯಿತು.

ಸ್ವಾಮಿ, ಇನ್ನು ೮ ಕಿಲೋ ಮೀಟರ್ ರೇಡಿಯಸ್ ಎಂದು ನಿಗದಿ ಮಾಡಿದ್ದೀರಿ. ಮಲೆನಾಡು ಪ್ರದೇಶದಲ್ಲಿ, ಗುಡ್ಡಗಾಡು ಪ್ರದೇಶದಲ್ಲಿ ಈ ಅಂತರವನ್ನು ಕಡಿಮೆ ಮಾಡಿದ್ದೀರಿ. ಇವತ್ತು ಈ ಮಲೆನಾಡು ಪ್ರದೇಶದಲ್ಲಿ ಸಹಕಾರ ಸಂಘಗಳ ಮೂಲಕ ಹಂಚುವ ಸಕ್ಕರೆ, ಸೀಮೆ ಎಣ್ಣೆ, ಬಟ್ಟೆ ಮುಂತಾದುವುಗಳನ್ನು ಹೆಂಗಸರು, ಮಕ್ಕಳು ತರುವಂತೆ ಅನುಕೂಲವಾಗಿರಬೇಕು. ಆದುದರಿಂದ ಈ ಸಹಕಾರ ಸಂಘಗಳ ವಿಸ್ತೀರ್ಣದ ದೂರ ಇಷ್ಟೇ ಇರಬೇಕೆಂದು ಏನು ನಿಗದಿ ಮಾಡಿದ್ದೀರಿ ಅದನ್ನು ದಯವಿಟ್ಟು ಕಡಿಮೆ ಮಾಡಬೇಕು. ತಾವು ಈ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡುವ ಸಂದರ್ಭದಲ್ಲಿ ಈ ಸೂತ್ರಗಳನ್ನು ಅನುಸರಿಸಿಲ್ಲ. ನಮ್ಮ ರಾಜ್ಯದಲ್ಲಿ ಈ ಸಹಕಾರ ಸಂಘಗಳನ್ನು ಸರಿಯಾಗಿ ಪುನರ್ವಿಂಗಡನೆ ಮಾಡದೆ ಇರುವುದರಿಂದ ಸುಮಾರು ೮೦೦-೯೦೦ ರಿಟ್ ಪಿಟಿಷನ್‌ಗಳು ಬಂದಿವೆ. ಇವಕ್ಕೆ ಶ್ರೇಷ್ಠ ನ್ಯಾಯಾಲಯದಿಂದ ಸ್ಟೇ ಬಂದಿದೆ. ಇವುಗಳನ್ನು ಬಿಟ್ಟು ಇನ್ನುಳಿದಿರುವ ಸಹಕಾರ ಸಂಘಗಳಿಗಾದರೂ ಚುನಾವಣೆಗಳನ್ನು ಮಾಡಿಲ್ಲ ಇದರ ಬಗ್ಗೆ ಇಷ್ಟೊಂದು ಜನ ಅತೃಪ್ತರಾಗಿರಬೇಕಾದರೆ ಇದರಲ್ಲಿ ಏನೋ ಲೋಪ ಇರಬಹುದು. ಇದನ್ನು ಏತಕ್ಕೆ ಸರಿಪಡಿಸಿಲ್ಲ.

SRI K H. RANGANATH.—I am sorry for the interruption. It is not fair on my part. ಆದರೂ ಹೇಳಬೇಕಾಗಿದೆ. ಈಗ ರಿಟ್ ಹೋಗಿರುವ ಸಹಕಾರ ಸಂಘಗಳು ಏನಿವೆ ಅವುಗಳಿಗೆ ಹಣ ಕೊಡಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಚುನಾವಣೆ ವಗೈರೆ ಮಾಡಿಕೊಳ್ಳುವುದಕ್ಕೆ ನಮ್ಮ ನಿರ್ಬಂಧ ಏನೂ ಇಲ್ಲ. ನಾವು ಎಲ್ಲಿ ನಿರ್ಬಂಧವನ್ನು ಹಾಕಿದ್ದೇವೆಂದರೆ, ತಾಲ್ಲೂಕು ಬೋರ್ಡ್ ಸೊಸೈಟಿಗಳಲ್ಲಿ ಮೆಂಬರ್ಸ್ ಆಗಿದ್ದರೆ ಅದಕ್ಕೆ ಜೂನ್‌ವರೆಗೆ ಎಂದು ಮಾಡಿದ್ದೆವು, ಈಗ ಅದನ್ನು ಸೆಪ್ಟೆಂಬರ್‌ರವರೆಗೆ ಎಂದು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಹಕಾರ ಸಂಘಗಳಲ್ಲಿ ಡಿಫಾಲ್ಟರ್ಸ್ ಆದವರನ್ನು ತೆಗೆದುಹಾಕುವುದಕ್ಕೆ ಅವಕಾಶ ಇದೆ. In a working system these are all the obstacles coming in the way of normal functions of the society. He must know the preliminary legal things when he becomes the Joint Registrar. Recorganisation is one aspect. In case any Director becomes a defaulter, the Joint Director should see that he is removed and some-

body elre is put in his place....ಈ ಸಹಕಾರ ಸಂಘಗಳ ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕಾಗಿ ಈ ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಜಾಯಿಂಟ್ ಡೈರೆಕ್ಟರ್‌ಗಳು ಈ ಸಹಕಾರ ಸಂಘಗಳ ಮೇಲೆ ತಮ್ಮ ಹತೋಟಿಯನ್ನು ಇಟ್ಟುಕೊಂಡು ಕೆಲಸ ಮಾಡುವುದಕ್ಕಾಗುತ್ತಿಲ್ಲ. ದಿನನಿತ್ಯದ ಕೆಲಸಕಾರ್ಯಗಳ ಬಗ್ಗೆ ಇಷ್ಟು ದೂರುಗಳು ಇರುವುದರಿಂದ ಇದನ್ನೆಲ್ಲಾ ಬಗೆಹರಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ

ಇನ್ನು ನಿಮ್ಮ ಸರ್ಕಾರದವರು ಕೊಟ್ಟಿರುವಂಥ ವರದಿಯನ್ನು ನೋಡಿದರೆ ಸುಮಾರು ೩೯೦ ಕೋಟಿ ರೂಪಾಯಿಯಷ್ಟು ಅಗತ್ಯತೆಗಳನ್ನು ವ್ಯವಸಾಯಗಾರರಿಗೆ ಪೂರೈಸಬೇಕಾಗಿದೆ ಇವತ್ತಿನವರೆಗೆ ತಾವು ಪೂರೈಸಿರತಕ್ಕದ್ದು ಕೇವಲ ೨೦೦ ಕೋಟಿ ರೂಪಾಯಿಗಳು ಮಾತ್ರ. ಕನ್‌ಸಂಪ್ಷನ್ ಕ್ರೆಡಿಟ್ ಎಂದು ೬ ಕೋಟಿ ೩೫ ಲಕ್ಷ ರೂಪಾಯಿಗಳನ್ನು ತಾವು ಒದಗಿಸಿಕೊಟ್ಟಿದ್ದೀರಿ. ಇವತ್ತು ಅವರನ್ನೆಲ್ಲಾ ಪುನರ್ ಸಂಘಟನೆ ಮಾಡಿದ್ದೀರಿ. ಹಿಂದೆ ಇದ್ದುದಕ್ಕಿಂತಲೂ ಈಗ ವಿಸ್ತಾರಗೊಳಿಸಿದ್ದೀರಿ. ವ್ಯವಸಾಯಗಾರರಲ್ಲದವರೂ ಕೂಡ ಆರ್ಟಿಸಾನ್ ಸಹಕಾರ ಸಂಘದಲ್ಲಿ ಸದಸ್ಯರಾಗಬಹುದು. ಹಿಂದೆ ಮಿಡಿಯಂ ಟರ್ಮ್ ಲೋನ್, ಲಾಂಗ್ ಟರ್ಮ್ ಲೋನ್ ಎಂದು ಸಾಲ ಕೊಡುವುದಕ್ಕೆ ಅವಕಾಶ ಇರುತ್ತಿತ್ತು ಈಗ ರೈತನಾದವನು, ಎತ್ತುಗಳನ್ನು ಕೊಳ್ಳುವುದಕ್ಕೆ, ಗಾಡಿಯನ್ನು ಕೊಳ್ಳುವುದಕ್ಕೆ, ಜಮೀನು ಕೊಳ್ಳುವುದಕ್ಕೆ ಇನ್ನೂ ಮುಂತಾದುವುಕ್ಕೆ ಹಣವನ್ನು ಒದಗಿಸಿ ಕೊಟ್ಟಿದ್ದೇವೆಂದು ಹೇಳುತ್ತೀರಿ ಆದರೆ ರೈತರನ್ನು ಪುನರ್ ಸಂಘಟನೆ ಮಾಡುವ ಪ್ರಯತ್ನದಲ್ಲಿ ಸಹಕಾರ ಸಂಘಗಳನ್ನು ಮಾಡಿ ವ್ಯವಸಾಯಗಾರರಿಗೆ ಸೌಲಭ್ಯಗಳನ್ನು ಒದಗಿಸಿ ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂಬುದನ್ನು ಹೇಳಬಯಸುತ್ತೇನೆ, ಆದ್ದರಿಂದ ಈಗಲಾದರೂ ಇದರ ಕಡೆಗೆ ಸರ್ಕಾರ ಗಮನಹರಿಸಬೇಕೆಂದು ಒತ್ತಾಯಪಡಿಸುತ್ತೇನೆ.

ಇವತ್ತು ನಮ್ಮ ರಾಜ್ಯದಲ್ಲಿ ಋಣ ಪರಿಹಾರ ಕಾಯಿದೆ ಎಂದು ತಾವು ಜಾರಿಗೆ ತಂದಿರಿ. ಇದನ್ನು ನಾವೂ ಕೂಡ ಸ್ವಾಗತ ಮಾಡಿದ್ದೇವೆ. ಆದರೆ ಈ ಕಾಯಿದೆ ಬಂದಿದ್ದರಿಂದ ಸಣ್ಣ ಪುಟ್ಟವರಿಗೆ, ಹಳ್ಳಿಗಾಡಿನ ರೈತರಿಗೆ ಯಾರೂ ಸಾಲ ಕೊಡುತ್ತಿಲ್ಲ. ಇದರಿಂದಾಗಿ ಜನಗಳಿಗೆ ಬಹಳ ತೊಂದರೆಯಾಗಿದೆ. ಇವತ್ತು ತಾವು ಗ್ರಾಮಾಂತರ ಪ್ರದೇಶದಲ್ಲಿ ಇದಕ್ಕೆ ಏನಾದರೂ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕಾದ ಜವಾಬ್ದಾರಿಯನ್ನು ಸರ್ಕಾರದವರು ಮಾಡಬೇಕು. ಶೋಷಣೆಗೆ ಒಳಗಾಗಿರುವವರನ್ನು ವಿಮುಕ್ತರನ್ನಾಗಿ ಮಾಡಬೇಕು. ಆದರೆ ಜವಾಬ್ದಾರಿಯನ್ನು ಹೊತ್ತ ಸರ್ಕಾರ ಈ ಕೆಲಸವನ್ನು ಮಾಡಿಲ್ಲ.

ಮಾನ್ಯ ಅಧ್ಯಕ್ಷಿಣಿಯವರೆ, ಸರ್ಕಾರದವರು ಕಾನ್‌ಸಂಪ್ಷನ್‌ಕ್ರೆಡಿಟ್ ಎಂದು ೧೦೦–೧೫೦ ರೂಪಾಯಿಗಳನ್ನು ಕೊಡುತ್ತೇವೆಂದು ಏನು ಹೇಳಿದ್ದಾರೆ. ಆ ಹಣ ಇವತ್ತಿನವರೆಗೂ ಜನಗಳಿಗೆ ಮುಟ್ಟಿಲ್ಲ. ಇವತ್ತು ಯಾವ ಪರಿಸ್ಥಿತಿ ಇದೆ ಎಂದರೆ ಒಬ್ಬ ರೈತನ ಬಳಿ ಇದ್ದ ಎರಡು ಎತ್ತುಗಳಲ್ಲಿ ಒಂದು ಎತ್ತು ಸತ್ತು ಹೋದರೆ ಆ ಎತ್ತಿನ ಜೊತೆಗೆ ಇನ್ನೊಂದು ಎತ್ತನ್ನು ತರಬೇಕಾದರೆ ಅವನು ಸಾಹುಕಾರನ ಹತ್ತಿರ ಹೋಗಿ ಕೈ ಜೋಡಿಸಿ ನಿಲ್ಲಬೇಕಾಗಿದೆ. ಯಾರಾದರೂ ಒಬ್ಬನ ಮನೆ ಬಿದ್ದು ಹೋಗಿದ್ದರೆ ಅದನ್ನು ರಿಪೇರಿ ಮಾಡಿಕೊಳ್ಳುವುದಕ್ಕೆ ಇನ್ನೊಬ್ಬನ ಹತ್ತಿರ ಹೋಗಿ ಕೇಳಬೇಕಾಗಿದೆ. ಈ ವ್ಯವಸಾಯಗಾರರ ಉದ್ದೇಶಗಳನ್ನೆಲ್ಲಾ ಪೂರೈಸಬೇಕಾದರೆ ಸಹಕಾರಸಂಘಗಳಿಗೆ ಬೇಕಾದ ಕ್ರೆಡಿಟ್ ಫೆಸಿಲಿಟೀಸ್‌ನ್ನು ವಿಸ್ತಾರ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ, ಇದರಿಂದ ಸಹಕಾರ ಸಂಘಗಳೂ ಕೂಡ ಒಂದು ಶೋಭಾಯಮಾನವಾಗಿರುತ್ತದೆ. ತಾವು ಈ ಸಹಕಾರ ಸಂಘಗಳನ್ನು ಬರೀ ಪುನರ್ವಿಂಗಡನೆ ಮಾಡಿದರೆ ಮಾತ್ರ ಏನೂ ಪ್ರಯೋಜನವಾಗುವುದಿಲ್ಲ ಎನ್ನುವ ಮಾತನ್ನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈ ಸಹಕಾರ ಸಂಘಗಳ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇನೆ. ಇದು ಎಷ್ಟು ಹದಗೆಟ್ಟಿದೆ ಎಂಬುದನ್ನು ಹೇಳುವುದಾದರೆ ಬಹುಶಃ ಇದನ್ನು ರಾಮಾಯಣ, ಮಹಾಭಾರತದ ರೀತಿಯಲ್ಲಿಯೇ ಹೇಳಬಹುದಾಗಿದೆ. ಇಲ್ಲಿ ನಡೆಯುವುದು ಏನು ಎಂಬುದು ಮಾನ್ಯ ಸಚಿವರಿಗೂ ಕೂಡ ಗೊತ್ತಿದೆ. ಇದರಲ್ಲಿರುವ ನ್ಯೂನತೆಗಳನ್ನೆಲ್ಲಾ ತೊಡೆದುಹಾಕುವುದಕ್ಕೆ ಮಾನ್ಯ ಸಹಕಾರ ಸಚಿವರು ಕ್ರಮ ಕೈಗೊಳ್ಳುತ್ತಾರೆಂಬ ಒಂದು ನಂಬಿಕೆ ನನಗೆ ಇತ್ತು. ಆದರೆ ಮಾನ್ಯ ಸಚಿವರು ಅದೇನನ್ನೂ ಮಾಡಲಿಲ್ಲ. ಈ ಸಹಕಾರಿ ಕ್ಷೇತ್ರಕ್ಕೇ ಒಂದು ಪ್ರತ್ಯೇಕವಾದ ಆಡಿಟ್ ಇಲಾಖೆ ಇರಬೇಕೆಂದು ಹೇಳಿದ್ದೆ. ಆದರೆ ಅದನ್ನು ಕೂಡ ಮಾಡಿಲ್ಲ. ಈ ಕ್ಷೇತ್ರಕ್ಕೆ ಸ್ವತಂತ್ರವಾದ ಒಂದು ಆಡಿಟ್ ಇಲಾಖೆ ಇಲ್ಲದೇ ಹೋದರೆ ಸಹಕಾರಿ ಕ್ಷೇತ್ರದಲ್ಲಿ ತಿನ್ನುವವರಿಗೆ ಒಂದು ಹುಲ್ಲುಗಾವಲು ಇದ್ದಂತಾಗುತ್ತದೆ. ಈ ಇಲಾಖೆಗಳಲ್ಲಿ ಯಾವರೀತಿ ಆಡಿಟ್ ಆಗುತ್ತಿದೆ ಎನ್ನುವ ಬಗ್ಗೆ ಒಂದು ಮಾತು ಹೇಳುವುದಾದರೆ ೧೯೭೫–೭೬ರಲ್ಲಿ ೨೧ ೭೬೧ ಸೊಸೈಟಿಗಳ ಪೈಕಿ ಆಡಿಟ್ ಆಗಿರುವುದು ೭,೫೩೧ ಸೊಸೈಟಿಗಳು ಮಾತ್ರ. ಅಂದರೆ ಶೇಕಡ ೩೪.೬ ರಷ್ಟಾಯಿತು. ಪ್ರತಿ ವರ್ಷದ

ಲೆಕ್ಕಪತ್ರಗಳನ್ನು ಆಯಾಯ ವರ್ಷದ ಜನರಲ್‌ಬಾಡಿ ಮೀಟಿಂಗ್ ಆಗುವುದಕ್ಕೆ ಮುಂಚೆ ಆಡಿಟ್ ಮಾಡುವ ಒಂದು ವ್ಯವಸ್ಥೆ ಮಾಡಬೇಕು ಮತ್ತು ಇದು ಅಟಾನಮಸ್ ಅಥಾರಿಟಿ ಹೊಂದಿರುವ ಆಡಿಟರ್ ಜನರಲ್‌ರವರ ನೇತೃತ್ವದಲ್ಲಿ ಆಡಿಟ್ ಆಗಬೇಕು. ಈ ಸಹಕಾರಿ ಕ್ಷೇತ್ರದಲ್ಲಿರುವ ಹುಳುಕನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಅವರು ಸಹಕಾರ ಸಂಘಗಳಲ್ಲಿ ತಿನ್ನುವವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆಂದು ಹೇಳಬಯಸುತ್ತೇನೆ.

ಸಹಕಾರಿ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದರ ಬಗ್ಗೆ ಉದಾಹರಣೆ ಕೊಡುವುದಾದರೆ ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ಒಂದು ಸೊಸೈಟಿಯಲ್ಲಿ ಅನೇಕ ಲೋಪದೋಷಗಳು ಕಂಡುಬಂದು ಫಿರ್ಯಾದು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದಕ್ಕೆ, ಜಾಯಿಂಟ್ ರಿಜಿಸ್ಟ್ರಾರ್‌ರವರಿಗೆ ಕಾಗದ ಬರೆದಿದ್ದೇವೆ. ಆಡಿಟ್ ರಿಪೋರ್ಟ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದರು. ಆಡಿಟ್ ರಿಪೋರ್ಟ್ ಪ್ರಕಾರವಾಗಿ ಈ ರೀತಿ ಬರೆದಿರುತ್ತಾರೆ. "The Assistant Registrar of Co-operative Societies, Sagar, has been requested to intimate the action to effect the recoveries of the amount misappropriated as per the audit report" ಎಂದು ಕೊಟ್ಟಿದ್ದಾರೆ. ನಾನು ತಿಳಿದುಕೊಂಡೆ ಕಳೆದ ನಾಲ್ಕು ತಿಂಗಳಲ್ಲಿ ಏನಾದರೂ ಕ್ರಮ ಕೈಗೊಂಡಿದ್ದಾರೆಂದು. ಆದರೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತು ಬರೆದಿದ್ದಾರೆ. ಆದ್ದರಿಂದ ಅವರ ಆಸಕ್ತಿ ಬಹುಶಹ ಎಷ್ಟರಮಟ್ಟಿಗೆ ಇದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇವರಲ್ಲಿ ಒಂದು ಎನ್‌ಕ್ವಯರಿ ಇನ್‌ಸ್ಪೆಕ್ಷನ್ ವಿಂಗ್ ಎಂದು ಮಾಡಿಕೊಂಡಿದ್ದೇವೆಂದು ಹೇಳಿದ್ದಾರೆ. ಇನ್‌ಸ್ಪೆಕ್ಷನ್ ಮತ್ತು ಎನ್‌ಕ್ವಯರಿ ಪ್ರತ್ಯೇಕ ವಿಭಾಗ ಏನು ಇದೆ ಇದು ತೀರ ಅಸಮರ್ಪಕವಾಗಿ ಕೆಲಸ ಮಾಡುತ್ತಿದೆ. ಶಕ್ತಿಹೀನವಾಗಿದೆ ಎಂದು ಅನಿವಾರ್ಯವಾಗಿ ಹೇಳಲೇಬೇಕಾಗಿದೆ. ಏತಕ್ಕೆಂದರೆ ಈವತ್ತಿನ ದಿವಸ ವರದಿಯಲ್ಲಿ ಎಷ್ಟು ಅಕ್ರಮವಾಗಿ ನಡೆದಂಥ ಸಹಕಾರಿ ಸಂಘಗಳನ್ನು ಪತ್ತೆ ಹಚ್ಚಿದ್ದಾರೆಂದು ಹೇಳಿಲ್ಲ. ಅಷ್ಟೇ ಏತಕ್ಕೆ ಬೆಂಗಳೂರು ವಿಧಾನಸೌಧದ ತೀರ ಸಮೀಪದಲ್ಲಿರತಕ್ಕಂಥ ಕೋ-ಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್ ಆಗಲಿ, ಕಾರ್ಪೊರೇಷನ್ ಸ್ಟೀಪರ್ಸ್, ಪೌರಕಾರ್ಮಿಕರ ಸಹಕಾರ ಸಂಘದ್ದೆ ಆಗಲಿ, ಆರ್ಟಿಸ್ಟ್ ಸಹಕಾರಿ ಸಂಘದ್ದೆ ಆಗಲಿ ಇದರಲ್ಲಿ ಆಗಿರತಕ್ಕಂಥ ಅಕ್ರಮಗಳನ್ನು ಪತ್ತೆಹಚ್ಚಿದ್ದೇವೆಂದು ವರದಿಯಲ್ಲಿ ಹೇಳಿಲ್ಲ. ಆದ್ದರಿಂದ ಈ ವಿಶೇಷ ಸೆಲ್ ಎಂದು ಏನು ಇದೆ ಇದು ತಪ್ಪಿತಸ್ಥರನ್ನು ಕಂಡುಹಿಡಿಯುವ ಕೆಲಸವನ್ನು ಮಾಡಿಲ್ಲವೆಂದು ಹೇಳಬೇಕಾಗಿದೆ ಇದಲ್ಲದೆ ಕುಂದಾಪುರ ತಾಲ್ಲೂಕಿನಲ್ಲಿ ಶಂಕರನಾರಾಯಣ ಕೋಆಪರೇಟೀವ್ ಬ್ಯಾಂಕ್‌ನಲ್ಲಿ ಇಟ್ಟಿದಂಥ ಕೆಲವು ಆಭರಣಗಳು ಕಳವಾಗಿರುವುದನ್ನು ಈವತ್ತಿನವರೆಗೂ ಪತ್ತೆಹಚ್ಚಲಿಲ್ಲ. ಈ ಸದನದಲ್ಲಿ ಪ್ರಶ್ನೆ ಇನ್ನೂ ಇದೆ ತಪ್ಪಿತಸ್ಥರನ್ನು ಪತ್ತೆಹಚ್ಚಿ ಅವರನ್ನು ಶಿಕ್ಷೆಗೆ ಗುರಿಪಡಿಸುವ ಕೆಲಸ ಈವತ್ತಿನವರೆಗೂ ಮಾಡಿಲ್ಲ.

ಅಧ್ಯಕ್ಷರೆ ನಿಮ್ಮ ಮುಂದೆ ಬಹಳ ವಿಷಾದದಿಂದ ಹೇಳಬೇಕಾಗಿದೆ, ಕರ್ನಾಟಕ ಕೋಆಪರೇಟೀವ್ ಫೆಡರೇಷನ್ ಬಗ್ಗೆ ಸಾರ್ವಜನಿಕ ಲೆಕ್ಕ ಸಮಿತಿಯವರು ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಈ ಸದನದಲ್ಲಿ ನಾವು ನೇರವಾಗಿ ಪ್ರಶ್ನೆಯನ್ನು ಅನೇಕ ಸಾರಿ ಕೇಳಿದ್ದೇವೆ ಆಡಿಟ್ ವರದಿಯ ಆಧಾರದ ಮೇಲೆ ಇದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳು ಇದ್ದಾರೆ, ಮಂತ್ರಿಗಳು ಇದ್ದಾರೆ, ಅವರ ಮೇಲೆ ಈವತ್ತಿನ ವರೆಗೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ ಇದು ಕೂಡ ಗ್ರೋವರ್ ಕಮಿಷನ್ ಮುಂದೆ ಪೂರ್ಣ ತನಿಖೆಗೆ ಒಳಪಟ್ಟಿರುತ್ತದೆ ಮಂತ್ರಿಗಳು ನೇರವಾಗಿ ಇದಕ್ಕೆ ಸಂಬಂಧಪಟ್ಟಿರುವುದರಿಂದ ಸಹಕಾರಿ ಇಲಾಖೆಯ ಅಧಿಕಾರಿಗಳು ಇದಕ್ಕೆ ರಕ್ಷಣೆ ಕೊಟ್ಟಿದ್ದಾರೆ. ಇದರ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಸಮಿತಿಯವರೂ ಕೊಟ್ಟ ವರದಿಯ ಆಧಾರದಮೇಲೆ ಸಂಬಂಧಪಟ್ಟವರಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ಕ್ರಮ ತೆಗೆದುಕೊಳ್ಳದಿರುವುದನ್ನು ನೋಡಿದರೆ ತಲೆತಗ್ಗಿಸಬೇಕಾಗಿದೆ ನಾಚಿಕೆ ಪಡಬೇಕಾಗಿದೆ. ಶ್ರೀಮಾನ್ ರಂಗನಾಥ್‌ರವರು ಸಹಕಾರಿ ಇಲಾಖೆಯ ಜವಾಬ್ದಾರಿಯನ್ನು ಹೊತ್ತ ಮೇಲೆ ಬಹುಶಃ ಇಂಥ ವರದಿ ಅವರ ಕೈಗೆ ಸಿಕ್ಕಿದಾಗ ಯಾರು ಅಪರಾಧಿಗಳು ಇದ್ದಾರೆ ಅವರನ್ನು ನುಚ್ಚುನೂರು ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು ಅವರಿಗೆ ಭೀಮಕಾಯವಿದೆ, ಯಾವುದಕ್ಕೂ ಹಿಂದುಮುಂದು ನೋಡುವುದಿಲ್ಲವೆಂದು ತಿಳಿದುಕೊಂಡಿದ್ದೆವು.

ಶ್ರೀ ಎಚ್. ಡಿ. ದೇವೇಗೌಡ.—ಅವರು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿ ಪ್ರಮೋಷನ್ ಆಗುವುದರಲ್ಲಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರೂ ಕೂಡ ನಪುಂಸಕರಾದರಲ್ಲ ಎಂದು ವ್ಯಥೆಯಾಗುತ್ತಿದೆ. ಇಲಾಖೆಯ ಜವಾಬ್ದಾರಿಯನ್ನು ಹೊತ್ತುಕೊಂಡಮೇಲೆ ಅಲ್ಲಿರತಕ್ಕಂಥ ಹುಳುಗಳನ್ನು ಗುಡಿಸಿ ಹೊರಗೆ ಹಾಕುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಅವರು ರಾಜಕೀಯ ಜಂಜಾಟಕ್ಕೆ ಸಿಕ್ಕಿ ತಮ್ಮ ಶಕ್ತಿಯನ್ನು ಕಳೆದುಕೊಂಡು ನಿಸ್ಸಹಾಯಕರಾಗಿದ್ದಾರೆಂಬುದು ಈವತ್ತು ಹೇಳುವುದಕ್ಕೆ ವ್ಯಥೆಯಾಗುತ್ತದೆ.

SRI H. D. DEVE GOWDA.—They have suspended one Assistant Registrar.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ ಈವತ್ತು ನಮ್ಮ ರಾಜ್ಯದಲ್ಲಿ ಸಾರ್ವಜನಿಕರ ಹಣವನ್ನು......

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೆ ಒಂದು ನಿಮಿಷ ಸದಸ್ಯರು ಈಲ್ಡ್ ಆದರೆ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ಅದೇನೆಂದರೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಒಂದೂವರೆ ಕೋಟಿ ರೂಪಾಯಿ ಅಕ್ರಮ ನಡೆದಿದೆ ಎಂದು ಹೇಳಿದ್ದಾರೆ. ಇಲ್ಲಿಯೇ ಮಂತ್ರಿಗಳೂ ಇದ್ದಾರೆ, ದಯವಿಟ್ಟು ಅವರು ಉತ್ತರ ಕೊಡಬೇಕು. ಫೆಸ್ಟಿಸೈಡ್ಸ್‌ಗಾಗಿ ೩೫ ಲಕ್ಷರೂಪಾಯಿಗಳನ್ನು ಕಾಂಟ್ರರಿ-ಟು-ದಿ ರೆಸಲ್ಯೂಷನ್ ಆಫ್ ದಿ ಬೋರ್ಡ್ ಪರ್ಚೇಸ್‌ಮಾಡಿ ಇದರಲ್ಲಿ ಸುಮಾರು ೧೦-೧೨ ಲಕ್ಷ ರೂಪಾಯಿಗಳಷ್ಟು ನಷ್ಟ ಸಂಭವಿಸಿದೆ. ಕೇವಲ ಕಮಿಷನ್‌ಗೋಸ್ಕರವಾಗಿ ಇದರ ವ್ಯವಹಾರ ನಡೆದಿದೆ. ದಯವಿಟ್ಟು ವಿವರವನ್ನು ತಾವು ಉತ್ತರ ಕೊಡುವಾಗ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ ಈವತ್ತು ಭೂ ಅಭಿವೃದ್ಧಿ ಬ್ಯಾಂಕ್ ಏನು ಇದೆ ಅದು ಕೆಲವು ಉತ್ತಮವಾದ ಕೆಲಸಗಳನ್ನು ಮಾಡುತ್ತಿರುತ್ತದೆ. ಆದರೆ ಅದೇರೀತಿ ಮಧ್ಯೆ ಅದರಲ್ಲಿ ಕೆಲವು ಬಾಧಕವು ಇರುತ್ತದೆ. ಈವತ್ತಿನದಿವಸ ಹೇರಳವಾಗಿ ಹಣವನ್ನು ಸರ್ಕಾರದವರು ಕೊಟ್ಟಿರುತ್ತಾರೆ. ಇದಕ್ಕೆ ಕೊಟ್ಟಿರತಕ್ಕಂಥ ಹಣ ಅನೇಕ ಪ್ರಕರಣಗಳಲ್ಲಿ ಯಾವ ಉದ್ದೇಶಕ್ಕಾಗಿ ಕೊಟ್ಟಿರುತ್ತಾರೆ ಅದಕ್ಕಾಗಿ ಖರ್ಚಾಗುತ್ತಿಲ್ಲ. ಸ್ಥಳೀಯಮಟ್ಟದಲ್ಲಿ ಖರ್ಚುಮಾಡುತ್ತಾ ಇಲ್ಲ. ಬಾವಿಗೆ ಎಂದು ಸಾಲ ಕೊಟ್ಟಿರುತ್ತಾರೆ, ಆದರೆ ಬಾವಿಯನ್ನೇ ತೆಗೆದಿರುವುದಿಲ್ಲ. ಗೇರು ಸಾಗುವಳಿಗೆ ಎಂದು ಕೊಟ್ಟಿರುತ್ತಾರೆ; ಗೇರನ್ನು ಬೆಳೆಸಿರುವುದಿಲ್ಲ. ತೆಂಗಿನಮರ ಬೆಳೆಸಲು ಸಾಲ ಕೊಟ್ಟಿರುತ್ತಾರೆ, ಆದರೆ ತೆಂಗಿನಸಸಿಯನ್ನೇ ನೆಟ್ಟಿರುವುದಿಲ್ಲ. ಪಂಪ್‌ಸೆಟ್ಟುಗಳಿಗಾಗಿ ಪೂರ್ಣ ಸಾಲಪಡೆದಿರುತ್ತಾರೆ ಆದರೆ ಪಂಪ್‌ಸೆಟ್ಟುಗಳನ್ನು ಹಾಕಿರುವುದಿಲ್ಲ. ಹಾಗೇನೇ ಭೂ ಅಭಿವೃದ್ಧಿಪಡಿಸುವುದಕ್ಕಾಗಿ ಸಾಲ ತೆಗೆದುಕೊಂಡಿರುತ್ತಾರೆ. ಆದರೆ ಭೂ ಅಭಿವೃದ್ಧಿಪಡಿಸಿರುವುದಿಲ್ಲ, ಸಾಲ ಮಾತ್ರ ಖರ್ಚಾಗಿರುತ್ತದೆ, ಕೆಲಸಗಳು ಒಂದೂ ಆಗಿರುವುದಿಲ್ಲ. ಈವತ್ತಿನದಿವಸ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಗೆ ಹೋಗಿ ರೆಕಾರ್ಡ್‌ಗಳನ್ನು ತನಿಖೆ ಮಾಡಿ ಸಾಲ ಕೊಟ್ಟಿರುವುದೆಷ್ಟು ಅವರು ಅದನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿರುತ್ತಾರೆಯೇ ಎಂಬುದನ್ನು ಯಾವುದೂ ತನಿಖೆ ಮಾಡಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಕೆಲವೊಂದು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಈವತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರು ಇದ್ದಾರೆ. ಅವರು ದರ್ಬಾರು ಮಾಡೋಣವೆಂದು ಹೊರಟಿದ್ದಾರೆ. ಅವರ ದರ್ಬಾರು ಎಲ್ಲಿಯವರೆಗೆ ಹೋಗಿದೆ ಎಂದರೆ ಬ್ಯಾಂಕಿನಿಂದ ಖರ್ಚುಮಾಡುವುದಕ್ಕೆ ಇರತಕ್ಕಂಥ ಎಲ್ಲ ಸವಲತ್ತುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಹಣವನ್ನು ಯಥೇಚ್ಛವಾಗಿ ಅವರ ಸ್ವಂತ ಮೇಲ್‌ವಿಚಾರಣೆಗೋಸ್ಕರವಾಗಿ ಖರ್ಚುಮಾಡತಕ್ಕಂಥ ಹವ್ಯಾಸವನ್ನು ಇಟ್ಟುಕೊಂಡಿರುತ್ತಾರೆ. ಮಾನ್ಯ ಅಧ್ಯಕ್ಷರೆ ಅವರ ಕೊಠಡಿಗೆ ಇರತಕ್ಕಂಥ ಸೌಭಾಗ್ಯ ಮಾನ್ಯ ಮುಖ್ಯಮಂತ್ರಿಗಳ ಕೊಠಡಿಗೂ ಕೂಡ ಇಲ್ಲ. ಕೆಂಪುಹಸಿರು ಕೊಡತಕ್ಕಂಥ ದೀಪ ಮುಖ್ಯಮಂತ್ರಿಗಳ ಕೊಠಡಿಗೂ ಇಲ್ಲ. ಅವತ್ತು ಮಾನ್ಯ ಹನುಮಂತಯ್ಯನವರು ವಿಧಾನಸೌಧದಲ್ಲಿರುವಾಗ ಹಸಿರು ದೀಪ ಹಾಕಬೇಕು, ಅವರು ಹೊರಗಡೆ ಹೋದಾಗ ಕೆಂಪು ದೀಪ ಹಾಕಬೇಕು ಎಂದು ವಿಚಾರ ಮಾಡಿದ್ದರು. ಈ ವಿಚಾರ ಆಗ ಇದೇ ಸದನದಲ್ಲಿ ಬಂದು ಇದರ ಬಗ್ಗೆ ಚರ್ಚೆಯಾಗಿ ನಂತರ ತೆಗೆದುಹಾಕಲ್ಪಟ್ಟಿತು. ಈವತ್ತಿನ ದಿವಸ ಆ ಭೂ ಅಭಿವೃದ್ಧಿ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ತನ್ನ ಕಾರಿಗೂ ಸಹಿತ ಈ ಹಸಿರು ಬೆಳಕು ಮತ್ತು ಕೆಂಪು ಬೆಳಕಿನ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಾನೆ. ಕಾರು ಹೋಗುವಾಗ ಹಸಿರು ಬೆಳಕನ್ನು ಹಾಕಬೇಕು, ಇಲ್ಲದಿದ್ದರೆ ಕೆಂಪು ಬೆಳಕನ್ನು ಹಾಕಬೇಕು. ಈ ರೀತಿ ಬೆಳಕಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾನೆ. ಅದರ ಜೊತೆಗೆ ಬ್ಯಾಂಕ್‌ಗೋಸ್ಕರ ಇರುವಂಥ ಆ ಕಾರನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಂಡಿದ್ದಾನೆ.

ಶ್ರೀ ಕೊಣಂದೂರು ಲಿಂಗಪ್ಪ.—ಅಲ್ಲಿ ಕೆಂಪು ಬಲ್ಬನ್ನು ಹಾಕಿದರೆ ಡೈರೆಕ್ಟರ್ ಒಬ್ಬರನ್ನು ಬಿಟ್ಟು ಅಧ್ಯಕ್ಷರೂ ಸಹ ಒಳಕ್ಕೆ ಹೋಗುವ ಹಾಗಿಲ್ಲ. ಈ ಒಂದು ಪರಿಸ್ಥಿತಿ ಇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವನ ಸ್ವೇಚ್ಛಾಚಾರ ಎಲ್ಲಿಯವರೆಗೆ ಹೋಗಿದೆ ಎಂದರೆ ಆ ಬ್ಯಾಂಕಿನ ಅಧ್ಯಕ್ಷರು ತಮ್ಮ ಕಛೇರಿಯ ಕೊಠಡಿಗೆ ಕರೆದರೂ ಅವನು ಹೋಗುವುದಿಲ್ಲ. ಅಧ್ಯಕ್ಷರೇ ಅವನ ಕೊಠಡಿಗೆ ಹೋಗಿ ಅವರ ಕೆಲಸವನ್ನು ಮಾಡಿಕೊಂಡು ಬರುವಂಥ ಪರಿಸ್ಥಿತಿ ಬಂದಿದೆ. 'ನಾನು ಹೋಗುವುದಿಲ್ಲ, ಅವರೇ ಬರಲಿ' ಎಂದು ಹೇಳುವ ಮಟ್ಟಕ್ಕೆ ಅವನು ಹೋಗಿದ್ದಾನೆ. ಅವನಿಗೆ ಅಧಿಕಾರದ ಅಹಂಕಾರ ಎಷ್ಟರಮಟ್ಟಿಗೆ ತಲೆಗೆ ಏರಿದೆ ಎಂಬುದನ್ನು ನಾವು ಇದರಿಂದ ಊಹಿಸಬಹುದು. ಸಹಕಾರರಂಗದಲ್ಲಿನ ಒಬ್ಬ ಬ್ಯಾಂಕಿನ ಅಧ್ಯಕ್ಷರು ಎಂದರೆ ಒಬ್ಬ ಮಂತ್ರಿಗಳಿಗೆ ಇರತಕ್ಕಂಥ ಸಮಾನವಾದ ಗೌರವ ಇದೆ. ಅಧ್ಯಕ್ಷರ ಕೈಕೆಳಗೆ ಕೆಲಸಮಾಡತಕ್ಕಂಥ ಮ್ಯಾನೇಜಿಂಗ್ ಡೈರೆಕ್ಟರ್ ಅಧ್ಯಕ್ಷರನ್ನು ಆಳಿನ ರೀತಿಯಲ್ಲಿ ನಡೆಸಿಕೊಳ್ಳುವ ಮಟ್ಟಕ್ಕೆ ಬಂದಿದ್ದಾನೆ ಎಂದರೆ ಸರ್ವೇಸಾಮಾನ್ಯವಾಗಿ ಅವರ ಕೈಗೆ ಸಿಕ್ಕತಕ್ಕಂಥ ಹಣವನ್ನು ಅವನ ಮನೆಯ ಗಾರ್ಡನ್ ಬೆಳೆಸುವುದಕ್ಕೆ ಉಪಯೋಗಿಸಿಕೊಂಡು ಕಚೇರಿಯ ಪ್ಯೂವನ್‌ಗಳನ್ನು ತೋಟದ ಕೆಲಸಕ್ಕೆ ಇಟ್ಟುಕೊಳ್ಳುವುದಕ್ಕೂ ಹಿಂಜರಿಯುವುದಿಲ್ಲ. ಕಚೇರಿಯ ಕಾರನ್ನು ಅವನ ಮನೆಯವರನ್ನು ಅದರಲ್ಲಿ ಕುಳ್ಳಿರಿಸಿಕೊಂಡು ತಿರುಗಾಟ ಮಾಡುವುದಕ್ಕೆ ಉಪಯೋಗಿಸಿಕೊಂಡಿದ್ದಾನೆ. ಒಟ್ಟಿನಲ್ಲಿ ಹೇಳುವುದಾದರೆ ಅಲ್ಲಿರತಕ್ಕಂಥ ಅಧ್ಯಕ್ಷರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾನೆ. ಅವರ ಬಗ್ಗೆ ಕಾಲಿನ ಕಸಕ್ಕಿಂತಲೂ ಕಡಿಮೆಯಾಗಿ ವರ್ತನೆ ಮಾಡುತ್ತಿದ್ದಾನೆ. ಈ ರೀತಿ ಸ್ವೇಚ್ಛಾಚಾರದಲ್ಲಿ ಆಡಳಿತವನ್ನು ನಡೆಸುವುದಕ್ಕೆ ಹೊರಟಿದ್ದಾನೆ. ಆ ಮ್ಯಾನೇಜಿಂಗ್ ಡೈರೆಕ್ಟರನ್ನು ಹತೋಟಿಗೆ ತೆಗೆದುಕೊಳ್ಳದೇ ಹೋದರೆ ಈ ಭೂ ಅಭಿವೃದ್ಧಿ ಬ್ಯಾಂಕ್ ತೊಂದರೆಗೆ ಈಡಾಗಿರುತ್ತದೆ. ಈ ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ, ಹಾಸನ ಜಿಲ್ಲೆಯಲ್ಲಿರತಕ್ಕಂಥ ಈ ಭೂ ಅಭಿವೃದ್ಧಿ ಬ್ಯಾಂಕುಗಳು ಈ ಭಾವಿಯನ್ನು ತೋಡಿಸತಕ್ಕಂಥ ಕೆಲಸವನ್ನು ಯಶಸ್ವಿಯಾಗಿ ಮಾಡಿವೆಯೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಷಯ, ಮಾನ್ಯ ಸಚಿವರು ದಯವಿಟ್ಟು ಈ ಕಡೆ ಲಕ್ಷ್ಯ ಕೊಡಬೇಕು. ಮ್ಯಾನೇಜಿಂಗ್ ಡೈರೆಕ್ಟರುಗಳು ಮಾನ್ಯ ಸಚಿವರಲ್ಲಿಗೆ ನೇರವಾಗಿ ಬಂದು ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುತ್ತಾರೆಂದು ತಿಳಿದು ಬಂದಿದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬಾರದು. ಅಲ್ಲಿ ಅಧ್ಯಕ್ಷರುಗಳು ಇದ್ದಾರೆ. ಏನು ಕೆಲಸ ಆಗಬೇಕಾದರೂ ಅವರ ಮುಖಾಂತರ ಬರಲಿ. ಅವರು ಅಲ್ಲಿಯ ಅಧ್ಯಕ್ಷರನ್ನು ತಿರಸ್ಕಾರ ಮಾಡಿ ನಿಮ್ಮಲ್ಲಿಗೆ ನೇರವಾಗಿ ಬಂದು ಅವರ ಕೆಲಸವನ್ನು ಮಾಡಿಕೊಂಡು ಹೋಗುವುದಾದರೆ ಭೂ ಅಭಿವೃದ್ಧಿ ಬ್ಯಾಂಕ್‌ಗಳು ಮಣ್ಣು ಮುಕ್ಕಬೇಕಾದಂತ ಪರಿಸ್ಥಿತಿ ಬರುತ್ತದೆ ಇದಕ್ಕೆ ತಾವು ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಷಯ ನಾನು ಕೋಲಾರ ಜಿಲ್ಲೆಗೆ ಹೋದಾಗ ನೋಡಿದ್ದು, ಏನೆಂದರೆ ತಾವು ಭಾವಿಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಕನಿಷ್ಟ ೨ ಎಕರೆ ಭೂಮಿ ಇರಬೇಕೆಂದು ಕಡ್ಡಾಯ ಮಾಡಿದ್ದೀರಿ. ಅಲ್ಲಿ ಒಬ್ಬ ರೈತ ಅರ್ಧ ಎಕರೆ ಭೂಮಿ ಇಟ್ಟುಕೊಂಡು ಅದರಲ್ಲಿ ಮಲಬರಿ ಗಿಡಗಳನ್ನು ಬೆಳೆದಿದ್ದಾನೆ. ಅವನಿಗೆ ಭಾವಿ ತೋಡಲು ಸಾಲವನ್ನು ಕೊಟ್ಟಿಲ್ಲ. ಅವನೇ ಭಾವಿಯನ್ನು ತೆಗೆದುಕೊಂಡು ಅರ್ಧ ಎಕರೆಯಲ್ಲಿ ಮಲಬರಿ ಗಿಡಗಳನ್ನು ಬೆಳೆದಿದ್ದಾನೆ. ಅದರಲ್ಲಿ ೩೦೦೦ ರೂಪಾಯಿಗಳ ಉತ್ಪನ್ನವನ್ನು ಮಾಡುತ್ತೇನೆಂದು ಹೇಳುತ್ತಿದ್ದಾನೆ. ಆದ್ದರಿಂದ ನಾನು ಹೇಳುವುದೇನೆಂದರೆ ಯಾವುದೇ ಕ್ರಾಪ್ ಬೆಳೆಯತಕ್ಕಂಥವರಿಗೆ ಭಾವಿಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಕನಿಷ್ಟ ೨ ಎಕರೆ ಭೂಮಿ ಇರಬೇಕೆಂದು ಏನು ನಿಗದಿ ಮಾಡಿದ್ದೀರಿ ಅದನ್ನು ರಿಲ್ಯಾಕ್ಸ್ ಮಾಡಿ ಅರ್ಧ ಎಕರೆ ಇರತಕ್ಕಂಥ ಮನುಷ್ಯನಿಗೂ ಭಾವಿಯನ್ನು ಕೊಟ್ಟರೆ ಪಚ್ಚೆ ಬೆಳೆ ಬೆಳೆದುಕೊಂಡು ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಸಮಗ್ರವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಪ್ರಕಾಶ್‌ನಾರಾಯಣ್ ಮತ್ತು ಮಾನ್ಯ ರಾಮಸ್ವಾಮಿಯವರು ಹರಿಜನಗಿರಿಜನರ ವಿಷಯದಲ್ಲಿ ಜನತಾಪಾರ್ಟಿಯವರಿಗೆ ದ್ವೇಷ ಇದೆ ಎಂಬ ಅರ್ಥ ಬರುವ ರೀತಿಯಲ್ಲಿ ಹೇಳಿದ್ದಾರೆ. ಇವತ್ತು ಈ ಹರಿಜನಗಿರಿಜನರಿಗೆ ಆಗತಕ್ಕಂಥ ಶೋಷಣೆಯನ್ನು ಮುಕ್ತಾಯ ಮಾಡುವುದಕ್ಕೆ ಹೊರಟಾಗ, ಈ ಒಂದು ಹೊಣೆಗಾರಿಕೆ ಸಮಾಜಕ್ಕೆ ಇದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರಿಗೆ ಎಲ್ಲೇ ಅನ್ಯಾಯವಾಗಲಿ ನಾವು ಆ ಅನ್ಯಾಯವನ್ನು ಪ್ರತಿಭಟನೆ ಮಾಡಬೇಕು. ಅವರಿಗೆ ಇರತಕ್ಕಂಥ ಸಮಸ್ಯೆಯನ್ನು ಪರಿಹಾರ ಮಾಡಲು ನಾವೆಲ್ಲರೂ ಸಂಘಟಿತರಾಗಿ ಪ್ರಯತ್ನಪಟ್ಟರೆ ಸಾಧ್ಯವಾಗುತ್ತದೆಯೇ ಹೊರತು ಒಬ್ಬೊಬ್ಬರಲ್ಲೇ ದ್ವೇಷಮಾಡಿಕೊಂಡರೆ ಅದು ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ನಮ್ಮ ಸಂಘಟಿತ ಪ್ರಯತ್ನ ಅವರ ಸಮಸ್ಯೆಗೆ ಪರಿಹಾರವನ್ನು ತಂದುಕೊಡಬಹುದು. ಆದ್ದರಿಂದ ಇದನ್ನು ಗಮನದಲ್ಲಿಟ್ಟುಕೊಂಡರೆ ಮುಂದೆ ಹೇಳತಕ್ಕಂಥ ಅನೇಕ ಮಾತುಗಳನು ಅರ್ಥಪೂರ್ಣವಾಗಿ, ಜವಾಬಾರಿಯುತವಾಗಿ ಹೇಳಬೇಕಾಗುತ್ತದೆಂದು

ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ಬೆಂಗಳೂರಿನಲ್ಲಿ ಈ ಪೌರಕಾರ್ಮಿಕರಿಗೋಸ್ಕರ ಒಂದು ಸಹಕಾರ ಸಂಘ ಇದೆ. ವಿಧಾನಪರಿಷತ್ತಿನ ಸದಸ್ಯರಾದ ಮಾನ್ಯ ಬಿ. ಎ. ನಾರಾಯಣ್ ಅವರು ಅಧ್ಯಕ್ಷರಾಗಿದ್ದಾರೆ. ಇದು ೧೯೬೫ರಲ್ಲಿ ಪ್ರಾರಂಭವಾಗಿದ್ದರೂ ಇವತ್ತಿನವರೆಗೂ ಅಲ್ಲಿ ಜನರಲ್ ಬಾಡಿ ಮೀಟಿಂಗ್ ನಡೆದಿಲ್ಲ. ಇವತ್ತಿನವರೆಗೂ ಅಲ್ಲಿ ಆಡಳಿತ ಮಂಡಳಿಯ ಪುನರ್‌ರಚನೆ ನಡೆದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.— ಅಲ್ಲಿ ಜನರಲ್ ಬಾಡಿ ಮೀಟಿಂಗ್ ಆಗದೇ ಇರುವುದು ಯಾವ ತಾರೀಖಿನಿಂದ ?

ಶ್ರೀ ಕಾಗೋಡು ತಿಮ್ಮಪ್ಪ.— ಆ ಸಹಕಾರ ಸಂಘ ಯಾವತ್ತು ಸ್ಥಾಪನೆಯಾಯಿತೋ ಅವತ್ತಿನಿಂದ ಇಲ್ಲಿಯವರೆಗೆ ಜನರಲ್ ಬಾಡಿ ಮೀಟಿಂಗ್ ಆಗಿಲ್ಲ. ಇವತ್ತು ಕಾರ್ಪೊರೇಷನ್‌ನವರು ಈ ಸಹಕಾರ ಸಂಘದ ಮುಖಾಂತರ ಅಲ್ಲಿರತಕ್ಕಂಥ ಸದಸ್ಯರಿಗೆ ನಿವೇಶನಗಳನ್ನು ಹಂಚಿದ್ದಾರೆ. ಅಲ್ಲದೇ ಈ ನಿವೇಶನದಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಈ ಕಾರ್ಪೊರೇಷನ್‌ನವರು ೫ ಲಕ್ಷ ರೂಪಾಯಿಗಳ ಧನಸಹಾಯವನ್ನು ಮಾಡಿದ್ದಾರೆ. ಈ ನಿವೇಶನಗಳನ್ನು ಹಂಚತಕ್ಕಂಥ ಸಂದರ್ಭದಲ್ಲಿ ಕೊಟ್ಟಿರತಕ್ಕಂಥ ಒಂದು ಪಟ್ಟಿಯನ್ನು ನಾನು ನೋಡಿದ್ದೇನೆ. ಆ ಪಟ್ಟಿಯನ್ನು ನೋಡಿದರೆ ಈ ಅಧ್ಯಕ್ಷರು ಮತ್ತು ಅಲ್ಲಿರತಕ್ಕಂಥ ಅವರಿಗೆ ಬೇಕಾದಂತ ಒಂದೆರಡು ಜನ ಡೈರೆಕ್ಟರುಗಳು ಶಾಮೀಲಾಗಿ ಯಾವ ಪ್ರಕಾರವಾಗಿ ಸೈಟುಗಳನ್ನು ಹಂಚಿದ್ದಾರೆಂದರೆ ಇಲ್ಲಿಯವರೆಗೆ ಸುಮಾರು ೪೭೦ ಸೈಟುಗಳನ್ನು ಹಂಚಿದ್ದಾರೆ. ಅದರಲ್ಲಿ ೭೫ ಸೈಟುಗಳಲ್ಲಿ ಜನರಾರೂ ವಾಸವಾಗಿಲ್ಲ. ಇದರಲ್ಲಿ ಬೇನಾಮಿ ಟ್ರಾನ್ಸಾಕ್ಷನ್ ಯಾವ ರೀತಿ ನಡೆದಿದೆ ಎಂದರೆ ಅವರಿಗೆ ನಾಮಕಾವಸ್ತೆ ಹೆಸರನ್ನು ಕೊಟ್ಟು ಜನರನ್ನು ಸೃಷ್ಟಿ ಮಾಡಿ ಅವರ ಹೆಸರಿಗೆ ಸೈಟನ್ನು ಮಂಜೂರು ಮಾಡಿದ್ದಾರೆ. ಈ ರೀತಿ ಅನೇಕ ಸೈಟುಗಳನ್ನು ಮಾಡಿ ಮಾರಾಟ ಮಾಡಿಕೊಂಡಿದ್ದಾರೆ. ಆ ಸಹಕಾರ ಸಂಘದ ಬೈಲಾ ವಿರುದ್ಧವಾಗಿ ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.— ನನಗೆ ಗೊತ್ತಿರುವ ಹಾಗೆ ಈ ಮನೆಕಟ್ಟತಕ್ಕಂಥಾದ್ದು ಮತ್ತು ಇತರ ಚಟುವಟಿಕೆಗಳು ಅದರ ಕಾರ್ಯವ್ಯಾಪ್ತಿಯಲ್ಲಿ ಇಲ್ಲ. ಈ ಪೌರಕಾರ್ಮಿಕರ ಕಾರ್ಪೊರೇಷನಲ್ಲಿ ೨ ಸೊಸೈಟಿಗಳು ಇದೆ. ಅದರಲ್ಲಿ ಒಂದು ಸೊಸೈಟಿ ಚೆನ್ನಾಗಿ ಕೆಲಸಮಾಡುತ್ತಿದೆ. ಅಲ್ಲಿ ಕ್ರೆಡಿಟ್ ಆಕ್ಟಿವಿಟಿ ಮಾತ್ರ ಇದೆಯೆಂದು ನನಗೆ ಗೊತ್ತಿದೆ. ಅವರು ಈ ಮನೆ ಕಟ್ಟತಕ್ಕಂಥ ಕೆಲಸವನ್ನು ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಅದಕ್ಕೆ ಕಾರ್ಪೊರೇಷನ್‌ನವರು ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿ ಮನೆ ಕಟ್ಟುವುದಕ್ಕೆ ಒಂದು ಮನೆಗೆ ೮ ಸಾವಿರ ರೂಪಾಯಿಯಂತೆ ಮನೆ ಕಟ್ಟಬೇಕು ಎಂದು ಇದೆ. ಅಲ್ಲಿಯ ಜನರೇ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ. ಆದರೆ ೮ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅವರ ಕೈಗೆ ಮನೆ ಕಟ್ಟಿಕೊಳ್ಳತಕ್ಕಂಥ ಕೆಲಸವನ್ನೂ ಕೊಟ್ಟಿಲ್ಲ. ಆ ೮ ಸಾವಿರ ರೂಪಾಯಿಗಳನ್ನು ತೆಗೆದುಕೊಂಡರು ಅವರಿಂದ ೫,೦೦೦ ರೂಪಾಯಿಗೆ ಆನ್‌ಡಿಮಾಂಡ್ ಪ್ರೊನೋಟ್ ಬರೆಸಿಕೊಂಡಿದ್ದಾರೆ. ಈ ಮನೆಗಳನ್ನು ಕಟ್ಟತಕ್ಕಂಥ ಕೆಲಸವನ್ನು ಬಾಲಾಜಿ ಕಂಸ್ಟ್ರಕ್ಷನ್ ಕಂಪನಿಗೆ ಕೊಟ್ಟಿದ್ದಾರೆ. ಇದರಲ್ಲಿ ಯಾರ್ಯಾರು ಇದ್ದಾರೆ ಎಂದರೆ ಸಹಕಾರ ಸಂಘದ ಅಧ್ಯಕ್ಷರು, ಅವರ ಇಬ್ಬರು ಮಕ್ಕಳು, ಒಬ್ಬ ಅಣ್ಣ. ಅವರ ಬೀಗ ಈ ೪ ಜನರು ಇರತಕ್ಕಂಥ ಪಾರ್ಟನರ್‌ಷಿಪ್‌ನಲ್ಲಿ ಮನೆ ಕಟ್ಟತಕ್ಕಂಥ ಜವಾಬ್ದಾರಿಯನ್ನು ಅವರೇ ವಹಿಸಿಕೊಂಡಿದ್ದಾರೆ. ಆ ಕಂಪನಿಯವರಿಗೆ ಸೈಟುಗಳನ್ನು ಹಂಚತಕ್ಕಂಥ ಸಂದರ್ಭದಲ್ಲಿ 1½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಸೈಟುಗಳನ್ನು ಹಂಚತಕ್ಕಂಥಾದರಲ್ಲಿ ಏನಾಗಿದೆ ಎಂದರೆ ಅಧ್ಯಕ್ಷರ ಮಕ್ಕಳಿಗೂ ಸೈಟನ್ನು ಕೊಟ್ಟಿದ್ದಾರೆ. ಅವರಿಗೆ ಇಬ್ಬರು ಹೆಂಡತಿಯರು ಇದ್ದಾರೆ. ಅವರ ಹೆಸರಿಗೂ ಒಂದೊಂದು ಸೈಟನ್ನು ಕೊಟ್ಟಿದ್ದಾರೆ. ಒಂದೇ ವ್ಯಕ್ತಿಗೆ ಎರಡು ಸೈಟನ್ನು ಹೇಗೆ ಕೊಟ್ಟಿದ್ದಾರೆಂದರೆ ಒಂದು ಹೆಸರಿಗೆ ತಂದೆಯ ವಿಳಾಸವನ್ನೂ ಇನ್ನೊಂದು ಹೆಸರಿಗೆ ಗಂಡನ ವಿಳಾಸವನ್ನೂ ಕೊಟ್ಟಿದ್ದಾರೆ.

ಶ್ರೀ ಕೆ. ಸಿದ್ದಯ್ಯ.— ಇದು ಯಾವ ಕಾಲದಲ್ಲಿ ಆಗಿದ್ದು ?

ಶ್ರೀ ಸಿ. ಬೈರೇಗೌಡ.— ೧೯೭೨ ರಿಂದೀಚೆಗೆ.

ಶ್ರೀ ಕಾಗೋಡು ತಿಮ್ಮಪ್ಪ.— ಒಂದು ಕಡೆ ತಂದೆ ಹೆಸರನ್ನು ಕೊಟ್ಟಿದ್ದಾರೆ. ಇನ್ನೊಂದು ಕಡೆ ಡಿ. ಎನ್. ಶಿವಲಿಂಗಮೂರ್ತಿ ಸನ್ ಆಫ್ ಬಿ. ವಿ. ನಾರಾಯಣ ಎಂದು ಇದೆ. ೧೬೨, ೧೬೩, ೧೬೪, ೧೬೫, ಈ ನಾಲ್ಕು ಸೈಟುಗಳನ್ನು ಒಬ್ಬರ ಹೆಸರಿಗೇ ಕೊಟ್ಟಿದ್ದಾರೆ. ಈ ಸೈಟುಗಳನ್ನು ಅಧ್ಯಕ್ಷರೇ ಅದರ ಮಾಲೀಕರಾಗಿ ಅದನ್ನು ಮನಸ್ಸೇಚ್ಛೆಯಾಗಿ ಉಪಯೋಗಿಸಿಕೊಂಡಿದ್ದಾರೆ. ದುರ್ಬಲವರ್ಗದವರ ಸಂಘಟನೆ ಮಾಡುವುದಕ್ಕೆ ಒಂದು ಸಹಕಾರ ಸಂಘದಲ್ಲಿ ಒಬ್ಬ ದುರ್ಬಲ ಪಂಗಡಕ್ಕೆ ಸೇರಿದಂಥ ವ್ಯಕ್ತಿ ಯಾವ ಹಂತದಲ್ಲಿ ಶೋಷಣೆ ಮಾಡುತ್ತಿದ್ದಾನೆಂದರೆ...

ಶ್ರೀ ಎಚ್. ಡಿ. ದೇವೇಗೌಡ.— ಓಟಿನ ಸಂಘಟನೆಯಾದರೂ ಆಗುತ್ತದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಈ ದುರ್ಬಲವರ್ಗದವರನ್ನು ರಕ್ಷಣೆ ಮಾಡಬೇಕು ಎಂಬ ಆತ್ಮ ವಿಶ್ವಾಸ ಇಟ್ಟುಕೊಂಡಿರತಕ್ಕ ನಾವು ನಮ್ಮ ಕೈಯ್ಯಿಂದಲೇ ಅವರ ಹತ್ಯೆ ಆಗುವಂತೆ ಮಾಡಿದರೆ ಅದಕ್ಕಿಂತ ನಾಚಿಕೆಪಡಬೇಕಾದಂಥದ್ದು ಬೇರೆ ಯಾವುದೂ ಇಲ್ಲ. ನಾವು ಯಾವ ವರ್ಗವನ್ನು ಮೇಲೆ ಎತ್ತಬೇಕೋ ಅವರನ್ನು ನಮಗೆ ಅಧಿಕಾರ ಸಿಕ್ಕಿದಾಗ, ಅವಕಾಶ ಸಿಕ್ಕಿದಾಗ ಅವರ ಚರ್ಮ ಸುಲಿಯುವ ಕೆಲಸಕ್ಕೆ ಕೈಹಾಕಿದರೆ ನಾವು ಬದುಕಿರುವುದಕ್ಕಿಂತ ಸಾಯುವುದು ಮೇಲು ಇಂಥ ಕೆಲಸವನ್ನು ಮಾಡುವುದಕ್ಕೆ ನಾಚಿಕೆಪಡಬೇಕು. ಹರಿಜನರನ್ನು ತುಳಿಯುತ್ತಿದ್ದಾರೆ, ಅವರನ್ನು ಮೇಲಕ್ಕೆತ್ತಬೇಕು ಎಂದು ಹೇಳುತ್ತಿದ್ದವರೇ ಇಂತಹ ಅತ್ಯಾಚಾರಕ್ಕೆ ಕೈಹಾಕಿದರೆ ನಿಜವಾಗಿ ತಲೆತಗ್ಗಿಸಬೇಕಾಗಿದೆ. ಇದನ್ನು ನಾವು ನೀವು ಎಲ್ಲಾ ಸೇರಿ ರಕ್ಷಿಷ್ಯೆ ಮಾಡಬೇಕು. ಮುಂದಿನ ಪೀಳಿಗೆ ನಮ್ಮನ್ನು ನೋಡಿ ಕಲಿಯಬೇಕು. ಸಹಸ್ರಾರು ಜನ ದುರ್ಬಲವರ್ಗದ ಮುಖಂಡರು ಬರಬೇಕಾಗಿದೆ. ಅವರ ನೇತೃತ್ವ ಬೆಳೆಯಬೇಕಾಗಿದೆ, ಮುಖಂಡತ್ವ ಬೆಳೆಯಬೇಕಾಗಿದೆ ನಾವು ಉತ್ತಮವಾದ ಕೆಲಸವನ್ನು ಮಾಡಿದರೆ ಉತ್ತಮ ಹೊಣೆಗಾರಿಕೆಯನ್ನು ಹೊತ್ತ ಮುಖಂಡರನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಅನಾಚಾರಗಳು, ಹತ್ಯೆಗಳು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಇದಕ್ಕಿಂತ ಪಾಪ ಬೇರೆ ಯಾವುದೂ ಇರುವುದಿಲ್ಲ. ಅನೇಕ ಯುವಕರು ನನಗೆ ಬಂದು ಹೇಳಿದರು ಸಹಕಾರ ಇಲಾಖೆ ಅವರಿಗೆ ಕೊಟ್ಟಂಥ ಫಿರ್ಯಾದಿ ಏನೆಂದರೆ ಅವರು ಅನ್ಯಾಯಗಳ ಬಗ್ಗೆ ಸರ್ಕಾರಕ್ಕೆ ಅಹವಾಲು ಕೊಟ್ಟರೆ, ಅನ್ಯಾಯ ಅನಾಚಾರ ಮಾಡಿದವರು ಹೇಳುತ್ತಾರೆ, ನಾನು ಮುಖ್ಯಮಂತ್ರಿಗಳಿಗೆ ತೀರಾ ಆಪ್ತ, ಹುಷಾರ್ ಎಂದು ಹೇಳಿ ಕಂಪ್ಲೇಂಟ್ ಕೊಟ್ಟವನನ್ನು ಪೋಲೀಸ್ ಸ್ಟೇಷನ್ನಿಗೆ ಕರೆಸಿ ಒದಿಸಿದ್ದಾರೆ. ಇವತ್ತು ಬರಹಗಾರರ ಸಹಕಾರ ಸಂಘವನ್ನು ಸೂಪರ್‌ಸೀಡ್ ಮಾಡಿದ್ದೀರಿ. ಅದನ್ನು ಸೂಪರ್‌ಸೀಡ್ ಮಾಡುವುದಕ್ಕಿಂತ ಮುಂಚೆ ಅದರ ಕಾರ್ಯನಿರ್ವಹಣೆ ಹೇಗಿತ್ತು ಎಂಬುದನ್ನು ನೋಡಬೇಕು. ಇವತ್ತು ಬಡಜನರಿಗೆ ಮನೆಗಳನ್ನು ಕಟ್ಟುವುದಕ್ಕೆ ಹಂಚತಕ್ಕ ಸೈಟಿನ ವಿಷಯದಲ್ಲಿ ಅನ್ಯಾಯ ಆಗಿದ್ದರೆ ಸಹಕಾರ ಸಂಘದ ಪೂರ್ಣ ಜವಾಬ್ದಾರಿಯನ್ನು ಅದರಿಂದ ಕಸಿದುಕೊಳ್ಳಬೇಕು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಸಮಾಜಕಲ್ಯಾಣ ಇಲಾಖೆಯಲ್ಲಿ ನಡೆದಂಥ ಹಗರಣದ ಬಗ್ಗೆ ಹೇಳಿದ್ದಾರೆ. ಯಾರು ಏನು ಮಾಡಿದರು ? ಬೇರೆಯವರು ಏನಾದರೂ ಈ ರೀತಿ ಮಾಡಿದ್ದರೆ ನೇಣು ಹಾಕಿ ಎಂದು ಹೇಳಬಹುದಾಗಿತ್ತು. ಇವತ್ತು ಹೇಳುವುದಕ್ಕೆ ನಾಲಿಗೆ ಸೆಳೆದು ನಿಂತಿದೆ. ನಮ್ಮ ಹೊಣೆಗಾರಿಕೆಯನ್ನು ನಮ್ಮ ಕೈಯಲ್ಲಿ ಕೊಟ್ಟಾಗ ಅದನ್ನು ನಿರ್ವಹಣೆ ಮಾಡುವಂಥ ಶಕ್ತಿ ಬರದೇ ಇದ್ದರೆ ಏನು ಮಾಡುವುದು ? ನಮ್ಮ ಕೈಯಲ್ಲಿ ಅಧಿಕಾರ ಬಂದಾಗ ಎಷ್ಟುಮಟ್ಟಿಗೆ ಕೆಲಸ ಮಾಡುತ್ತೇವೆ ಎಂಬುದು ಬಹಳ ಮುಖ್ಯ. ಸಹಕಾರ ಸಂಘದ ವ್ಯವಹಾರಗಳು ಸರಿಯಾಗಿ ನಡೆಯದೇ ಇದ್ದಾಗ ಅವರು ಎಷ್ಟೇ ದೊಡ್ಡವರಾಗಿರಲಿ, ಯಾರೇ ಅದನ್ನು ವಹಿಸಿಕೊಂಡಿರಲಿ ದಯವಿಟ್ಟು ಅವರಿಗೇ ಅದನ್ನು ಬಿಡುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಸರ್ಕಾರ ತನ್ನ ಆಡಳಿತಕ್ಕೆ ತೆಗೆದು ತಪ್ಪಿತಸ್ಥರಿಗೆ ಶಿಕ್ಷೆಯನ್ನು ಮಾಡಬೇಕು. ಸಾಲ ಕೊಟ್ಟು ತೆಗೆದುಕೊಳ್ಳುವ ವ್ಯವಹಾರದಲ್ಲಿ ಯಾವ ಮಟ್ಟಕ್ಕೆ ಹೋಗಿ ಸಹಕಾರ ಸಂಘದವರು ಇಳಿದಿದ್ದಾರೆ ಎಂದರೆ, ಶಾಸನಸಭಾಸದಸ್ಯರಾಗಿ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಈ ರೀತಿ ಕೆಲಸ ಮಾಡಿದರೆ ಸಾರ್ವಜನಿಕ ಕ್ಷೇತ್ರದಲ್ಲಿ ಮರ್ಯಾದೆ ಬರುತ್ತದೆಯೋ ಎಂದು ತಿಳಿದುಕೊಳ್ಳಬೇಕು. ಇವತ್ತು ಈ ಪತ್ರವನ್ನು ಸಚಿವರಿಗೆ ಕಳುಹಿಸಿಕೊಡುತ್ತೇನೆ, ತಾವು ದಯವಿಟ್ಟು ಓದಿ ಕ್ರಮ ತೆಗೆದುಕೊಳ್ಳಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನಲ್ಲಿದ್ದಂಥ ಬರಹಗಾರರ ಸಂಘವನ್ನು ಇವತ್ತು ಸರ್ಕಾರದವರು ತೆಗೆದುಕೊಂಡಿದ್ದಾರೆ. ಅದಕ್ಕೆ ಅಡ್ಮಿನಿಸ್ಟ್ರೇಟರ್ ನೇಮಕ ಮಾಡಿದ್ದಾರೆ. ಅಲ್ಲಿ ಏನಾಗಿದೆ, ಏನು ಅದರ ಕಥೆ ಎಂಬುದನ್ನು ತಿಳಿದುಕೊಳ್ಳಲು ಹೋಗಿ ನೋಡಿಕೊಂಡು ಬಂದಿದ್ದೇನೆ, ಅವರು ಕೆಲವು ಲೇ ಔಟ್‌ಗಳನ್ನು ಮಾಡತಕ್ಕ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ದುಡ್ಡು ಹೇಗೆ ಖರ್ಚಾಗಿದೆ, ಎಲ್ಲಿ ಹೋಗಿದೆ ಎಂಬುದನ್ನು ಬಹುಶಃ ನಾವು ನೀವು ಇಲ್ಲಿ ಕುಳಿತು ಚರ್ಚೆ ಮಾಡುವುದರಿಂದ

ಬಗೆಹರಿಯುವುದಿಲ್ಲ. ಅದು ಸೂಕ್ಷ್ಮವಾದ ವಿಚಾರ. ಅದಕ್ಕೆ ಬೇರೆ ಚಾಪ್ಟರ್ ಇಟ್ಟುಕೊಂಡು ವಿಚಾರ ಮಾಡಬೇಕು. ಅಲ್ಲಿ ಅನ್ಯಾಯ ನಡೆದಿದ್ದರೆ ಬಲಿ ಹಾಕಬೇಕು. ಹಾಗೇ ಬಿಡಬೇಕು ಎಂದು ಯಾರೂ ಹೇಳುವುದಿಲ್ಲ. ಆದರೆ ಒಳ್ಳೆಯ ಕೆಲಸ ಮಾಡಿದಾಗ ಅದನ್ನು ಮಾಡಿಲ್ಲ ಎಂದು ಹೇಳುವ ಮಟ್ಟಕ್ಕೆ ನಾವು ಹೋಗಬಾರದು. ಸಚಿವರು ಮೀಸಾ ಕಾನೂನಿನ ಪ್ರಕಾರ ಬಂಧನ ಮಾಡತಕ್ಕ ಕಾಲದಲ್ಲಿ ವಾಸ್ತವಿಕ ಅಂಶವನ್ನು ಗಣನೆಗೆ ತೆಗೆದುಕೊಂಡಿಲ್ಲ. ವಾಸ್ತವಿಕ ಅಂಶವನ್ನು ಕೈಬಿಟ್ಟು ಕ್ರಮ ಕೈಗೊಂಡಿದ್ದೀರಿ. ಆದ್ದರಿಂದ ಅಡ್ಮಿನಿಸ್ಟ್ರೇಟರ್ ನೇಮಕ ಮಾಡಿದ್ದೀರಿ. ಬಡಹಗಾರರ ಸಂಘದವರು ಸಾರ್ವಜನಿಕ ಹಣವನ್ನು ಸಂಗ್ರಹ ಮಾಡಿ ಅದನ್ನು ಖರ್ಚು ಮಾಡಿ ಲೇ ಔಟ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಈಗ ಅವರನ್ನು ಜೈಲಿಗೆ ಹಾಕಿದ್ದೀರಿ. ೬ ಲಕ್ಷ ರೂಪಾಯಿನ ಮೆಟೀರಿಯಲ್ಸ್ ಇರುವುದನ್ನು ಕಾಯುವವರಿಲ್ಲ. ಆಡಳಿತಾಧಿಕಾರಿ ಅದನ್ನು ನೋಡಿಕೊಳ್ಳುವುದಿಲ್ಲ. ಪಕ್ಕದಲ್ಲೇ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಕೆಲಸ ಮಾಡಿಸುತ್ತಿದ್ದಾರೆ. ಆ ಕಂಟ್ರಾಕ್ಟರು ಈ ಸಹಕಾರ ಸಂಘಕ್ಕೆ ಸಂಬಂಧಪಟ್ಟ ಮೆಟೀರಿಯಲ್ಸ್‌ಗಳನ್ನೆಲ್ಲಾ ಸಾಗಾಣಿಕೆ ಮಾಡಿಕೊಂಡು ಲಾಭ ಮಾಡಿಕೊಂಡಿದ್ದಾರೆ. ನೀವು ಅಡ್ಮಿನಿಸ್ಟ್ರೇಟರ್ ಹಾಕಿ ಯಾವ ಪುರುಷಾರ್ಥವನ್ನು ಸಾಧಿಸಿದಿರಿ. ಅವರು ಅಲ್ಲಿರತಕ್ಕ ಸೊಸೈಟಿಗೆ ಸಂಬಂಧಪಟ್ಟ ವಸ್ತುಗಳನ್ನು ಕಾಯಬೇಡವೇ? ೬ ಲಕ್ಷ ರೂಪಾಯಿನ ಮೆಟೀರಿಯಲ್ಸ್ ಮಾಯವಾಗಿರುವುದಕ್ಕೆ ಯಾರು ಜವಾಬ್ದಾರರು? ಮತ್ತು ಅಲ್ಲಿ ೧ ಲಕ್ಷ ರೂಪಾಯಿ ಖರ್ಚು ಮಾಡಿ ಬಾವಿ ತೆಗೆಸಿ ಅದಕ್ಕೆ ಹಾಕಿರತಕ್ಕ ಪಂಪ್‌ಸೆಟ್ ಪೈಪನ್ನು ಕಡಿದು ಹಾಕಿದ್ದಾರೆ. ಸಾರ್ವಜನಿಕ ವಸ್ತುವನ್ನು ಆ ರೀತಿ ಮಾಡತಕ್ಕದ್ದು ಸಾಧುವಾದುದಲ್ಲ. ಏನಾದರೂ ಲೋಪ ನಡೆದಿದ್ದರೆ, ಅನ್ಯಾಯ ಮಾಡಿದ್ದರೆ ಅದನ್ನು ತನಿಖೆ ಮಾಡಿ. ಸೃಷ್ಟಿ ಮಾಡಿರತಕ್ಕ ಸಾಧನ ಸಂಪತ್ತನ್ನು ಯಾವುದೋ ಕಾರಣಕ್ಕಾಗಿ ಹಾಳು ಮಾಡಬಾರದು. ದುಡ್ಡು ಕೊಟ್ಟು ಸೈಟುಗಳನ್ನು ಪಡೆದಿರುವ ಜನಗಳಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ದಯವಿಟ್ಟು ಸೈಟುಗಳನ್ನು ಪಡೆದಿರುವ ಜನಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಸೊಸೈಟಿಯ ಸರ್ವಸದಸ್ಯರ ಸಭೆಯನ್ನು ಕರೆದು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಯಾವಯಾವ ಮಟ್ಟದಲ್ಲಿ ಯಾವಯಾವ ವಿಧದಲ್ಲಿ ಲೋಪ ನಡೆದಿದೆ, ಅನ್ಯಾಯವಾಗಿದೆ ಎಂಬುದನ್ನು ತನಿಖೆ ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕಾದುದು ನ್ಯಾಯವಾದುದು, ಅದರಲ್ಲಿ ನನ್ನ ಅಭ್ಯಂತರವಿಲ್ಲ. ಆ ಪ್ರಯತ್ನವನ್ನು ತಾವು ಮಾಡಬೇಕು. ಕುರ್ತಕೋಟಿ ರೇವಣಸಿದ್ದೇಶ್ವರ ಕಂಬಳಿ ನೇಕಾರರ ಸಹಕಾರ ಸಂಘ, ಹಿರಿಯೂರು, ಈ ಸಂಘದಲ್ಲಿ ಹಣ ಲೂಟಿಯಾಗಿರುವ ಬಗ್ಗೆ ವರದಿ ಬಂದಿದೆ. ಆ ಸಹಕಾರ ಸಂಘದ ಆಡಳಿತ ಹದಗೆಟ್ಟಿದೆ. ಅದನ್ನು ಸರಿಪಡಿಸತಕ್ಕ ಕೆಲಸವನ್ನು ದಯವಿಟ್ಟು ಮಾಡಬೇಕು. ಹುಬ್ಬಳ್ಳಿಯಲ್ಲಿ ಒಂದು ಸಹಕಾರ ಸಂಘ ಇದೆ. ಅದರ ವ್ಯವಹಾರ ಕೂಡ ಅಷ್ಟೇ ಹದಗೆಟ್ಟಿದೆ. ಅದನ್ನೂ ಸರಿಪಡಿಸಬೇಕು. ಆಮೇಲೆ ಇಂಜಿನಿಯರ್ಸ್, ಟೆಕ್ನಿಷಿಯನ್ಸ್ ಕೋ-ಆಪರೇಟೀವ್ ಸೊಸೈಟಿ, ಕೃಷ್ಣಾಪುರ, ಹಳೇ ಹುಬ್ಬಳ್ಳಿ, ಇದೊಂದಿದೆ. ಭತ್ತದ ಗಿರಣಿ ಮಾಡತಕ್ಕದ್ದು. ಖಾಸಗಿಯವರಿಂದ ಸಹಕಾರ ಸಂಘ ಸ್ಥಾಪನೆಯಾದಮೇಲೆ ಅದನ್ನು ಸರ್ಕಾರದವರು ವಹಿಸಿಕೊಂಡು ಸರ್ಕಾರದವರು ಅದಕ್ಕೆ ಷೇರ್ ಕ್ಯಾಪಿಟಲ್, ವರ್ಕಿಂಗ್ ಕ್ಯಾಪಿಟಲ್ ಕೊಟ್ಟಿದ್ದಾರೆ. ಸುಮಾರು ೧ ಲಕ್ಷ ೪೭ ಸಾವಿರ ರೂಪಾಯಿ ಸಹಾಯಧನವನ್ನು ಪಡೆದು ಅಲ್ಲಿನ ವ್ಯವಹಾರ ಸಂಪೂರ್ಣವಾಗಿ ಸ್ಥಗಿತವಾಗಿ ಅದು ಲುಕ್ಸಾನಾಗಿ ಈಗ ಅಲ್ಲಿರುವ ಕಾರ್ಮಿಕರಿಗೆ ಸಂಬಳ ಸಿಗದೇ ಇರತಕ್ಕ ಪರಿಸ್ಥಿತಿ ಉಂಟಾಗಿದೆ. ಅಲ್ಲಿ ಆಡಳಿತ ಮಂಡಲಿಯ ಸಭೆಯನ್ನು ಕರೆಯುತ್ತಿಲ್ಲ. ಒಬ್ಬ ಜವಾಬ್ದಾರಿ ಜನರೇ ಇದರ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದಾರೆ. ಈ ಸೊಸೈಟಿ ಬಗ್ಗೆ ಅನೇಕ ದೂರುಗಳು ಸರ್ಕಾರಕ್ಕೆ ಬಂದರೂಕೂಡ ತಪ್ಪಿತಸ್ಥರನ್ನು ಶಿಕ್ಷೆಗೆಗುರಿಪಡಿಸಿಲ್ಲ. ಯಾತಕ್ಕೆಂದರೆ ರಾಜಕೀಯದಲ್ಲಿ ಪ್ರಭಾವವಿರತಕ್ಕ ಜನರು ಇದರಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಆದ್ದರಿಂದ ಮಾನ್ಯಸಚಿವರು ಇದರ ಬಗ್ಗೆ ಕೈಹಾಕುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆಯೆಂಬ ಆಕ್ಷೇಪಣೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಅಡಿಕೆ ಫೆಡರೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಡಿಕೆ ಕಾರ್ಪೊರೇಷನ್ ಬೆಳೆಗಾರರ ಹಿತರಕ್ಷಣೆ ಮಾಡುವ ಉದ್ದೇಶದಿಂದ ಹುಟ್ಟಿರುವುದು. ಈ ಕಾರ್ಪೊರೇಷನ್ನಿನವರು ಅಡಿಕೆಯನ್ನು ಖರೀದಿ ಮಾಡುವ ಸನ್ನಿವೇಶದಲ್ಲಿ ಸಾಕಷ್ಟು ಪ್ರಮಾಣಿಕತನದ ವ್ಯಾಪಾರದ ನೀತಿಯನ್ನನುಸರಿಸುತ್ತಿಲ್ಲ. ಇದರಿಂದಾಗಿ, ಕೊಂಡಂಥ ಅಡಿಕೆ ಅನೇಕ ಕಡೆಗಳಲ್ಲಿದೆ- ಅದು ಇನ್ನೂ ಖರೀದಿಯಾಗದೆ ಹಾಳಾಗುವ ಪರಿಸ್ಥಿತಿಗೆ ಬಂದಿದೆ. ಅದನ್ನು ಎಲ್ಲ ಕಡೆಗಳಲ್ಲೂ ಇರುವ ಮಾರುಕಟ್ಟೆಗಳಿಗೆ ಬಿಡುಗಡೆ ಮಾಡಬೇಕು. ಮತ್ತು ಅಡಿಕೆಯನ್ನು ಎಲ್ಲ ಅಡಿಕೆ ಬೆಳೆಗಾರರಿಂದಲೂ ಕೊಳ್ಳುವ ವ್ಯವಸ್ಥೆಯಾಗಬೇಕು. ಬೇಕಾದ ಕಡೆ ಕೊಂಡುಕೊಳ್ಳುವುದು, ಬೇಡವಾದ ಕಡೆ ಬಿಡುವುದು- ಈ ನೀತಿಯನ್ನು

ಸರಿಸಬಾರದು, ಆದುದರಿಂದ, ಮಾನ್ಯ ಸಚಿವರು ದಯಮಾಡಿ ಅಪೆಕ್ಸ್ ಕಾರ್ಪೋರೇಷನ್ನಿನ ವ್ಯವಹಾರವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೇ ವಿನಹ ಅಧಿಕಾರಿಗಳು ಹೇಳುವ ಮಾತಿನಿಂದಲೇ ತೀರ್ಮಾನಕ್ಕೆ ಬರುವುದು ಸಾಧುವಾದುದಲ್ಲ. ನಮ್ಮ ಮಾನ್ಯ ಶ್ರೀಕಂಠಯ್ಯನವರು ಇಲ್ಲಿ ಮಂತ್ರಿಯಾದಮೇಲೂ ಕೋ-ಆಪರೇಟಿವ್ ಮಾರ್ಕೆಂಟಿಂಗ್ ಫೆಡರೇಷನ್ನಿನಲ್ಲಿ ಅಧ್ಯಕ್ಷರಾಗಿದ್ದರು. ಇದರ ಬಗ್ಗೆ ಅವರ ಮೇಲೆ ನಾವು ಸಾಕಷ್ಟು ಗಲಾಟೆ ಮಾಡಿದ್ದೇವೆ. ಮಾನ್ಯ ಬಣಕಾರ್ ಅವರೂ ಸಹ ಇಲ್ಲಿ ಮಂತ್ರಿಯಾದ ಮೇಲೆ ಸಹಕಾರ ಸಂಘವೊಂದರಲ್ಲಿ ಅಧ್ಯಕ್ಷರಾಗಿದ್ದಾರೆ- ಇನ್ನೂ ಮುಂದುವರಿಯುತ್ತಿದ್ದಾರೆ ಇದು ಪ್ರೊಪ್ರೈಟರಿ ಅಲ್ಲ. ಮಂತ್ರಿಯಾಗಿರುವವರು ಯಾವುದೇ ಸಂಘದಲ್ಲಿ-ಅದರಲ್ಲೂ ಸಹಕಾರ ಸಂಘದಲ್ಲಿ ಅಧ್ಯಕ್ಷರಾಗಿ ಮುಂದುವರಿಯಕೂಡದು.

ಶ್ರೀ ಬಿ.ಜಿ. ಬಣಕಾರ್.—ನಾನು ಅಧ್ಯಕ್ಷನಾಗಿರುವ ಸಂಘದಲ್ಲಿ ಅವ್ಯವಹಾರ ನಡೆದಿದ್ದರೆ ಹೇಳಿ, ಅಧಿಕಾರ ದುರುಪಯೋಗವಾಗಿದ್ದರೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಅವ್ಯವಹಾರ ನಡೆಯುತ್ತಿದೆ ಎಂದು ಈಗ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಆಚಾರ ಸಂಹಿತೆ ಬಗ್ಗೆ ಮಾತನಾಡುತ್ತಿದ್ದಾರೆ ಮಂತ್ರಿಗಳಾಗಿರುವವರು ಒಂದು ಸಂಘದ ಅಧ್ಯಕ್ಷರೂ ಆಗಿರುವುದು ಸರಿಯಲ್ಲವೆನ್ನುವುದು ನಮ್ಮ ಅಭಿಪ್ರಾಯ. ಮಂತ್ರಿಗಳೊಬ್ಬರು ಇತ್ತೀಚಿಗೆ ಭೂ ನ್ಯಾಯ ಮಂಡಲಿಯ ಸದಸ್ಯರಾಗುವುದಕ್ಕೆ ಹೆಸರು ಕೊಟ್ಟಿದ್ದಾರೆಂದು ಕೇಳಿದ್ದೇನೆ-ಮಂತ್ರಿ ಕೆಲಸ ಹೋದರೆ ಪಜೀತಿಯಾಗುತ್ತದೆ ಎಂದು.

ಶ್ರೀ ಬಿ.ಜಿ. ಬಣಕಾರ್.—ಹಾಗಾದರೆ, ಅವರು ಯಾರೆಂದು ಹೇಳಲಿ,

ಶ್ರೀ ಎಚ್.ಡಿ. ದೇವೇಗೌಡ.—ಹಾಸನ ಜಿಲ್ಲೆಯ ಶ್ರೀಕಂಠಯ್ಯನವರು ಭೂ ನ್ಯಾಯ ಮಂಡಲಿಯ ಸದಸ್ಯರಾಗುವುದಕ್ಕೆ ತಯಾರಾಗಿದ್ದಾರೆಂದು ಕೇಳಿದ್ದೇನೆ ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಇದ್ದರೆ ಉಂಟು ಎಂದು ಹೇಳಲಿ-ಇಲ್ಲದಿದ್ದರೆ ಇಲ್ಲ ಎಂದು ಹೇಳಲಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಂತ್ರಿಗಳಾಗಿರುವವರು ಭೂ ನ್ಯಾಯ ಮಂಡಲಿ ಸಭೆಗಳಲ್ಲಿ ಇರುವುದಕ್ಕೆ ಅವಕಾಶವಿಲ್ಲದಿರುವುದರಿಂದ, ಆ ಮಂತ್ರಿಗಳು ಅವರ ಬದಲಿಗೆ ಯಾರಾದರೊಬ್ಬರ ಹೆಸರನ್ನು ಬರೆದುಕೊಟ್ಟರೆ, ಅವರ ಹೆಸರನ್ನು ಸರ್ಕಾರ ಆ ಮಂಡಲಿಗೆ ಸೇರಿಸುತ್ತದೆ.

Sri H. D. DEVE GOWDA.—I want to know whether he has been nominated to the Land Tribunal of Channarayapatna by the Chief Minister or not.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಚಾರ ನನ್ನ ಗಮನಕ್ಕೆ ಇಲ್ಲಿಯವರೆಗೂ ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಶೆಟ್ಟಿ ಸತ್ತ ಮೇಲೆ, ಅವನ ಬಂಡವಾಳ ಈಚೆಗೆ ಬರುತ್ತದೆ ಎಂದು ಒಂದು ಗಾದೆ ಇದೆ. ಹಾಗೆಯೇ ಮಾನ್ಯ ಬಣಕಾರ್ ಅವರು ಇನ್ನೂ ಆ ಸಂಘದಲ್ಲಿ ಅಧ್ಯಕ್ಷರಾಗಿದ್ದರೆ ಅದರ ಬಂಡವಾಳ ನಮಗೆ ಗೊತ್ತಾಗುವುದು ಹೇಗೆ?

ಶ್ರೀ ಬಿ.ಜಿ. ಬಣಕಾರ್.—ಆ ಸಂಘದಲ್ಲಿ ಒಂದು ಪೈಸೆ ಅವ್ಯವಹಾರವಾಗಿದ್ದರೆ ಅಧಿಕಾರ ದುರುಪಯೋಗವಾಗಿದ್ದರೆ ಅಥವಾ ನನ್ನ ಅಧ್ಯಕ್ಷಗಿರಿಯಿಂದ ಆ ಸಂಘಕ್ಕೆ ಅನಾಹುತವಾಗುತ್ತದೆ ಎನ್ನುವ ಹಾಗಿದ್ದರೆ, ಆ ಅಧ್ಯಕ್ಷಗಿರಿಯನ್ನೇಕೆ ಈ ಮಂತ್ರಿ ಪದವಿಯನ್ನೂ ಬಿಟ್ಟುಕೊಡುತ್ತೇನೆ

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಿರುವುದಾದರೆ, ಮಾನ್ಯ ನಾಯ್ಕರ್‌ರವರನ್ನೂ ಬೆಂಗಳೂರು ನಗರ ಸಭೆಯ ಅಧ್ಯಕ್ಷರನ್ನಾಗಿ ಮಾಡಿಬಿಡೋಣ.

ಶ್ರೀ ಎಚ್.ಡಿ. ದೇವೇಗೌಡ.—ಮಂತ್ರಿಗಳು ಪೂರ್ಣ ಹೊಣೆಗಾರಿಕೆ ಹೊರಬೇಕಾಗುತ್ತದೆ. ನಾನು ಕಾನೂನಿನ ಚೌಕಟ್ಟಿನೊಳಗೆ ವಾದವಿವಾದಕ್ಕಿಳಿಯುವುದಿಲ್ಲ. ಮಂತ್ರಿಗಳು ಬೇರೆ ವ್ಯವಹಾರದಲ್ಲಿ ಕೈ ಹಾಕಬಾರದು. ಮಂತ್ರಿಗಳ ಕೆಲಸ ಇಲ್ಲಿ ಪೂರ್ಣ ವಿನಿಯೋಗವಾಗಬೇಕು. ನೀವು ಇಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವಾಗ, ಅಲ್ಲಿ ಸಂಘದ ಅಧ್ಯಕ್ಷರಾಗಿರುವುದು ಸರಿಯಲ್ಲ, ಬಿಟ್ಟುಬಿಡಿ. ಒಳ್ಳೆಯ ಸಂಪ್ರದಾಯ ಹಾಕಿ. ಮಾನ್ಯ ಸಹಕಾರ ಸಚಿವರಿಗೆ ಮಾರ್ಕೆಂಟಿಂಗ್ ಫೆಡರೇಷನ್ನಿನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಸೀರಿಯಸ್ ಆದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮನಸ್ಸಿನಲ್ಲಿದ್ದರೂ, ಅದು ಆಗಿಲ್ಲ. ಅದಕ್ಕೆ

ಸಂಬಂಧಪಟ್ಟ ಕಾಗದ ಪತ್ರಗಳನ್ನು ನಾವು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ತರಿಸಿದ್ದೇವೆ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಕಛೇರಿಯಲ್ಲಿ ಈ ಎಲ್ಲ ಕಾಗದ ಪತ್ರಗಳಿವೆ. ಅಷ್ಟೇ ಅಲ್ಲದೆ, ಫೆಡರೇಷನ್ನಿನಲ್ಲಿ ಡಾಕ್ಯುಮೆಂಟ್‌ಗಳನ್ನು ರೀ-ಕನ್ಸ್ಟ್ರಕ್ಟ್ ಮಾಡುವುದಕ್ಕೆ ಹೊರಟಿದ್ದಾರೆಂದು ಕೇಳಿದ್ದೇನೆ. ಅದಕ್ಕೆ ದಯವಿಟ್ಟು ಮಾನ್ಯ ಸಹಕಾರ ಸಚಿವರು ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.--ಗೊಬ್ಬರವನ್ನು ಸಾಗಾಣಿಕೆ ಮಾಡಿದ ಸಂದರ್ಭದಲ್ಲಿನ ವ್ಯವಹಾರದ ಬಗ್ಗೆ ಮಾನ್ಯ ದೇವೇಗೌಡರು ಲಾರಿ ನಂಬರುಗಳನ್ನೆಲ್ಲ ಕೊಟ್ಟಿದ್ದರು. ಆ ನಂಬರುಗಳನ್ನೆಲ್ಲಾ ತಿದ್ದಿಸಿ, ಹೊಸದಾದ ನಂಬರುಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ.--ಇವುಗಳನ್ನೆಲ್ಲಾ ಟೈಪಿಂಗ್ ಮಿಸ್ಟೇಕ್ ಎಂದು ಪರಿಗಣಿಸಿ, ತಿದ್ದುವ ಪ್ರಯತ್ನ ನಡೆದಿದೆ.

ಶ್ರೀ ಎಚ್.ಡಿ. ದೇವೇಗೌಡ —We have given sufficient opportunities to the officers and the connected records are signed by the officers. All those things are in the custody of the Legislature Secretariat I understand that efforts are made by the interested parties to tamper some of the records to suit their case because they have to face the Grover Commission. I have confidence in the Minister and I request him to take sufficient care to see that they are not tampered with.

ಶ್ರೀ ಕಾಗೋಡು ತಿಮ್ಮಪ್ಪ.--ಬಣಕಾರ್ ಅವರನ್ನು ಸಹಕಾರ ಸಂಘದಿಂದ ಹೊರಬನ್ನಿ ಎಂದು ಹೇಳುತ್ತಿರುವುದು ವ್ಯಕ್ತಿ ಸಂಬಂಧದಿಂದಲ್ಲ ನೀತಿ ಸಂಬಂಧದಿಂದ. ಇಷ್ಟು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

ಶ್ರೀ ಜಿ.ಎಸ್. ಅಮ್ಮಣ್ಣನವರ್.— (ಸಾದಲಗ) --ಸನ್ಮಾನ್ಯ ಅಧ್ಯಕ್ಷಣೀಯವರೇ ಸಹಕಾರ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಪುಷ್ಟೀಕರಿಸುತ್ತಾ ಕೆಲವೊಂದು ಸಲಹೆಗಳನ್ನು ಮಾಡಬಯಸುತ್ತೇನೆ. ಈಗಾಗಲೇ ನನ್ನ ಸ್ನೇಹಿತರಾದ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿರುವಂಥ ಒಂದೆರಡು ಮಾತುಗಳಲ್ಲಿ ಅಷ್ಟು ಸರಿಯಾಗಿ ಹೇಳಲಿಲ್ಲವೆಂದು ನನ್ನ ಭಾವನೆ. ಮೊದಲನೆಯದಾಗಿ ಆಡಿಟ್ ವಿಂಗಡಣೆ ಬೇರೆ ಮಾಡಲಿಲ್ಲವೆಂದು ಅವರು ಹೇಳಿದರು ಆದರೆ ಅವರು ಸಹಕಾರ ಬಗ್ಗೆ ಕೊಟ್ಟ ಪುಸ್ತಕ ಪುಟ ೫೫ ಪೇಜ್ ೬೬ರಲ್ಲಿ ನೋಡಿದರೆ, ಆಡಿಟ್ ವಿಗಂಡಣೆಯನ್ನು ಸರ್ಕಾರದವರು ಬೇರೆ ಮಾಡಿರುವುದು ಗೊತ್ತಾಗುತ್ತದೆ. ಒಂದು ವರ್ಷದ ವರೆಗೆ ರಿಜಿಸ್ಟ್ರಾರ್ ಅವರ ಅಧೀನ ಮಾತ್ರ ಇಟ್ಟಿದೆ ಎಂಬುದನ್ನು ತಾವು ನೋಡಬೇಕು. ಆಡಿಟ್ ವಿಂಗಡಣೆಯಲ್ಲಿ ಏನೂ ಆಗಿಲ್ಲವೆಂದು ಏನು ಹೇಳಿದರು ಅದು ಸರಿಯಲ್ಲ ಆದರೆ ಆ ಕಾರ್ಯ ಇನ್ನೂ ಪೂರ್ಣವಾಗಿ ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ೩೪ ಪರ್ಸೆಂಟ್ ಸಹಕಾರ ಸಂಘಗಳಲ್ಲಿ ಆಡಿಟ್ ಆಗಿದ್ದು ಇನ್ನೂ ವರೆಗೆ ಉಳಿದ ಸಹಕಾರಿ ಸಂಘಗಳ ಆಡಿಟ್ ಪೂರ್ಣವಾಗದೇ ಇರುವುದರಿಂದ ಮಿಸ್ ಅಪ್ರೊಪ್ರಿಯೇಷನ್ ಇಂಥಾದ್ದು ಆಗುವುದಕ್ಕೆ ಕಾರಣವಾಗಿದೆ. ಆದರೆ ಏತಕ್ಕೆ ಆಡಿಟ್ ಆಗಲಿಲ್ಲವೆನ್ನುವುದಕ್ಕೂ ಕಾರಣ ಕೊಟ್ಟಿದ್ದಾರೆ. ಅದರಲ್ಲಿ ಎಷ್ಟೋ ಕೇಸ್‌ಗಳು ಕೋರ್ಟಿನಲ್ಲಿ ಬಿದ್ದಿದೆ, ಇಂಥಾದ್ದಕ್ಕೆ ಕೋರ್ಟಿನಲ್ಲಿ ಇದ್ದರೂ ಕೂಡ ಆಡಿಟ್ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ಒಂದು ಸರಿಯಾದ ತಿದ್ದುಪಡಿಯನ್ನು ಮಾಡಿದರೆ, ಆಗ ಅವರು ಆಡಿಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ಕೇವಲ ಕೋರ್ಟಿನಲ್ಲಿ ಕೇಸ್ ಇದೆ ಎನ್ನುವ ಒಂದೇ ಕಾರಣಕೋಸ್ಕರ ಆಡಿಟ್ ಮಾಡದೇ ಇದ್ದರೇ ಇಷ್ಟೊಂದು ಸಿಬ್ಬಂದಿ ಇದ್ದು, ಏನು ಉಪಯೋಗ, ಅದಕ್ಕಾಗಿ ತಾವು ತರಬೇತಿಯಾದ ಸಿಬ್ಬಂದಿಯವರನ್ನು ನೇಮಕ ಮಾಡಬೇಕು. ಅದನ್ನು ತಾವು ಕೇವಲ ಬರೀ ಕಾನೂನು ಎಂದು ಹೇಳುತ್ತಾ ಹೋಗದೇ ನಾವು ೩೪ ಪರ್ಸೆಂಟ್ ಮಾಡಿದ್ದೇವೆಂದು ಹೇಳಿದರೆ ಸಾಲದು ಪ್ರತಿ ವರ್ಷವೂ ಆ ವರ್ಷದ್ದು ಆ ವರ್ಷವೇ ಆಡಿಟ್ ಆಗಲೇ ಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದು ಆಗದಿದ್ದರೆ ಸಹಕಾರ ಸಂಘಗಳು ಅಷ್ಟು ಸಂಧಾರಿಸುವುದಕ್ಕೆ ಸಾಧ್ಯವಿಲ್ಲ. ಅದು ಹೀಗೆಯೇ ಮುಂದಿನ ವರ್ಷಕ್ಕೆ ಪೆಂಡನ್ಸಿ ಉಳಿಯುತ್ತಾ ಹೋಗು

ತ್ತದೆ. ಆದುದರಿಂದ ಆ ರೀತಿ ಪೆಂಡೆನ್ಸಿಯಾಗದಂತೆ, ಕಡ್ಡಾಯವಾಗಿ ಆಡಿಟ್ ಮಾಡಲೇಬೇಕು ಆ ರೀತಿ ಮಾಡಿದರೆ ಕೂಡಲೇ ಸಹಕಾರ ಸಂಘಗಳಲ್ಲಿ ಲೋಪದೋಷಗಳೇನಾದರೂ ಇದ್ದರೆ ಆ ವರ್ಷವೇ ಸರ್ಕಾರದ ಗಮನಕ್ಕೆ ಬರುತ್ತದೆ. ಆಗ ಅವುಗಳನ್ನು ಸುಧಾರಿಸುವುದಕ್ಕೆ ಬರುತ್ತದೆ.

ಇನ್ನು ಎರಡನೆಯದಾಗಿ, ಮಾನ್ಯ ಕಾಗೋಡು ತಿಮ್ಮಪ್ಪನವರು ಇನ್ನೊಂದು ವಿಷಯದ ಬಗ್ಗೆ ಕಂಪ್ಲೇಂಟ್ ಮಾಡಿದರು ಅದು ಭೂ ಅಭಿವೃದ್ಧಿ ಬ್ಯಾಂಕ್‌ನ ಬಗ್ಗೆ. ಇದರಲ್ಲಿ ಹಣದ ದುರ್ವಿನಿಯೋಗ ವಾಗಿದೆಯೆಂದು ಹೇಳಿದರು. ಆದುದರಿಂದ ಅದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಹೇಳಬೇಕಾಗುತ್ತದೆ. ಈಗ ಒಂದು ಭಾವಿಗೆ ಸಾಲ ಕೊಟ್ಟರೆ ಮೊದಲು ಕೊಟ್ಟ ೪೦ ಪರ್ಸೆಂಟ್ ನಷ್ಟು ಹಣ ಅಲ್ಲಿ ವಿನಿಯೋಗ ವಾಗದೇ ಹೋದರೆ ಎರಡನೇ ಮೂರನೇ ಕಂತುಗಳನ್ನು ಕೊಡುವುದಿಲ್ಲ ಕಂಪ್ಲೀಷನ್ ರಿಪೋರ್ಟ್ ಬರುವ ವರೆಗೂ ಕೊನೆಯ ಕಂತಿನ ಹಣವನ್ನು ಮಂಜೂರು ಮಾಡುವುದಿಲ್ಲ ಆದುದರಿಂದ ಈಗ ಹಣ ದುರ್ವಿನಿಯೋಗ ವಾಗುವುದಕ್ಕೆ ಸ್ಕೋಪ್ ಕಡಿಮೆ ಇದೆಂದು ಹೇಳುತ್ತೇನೆ. ಸೂಪರ್‌ವೈಜರ್‌ರವರೆಲ್ಲಾ ಚೆಕ್ ಅಪ್ ಮಾಡುತ್ತಾರೆ. ಆದರೆ ಪಂಪ್ ಸೆಟ್‌ನಲ್ಲಿ ಸೆಕ್ರಟರಿ ಮತ್ತು ಸೂಪರ್‌ವೈಜರ್‌ರವರು ಕೂಡಿ ದರೆ ತಾವು ಹೇಳಿದ ಹಾಗೆ ಕೆಲವೊಂದು ಸಂದರ್ಭದಲ್ಲಿ ಮಾತ್ರ ಆಗಲಿಕ್ಕೆ ಸಾಧ್ಯವಿದೆ. ಪಂಪ್‌ಸೆಟ್‌ಗೆ ರಸೀತಿ ಬಂದ ಮೇಲೆ ಡೈರೆಕ್ಟ್ ಆಗಿ ಆ ಡೀಲರ್‌ಗೇ ಹಣ ಹೋಗುತ್ತದೆ ಆಗ ಡೀಲರ್ ಮತ್ತು ಸೆಕ್ರೆಟರಿಯವರು ಕೂಡಿ ಕೊಂಡರೆ ಆಗ ಮಾತ್ರ ಮಿಸ್‌ಚೀಫ್ ಮಾಡಲಿಕ್ಕೆ ಸಾಧ್ಯತೆ ಇದೆ ಅದು ಎಲ್ಲೋ ಕೆಲವು ಸಂದರ್ಭಗಳಲ್ಲಿ ತಾವು ಹೇಳಿದ ಹಾಗೆ ಆಗಬಹುದು ಆದುದರಿಂದ ಅಂಥಾ ಸಂದರ್ಭಗಳಲ್ಲಿ ಎಚ್ಚರಿಕೆಯಿಂದ ಇದ್ದು ಅದನ್ನು ಸರ್ಕಾರಕ್ಕೆ ತಿಳಿಸಿದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯ ವಾಗುತ್ತದೆ ಸಹಕಾರ ಸಂಘಗಳಲ್ಲಿ ಒಟ್ಟಿಗೆ ಹೇಳಬೇಕೆಂದರೆ, ಲಾಂಗ್ ಟರ್ಮ್, ಶಾರ್ಟ್ ಟರ್ಮ್ ಅಂದರೆ ಅರ್ಬನ್ ಬ್ಯಾಂಕುಗಳು ಆಗ್ರೋ ಇಂಡಸ್ಟ್ರೀಸ್ ಅದರಲ್ಲಿ ಸಕ್ಕರೆ ಫ್ಯಾಕ್ಟರಿ ವಿಂಗ್ ಏನಿದೆ ಅದು ಉತ್ತಮವಾಗಿ ಕೆಲಸ ಮಾಡಿವೆ ಕರ್ನಾಟಕದ ಅರ್ಬನ್ ಬ್ಯಾಂಕ್ ನಮ್ಮ ಭಾರತದಲ್ಲಿಯೇ ಒಂದನೇ ತರಗತಿ ಯಲ್ಲಿದೆ. ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳೇನಿವೆ ೧೮ರಲ್ಲಿ ೯ ಕಾರ್ಯಗತ ಆಗಿದೆ. ಎಷ್ಟು ಆಗ ಬೇಕಾಗಿತ್ತೋ ಅಷ್ಟು ಆಗದಿದ್ದರೆ ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್ ಆಗಿ ಜನರಿಗೆ ಕೆಲಸ ಸಿಗು ತ್ತಿತ್ತು. ಈ ಸಂದರ್ಭದಲ್ಲಿ ಸುಗರ್ ಫ್ಯಾಕ್ಟರಿ ವಿಷಯ ಹೇಳುವುದಾದರೆ ನನ್ನ ಕ್ಷೇತ್ರಕ್ಕೆ ಸಂಬಂಧ ಪಟ್ಟ ಹಾಗೆ ಕಳೆದ ೪ ವರ್ಷಗಳಿಂದ ಪದೇ ಪದೇ ಹೇಳುತ್ತಲೇ ಬಂದಿದ್ದೇವೆ ಇಚಲ ಕರಂಜಿಯ ಪಂಚಗಂಗಾ ಸಹಕಾರ ಸಕ್ಕರೆ ಕಾರ್ಖಾನೆ ಚಿಕ್ಕೋಡಿ ತಾಲ್ಲೂಕಿನಲ್ಲಿಯ ೧೩ ಹಳ್ಳಿಗಳಲ್ಲಿಯ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಕೆಲವೊಂದು ಸದಸ್ಯರನ್ನು ಹೊಂದಿದ್ದು, ಅಂದರೆ ೧೯೫೬ರಲ್ಲಿ ಅದು ಬೊಂಬಾಯಿ ಪ್ರಾಂತಕ್ಕೆ ಸೇರಿದ್ದಾಗಲೇ ನಾವು ಸದಸ್ಯರಾಗಿದ್ದೆವು. ಇವತ್ತು ಇಂಡಸ್ಟ್ರೀಸ್ ಡಿಪಾರ್ಟ್ ಮೆಂಟಿನವರು ಸುಗರ್ ಕೇನ್ ಕಂಟ್ರೋಲ್ ಆರ್ಡರ್ ತಂದಿರುವುದರಿಂದ ಅಲ್ಲಿಯ ಸದಸ್ಯರಿಗೂ ಕೂಡ ಕಬ್ಬನ್ನು ಕಳುಹಿಸುವುದಕ್ಕೆ ಅನುಕೂಲವಾಗುತ್ತಿಲ್ಲ. ಹೋದ ವರ್ಷ ನಾವು ಕೇಸ್ ಹಾಕಿದ್ದೆವು ಅದೆಲ್ಲಾ ವಿತ್ ಡ್ರಾ ಆಗುವ ಬಗ್ಗೆ ಪ್ರಯತ್ನ ಆಗಿದೆ ಆ ಆರ್ಡರ್‌ನಿಂದ ಕಬ್ಬನ್ನು ಆ ಫ್ಯಾಕ್ಟರಿಗೆ ಕಳು ಹಿಸುವುದಕ್ಕೆ ಅನುಕೂಲವಾಗುತ್ತಿಲ್ಲ ಇದರಿಂದಾಗಿ ಅಲ್ಲಿಯ ರೈತರಿಗೆ ೩-೪ ವರ್ಷಗಳಿಂದ ಬಹಳ ತೊಂದರೆ ಆಗುತ್ತಿದೆ. ಇದರಿಂದಾಗಿ ಅವರೆಲ್ಲಾ ಬಹಳ ತೊಂದರೆಯಲ್ಲಿದ್ದಾರೆ ಬೇಕು ಅಂತ ರೈತರಿಗೆ ತೊಂದರೆ ಕೊಡಬೇಕು ಎನ್ನುವ ಸಲುವಾಗಿ ಆ ಕಂಟ್ರೋಲ್ ಆರ್ಡರ್‌ನ್ನು ಚಿಕ್ಕೋಡಿ ಸಕ್ಕರೆ ಕಾರಖಾನೆಯವರು ಅಲ್ಲಿ ಪ್ರೆಸ್ ಮಾಡುತ್ತಿದ್ದಾರೆ. ೭-೮ ಸಾವಿರ ಎಕರೆಯ ಕಬ್ಬನ್ನು ಅಲ್ಲಿಯ ಶುಗರ್ ಫ್ಯಾಕ್ಟರಿಯಲ್ಲಿ ಕ್ರಷ್ ಮಾಡುವುದಕ್ಕೆ ಕ್ಯಾಪಾಸಿಟಿ ಇರುವಾಗ ಆ ರೀತಿ ಅಗ್ರಿಮೆಂಟ್ ಆಗಿದ್ದರೂ ಕೂಡ, ೧೫ ಸಾವಿರ ಎಕರೆ ವರೆಗೆ ನಮ್ಮಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ಅವಕಾಶವಿದ್ದಾಗ್ಯೂ ಕೂಡ ಅಲ್ಲಿಯ ರೈತರಿಗೆ ಕಬ್ಬನ್ನು ತಾವು ಸದಸ್ಯರಿರುವ ಪಂಚಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಮಯ್ಯಲು ಪ್ರತಿಬಂಧ ಮಾಡುತ್ತಿದ್ದಾರೆ ಅಲ್ಲಿರತಕ್ಕಂಥ ಸದಸ್ಯರೇ ಬೆಳೆದ ೭-೮ ಸಾವಿರ ಎಕರೆಯಲ್ಲಿಯ ಕಬ್ಬನ್ನು ಬೆಳೆದು ಸಪ್ಲೈ ಮಾಡಿದರೆ ಸಾಕು ಚಿಕ್ಕೋಡಿ ಕಾರಖಾನೆಗೆ ಕಬ್ಬು ಸಾಕಾಗುತ್ತದೆ ಹೀಗಿದ್ದರೂ ಅವರು ನನ್ನ ಕ್ಷೇತ್ರದ ಪಂಚ ಗಂಗಾ ಕಾರಖಾನೆಯ ಸದಸ್ಯರಿಗೆ ಜನರಿಗೆ ತೊಂದರೆ ಕೊಡು ಇದನ್ನು ನಾವು ೪ ವರ್ಷಗಳಿಂದ ಮಾನ್ಯ ಸಹಕಾರಿ ಸಚಿವರಿಗೂ ತಿಳಿಸಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳವರಿಗೂ ಕಾಗದ ಬರೆದು ತಿಳಿಸಿದ್ದೇವೆ. ಅದರ ಬಗ್ಗೆ ಯಾವ ಒಂದು ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಇವತ್ತು ನಾನು ಮನೆಗೆ ಹೋದರೆ ಅಲ್ಲಿಯ ಜನರು ನನ್ನನ್ನು ಹಿಡಿದುಕೊಳ್ಳುತ್ತಾರೆ ಮಾನ್ಯ ಸಹಕಾರ ಸಚಿವರ ನ್ನಾಗಲೀ ಮುಖ್ಯ ಮಂತ್ರಿಗಳವರನ್ನಾಗಲೀ ಅವರು ಹಿಡಿದುಕೊಳ್ಳುವುದಿಲ್ಲ. ನಾನು ಅಲ್ಲಿಯ ಜನರಿಗೆ

ನಾನು ಉತ್ತರ ಕೊಡಬೇಕು, ಆದುದರಿಂದ ಮಾನ್ಯ ಸಹಕಾರ ಸಚಿವರು ಇದರ ಬಗ್ಗೆ ಗಮನವಿಟ್ಟು ಕೂಡಲೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆ ಕಾರ್ಖಾನೆಯ ಸದಸ್ಯರ್ಯಾರು ಇದ್ದಾರೆ ಅವರೆಲ್ಲರೂ ಅಲ್ಲಿಗೆ ಕಬ್ಬನ್ನು ಹಾಯಲಿಕ್ಕೆ ಪರ್ಮಿಷನ್ ಕೊಟ್ಟರೆ ಜನರಿಗೆ ಸಹಾಯ ವಾಗುತ್ತದೆ ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆಂದು ನಾನು ಹೇಳುತ್ತೇನೆ. ಇಷ್ಟಲ್ಲದೇ ಸಹಕಾರಿ ಕಾನೂನಿಗೆ ಒಂದು ಅಮೆಂಡ್‌ಮೆಂಟನ್ನು ಮಾಡಿದ್ದಾರೆ. ಅದು ಏನೆಂದರೆ ಒಂದೇ ತರಹದ ಸಹಕಾರ ಸಂಘಗಳಲ್ಲಿ ಒಂದಕ್ಕಿಂತ ಜಾಸ್ತಿ ಸಂಘಗಳಲ್ಲಿ ಮೆಂಬರ್ ಆಗಿರ ಕೂಡದೆಂದು. ನಾವು ಹಿಂದೆಯೇ ಬೊಂಬಾಯಿ ಪ್ರದೇಶಕ್ಕೆ ಸೇರಿದ್ದಾಗಲೇ ಪಂಚಗಂಗಾ ಸಕ್ಕರೆ ಕಾರ್ಖಾನೆಯ ಸದಸ್ಯರಾಗಿದ್ದುದರಿಂದ ನಮಗೆ ಅದು ಅನ್ವಯವಾಗುವುದಿಲ್ಲ. ಆದರೆ ಚಿಕ್ಕೋಡಿ ಶುಗರ್ ಫ್ಯಾಕ್ಟರಿಯವರು ಅಲ್ಲಿಯ ಸದಸ್ಯರಿಗೆ ನಮಗೆ ನೋಟೀಸ್ ಕೊಟ್ಟಿದ್ದಾರೆ. ಮೆಂಬರ್ ಶಿಪ್ ರದ್ದು ಮಾಡಿದ್ದಾರೆ ಅದು ಕಾನೂನು ಬಾಹ್ಯಕ್ರಮ ಆದುದರಿಂದ ತಾವು ಇದರ ಬಗ್ಗೆ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಳೆದ ೨ ವರ್ಷಗಳಲ್ಲಿ ಎಷ್ಟೋ ಸಹಕಾರಿ ಸಂಘಗಳಿಗೆ ದುರಸ್ತಿ ಕಾಯಿದೆಗಳನ್ನು ಪಾಸ್ ಮಾಡಿದ್ದೇವೆ. ಅವು ಯಾವುವು ಎಂಬುದು ನನಗೆ ಕೂಡ ಜ್ಞಾಪಕಕ್ಕೆ ಬರುತ್ತಿಲ್ಲ. ಹಾಗೆಯೇ ೧೯–೨೦ ಆರ್ಡಿನೆನ್ಸ್‌ಗಳನ್ನು ಹೊರಡಿಸಿದ್ದೀರಿ, ಆದರೆ ಅವುಗಳ ಬಗ್ಗೆ ಇನ್ನು ರೂಲ್ಸ್ ಮಾಡದೇ ಇರುವುದರಿಂದ ಅವು ಹೇಗೆ ಕಾರ್ಯಗತ ಮಾಡುವುದಕ್ಕೆ ಬರುತ್ತದೆ. ಇವತ್ತು ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಸಾಕಷ್ಟು ಸಿಬ್ಬಂದಿ ಇದ್ದಾಗ್ಯೂ ಕೂಡ ಇನ್ನೂ ಏತಕ್ಕೆ ನೀವು ರೂಲ್ಸ್ ಮಾಡಿಲ್ಲ, ಅದು ಇನ್ನೂ ಆ್ಯಕ್ಟ್ ಆಗಿಲ್ಲ.

ಇನ್ನು ಅಪಲೇಟ್ ಟ್ರಿಬ್ಯೂನಲ್ಸ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಕೋಆಪರೇಟೀವ್ ಅಪಲೇಟ್ ಟ್ರಿಬ್ಯೂನಲ್ಸ್ ಕೆಲಸವನ್ನು ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್ ಕೆಲಸದೊಂದಿಗೆ ಜೋಡಿಸಿ ದ್ದಾರೆ. ಕೋ ಆಪರೇಟೀವ್ ಅಪಲೇಟ್ ಟ್ರಿಬ್ಯೂನಲ್ಸ್ ಬಹಳಷ್ಟು ಕೇಸಸ್‌ಗಳು ಬಹಳಷ್ಟು ಪೆಂಡಿಂಗ್ ಇವೆ. ನಿಕಾಲ್ ಆಗಿರುವ ಕೇಸುಗಳನ್ನು ನೋಡಿದರೆ ಬಹಳಷ್ಟು ಕಡಿಮೆ ಕೇಸುಗಳು ನಿಕಾಲಾಗಿವೆ. ಕೋ ಆಪರೇಟೀವ್ ಅಪಲೇಟ್ ಟ್ರಿಬ್ಯೂನಲ್ಸ್‌ಗಳಿಗೆ ಮೂರು ಜನರಿಗೆ ಬದಲಾಗಿ ಒಬ್ಬರನ್ನೇ ನೇಮಿಸಿ, ಪ್ರತ್ಯೇಕವಾಗಿ ಕೋ ಆಪರೇಟೀವ್ ಅಪಲೇಟ್ ಟ್ರಿಬ್ಯೂನಲ್ ಇರಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳಿಕೊಳ್ಳುತ್ತೇನೆ.

ಇನ್ನು ಸಹಕಾರಿ ಸಂಘಗಳ ಸಾಲಗಳ ರಿಕವರಿ ಬಗ್ಗೆ ಹೆಚ್ಚಿಗೆ ಮಹತ್ವ ಕೊಡಬೇಕಾದುದು ಬಹಳ ಮಹತ್ವದ ಅಂಶ. ನಮ್ಮ ಕಡೆ ಕೆಲವು ಡೆಪ್ಯೂಟಿ ಕಮೀಷನರುಗಳು ಟ್ರ್ಯಾಕ್ಟರ ಲೋನ್ ೪–೫ ಸಾವಿರ ರೂಪಾಯಿ ಇರುವಂತಾದ್ದಕ್ಕೆ ಕಾನೂನುಬದ್ಧವಾಗಿ ರಿಕವರಿ ಮಾಡುವುದಕ್ಕೆ ಸ್ಟೇ ಕೊಡುತ್ತಾರೆ, ಯಾವ ಕಾಯಿದೆ ಪ್ರಕಾರ ಸ್ಟೇ ಕೊಡುತ್ತಾರೆ. ಸ್ಟೇ ಕೊಡುವುದನ್ನು ತಪ್ಪಿಸುವುದಕ್ಕೆ ತಿದ್ದುಪಡಿ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಕೋ ಆಪರೇಟೀವ್ ಮೂವ್‌ಮೆಂಟ್ ಯಾವ ರೀತಿ ನಡೆದಿದೆ ಎನ್ನುವ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿ; ಆ ಸಮಿತಿಯ ಸಲಹೆ ಮತ್ತು ಸೂಚನೆಗಳನ್ನು ಪಡೆಯಬೇಕು. ನಾನು ಈ ಬಗ್ಗೆ ಎರಡು ವರ್ಷದ ಹಿಂದೆ ಒಂದು ಸಲಹೆ ಮಾಡಿದ್ದೆ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

ಕೋ ಆಪರೇಟೀವ್ ಅಡ್ವೈಸರಿ ಬೋರ್ಡ್ ಎಂದು ಇದೆ. ಅದು ಏನು ಕೆಲಸ ಮಾಡುತ್ತಿದೆಯೋ ನನಗಂತೂ ಅರ್ಥವಾಗುತ್ತಿಲ್ಲ, ಅದೇ ರೀತಿ ಯೂನಿಯನ್ ಕೋ ಆಪರೇಟೀವ್ ಅದೂ ಕೂಡ ಏನೂ ಕೆಲಸ ಮಾಡುತ್ತಿಲ್ಲ. ಫಾರ್ಮರ್ಸ್ ಕೋ ಆಪರೇಟೀವ್ ಸೊಸೈಟಿ ಚೆನ್ನಾಗಿ ಕೆಲಸ ಮಾಡುತ್ತಿದೆಯೋ ಇಲ್ಲವೇ ? ನನ್ನ ಮಟ್ಟಿಗೆ ಅದೂ ಕೂಡ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಯೂನಿಯನ್‌ಗಳಿಂದ ಹೆಚ್ಚಿಗೆ ಕೆಲಸ ತೆಗೆದುಕೊಳ್ಳಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೇ, ಕಾಗೋಡು ತಿಮ್ಮಪ್ಪ ನವರು ಹೇಳಿದಂತ ಮಾತುಗಳನ್ನು ಪುಷ್ಟೀಕರಿಸುತ್ತಾ ಒಂದೆರಡು ಮಾತುಗಳನ್ನು ಈ ಸಹಕಾರಿ ಇಲಾಖೆಯ ಬಗ್ಗೆ ಹೇಳುತ್ತೇನೆ. ನಾನಾದರೂ ಕೂಡ ಮಾನ್ಯ ಮಂತ್ರಿಗಳ ಬಗ್ಗೆ ಅತ್ಯಂತ ಗೌರವವನ್ನು ಇಟ್ಟುಕೊಂಡಿ ರತಕ್ಕ ವ್ಯಕ್ತಿ. ಆದರೆ, ಅವರ ಕಾಲದಲ್ಲಿ ಸಹಕಾರ ಇಲಾಖೆ, ಸ್ವಜನ ಪಕ್ಷಪಾತಿಗಳ, ಭ್ರಷ್ಟಾಚಾರಿಗಳ, ಸಮಾಜಘಾತುಕರ ಕೈಗೆ ಸಿಕ್ಕಿ ಸಹಕಾರ ಇಲಾಖೆಯ ಉದ್ದೇಶ ನೀರು ಪಾಲಾಯಿತು ಎಂದು ಬಹಳ ವ್ಯಥೆ ಯಿಂದ ಹೇಳುತ್ತಾ, ಕೆಲವು ಉದಾಹರಣೆಗಳನ್ನು ಅವರ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಹಕಾರ ಇಲಾಖೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ರೈತರಿಗೆ ಹಾಗೂ ದುರ್ಬಲವರ್ಗದವರಿಗೆ ರಕ್ಷಣೆ

ಸಿಗಬೇಕು. ಅವರ ಶೋಷಣೆ ಹೋಗಬೇಕು ಎನ್ನುವ ಮೂಲ ತತ್ವವನ್ನು ಈ ಸರ್ಕಾರ ಇಟ್ಟು ಕೊಂಡಿತ್ತು. ಆದಕ್ಕೆ ತದ್ವಿರುದ್ಧವಾಗಿ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದೆ ಮಾನ್ಯ ಮಂತ್ರಿಗಳು ತಾಲ್ಲೂಕು ಅಗ್ರಿಕಲ್ಚರಲ್ ಪ್ರೊಡ್ಯೂಸಿಂಗ್ ಸೊಸೈಟಿಯ ಬಗ್ಗೆ ನಡೆದಿರತಕ್ಕ ದುರ್ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯವನ್ನು ಸಭೆ ಮುಂದೆ ಇಟ್ಟು ಸಂಬಂಧಪಟ್ಟವರನ್ನು ಶಿಕ್ಷೆಗೆ ಗುರಿಪಡಿಸುತ್ತೇವೆಂದು, ಪೋಲಾಗಿರುವ ಹಣವನ್ನು ಅವರಿಂದ ವಸೂಲು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಇದುವರೆವಿಗೂ ಕೂಡ ಅವರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ, ಆ ವ್ಯಕ್ತಿಗೆ ಸಹಕಾರ ಇಲಾಖೆಯಿಂದ ಷೋಕಾಸ್ ನೋಟೀಸ್ ಕೊಡದೇ ಇರುವುದು ಅತ್ಯಂತ ಶೋಚನಿಯವಾದ ಸಂಗತಿಯಾಗಿದೆ. ಅಷ್ಟೇ ಅಲ್ಲ ನಮ್ಮ ಜಿಲ್ಲೆಯಲ್ಲಿರತಕ್ಕ, ಜಿಲ್ಲಾ ಸಹಕಾರಿ ಬ್ಯಾಂಕಿನ ೧೯೭೫-೭೬ನೇ ಸಾಲಿನ ಆಡಿಟ್ ವರದಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿನ ಆಡಳಿತ ವರ್ಗ ಸಾರ್ವಜನಿಕ ಹಣವನ್ನು ಯಾವ ರೀತಿ ಪೋಲು ಮಾಡಿದೆ ಎಂಬುದು ತಿಳಿಯುತ್ತದೆ. ಅಲ್ಲಿನ ಡೈರೆಕ್ಟರ್‌ರವರಿಗೆ ಸ್ಟಡಿ ಟೂರ್‌ಗಾಗಿ ೯ ಸಾವಿರ ಚಿಲ್ಲರೆ ಹಣವನ್ನು ಸರ್ಕಾರದ ಅನುಮತಿ ಇಲ್ಲದೆ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಡೆಪ್ಯೂಟಿ ರಿಜಿಸ್ಟ್ರಾರ್‌ರವರು ಯಾವುದೇ ರೀತಿಯ ವಿರೋಧವನ್ನು ಈ ವಿಚಾರದಲ್ಲಿ ವ್ಯಕ್ತಪಡಿಸಿಲ್ಲ. ವೈ. ಎನ್. ಹೊಸಕೋಟೆಯಲ್ಲಿರುವ ನೇಯ್ಗೆಯವರಿಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರಿಗೆ ಕೊಡದೆ ಸಕ್ಕರೆ, ಅಕ್ಕಿ ಮುಂತಾದ ಲಾಭದಾಯಕ ಪದಾರ್ಥಗಳಿಗೆ ಆ ದುಡ್ಡನ್ನು ಉಪಯೋಗಿಸಿಕೊಂಡಿದ್ದಾರೆ. ಇವತ್ತು ಅಲ್ಲಿ ದುಡ್ಡೂ ಇಲ್ಲ, ಸ್ಟಾಕೂ ಇಲ್ಲ ಇದು ಆಡಿಟ್ ವರದಿಯಲ್ಲಿದೆ. ಇವತ್ತು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕ ಸಹಕಾರಿ ಇಲಾಖೆಯ ಅಧಿಕಾರಿಗಳು ಪುಢಾರಿಗಳ ಕೈಗೊಂಬೆಗಳಾಗಿದ್ದಾರೆ. ಜಿಲ್ಲಾ ಬ್ಯಾಂಕಿಗೆ ಕೊಟ್ಟಿರತಕ್ಕ ಜೀಪು ೨೪ ಗಂಟೆ ಬೀರ್ ಅಂಗಡಿ ಮುಂದೆ, ಅರಾಕ್ ಅಂಗಡಿ ಮುಂದೆ, ಕಂಟ್ರಾಕ್ಟರ ಅಂಗಡಿ ಮುಂದೆ ನಿಂತಿರುತ್ತೆ. ಜೀಪು ಓಡಿಸುವ ಬಗ್ಗೆ ಯಾವುದೇ ಲೆಕ್ಕವನ್ನು ಇಟ್ಟಿಲ್ಲ. ೨೪ ಗಂಟೆಯೂ ಕೂಡ ಓಡಿಸುತ್ತಲೇ ಇರುತ್ತಾರೆ. ಇತ್ತೀಚೆಗೆ ಅಗ್ರಿಕಲ್ಚರಲ್ ಪ್ರೊಡ್ಯೂಸಿಂಗ್ ಸೊಸೈಟಿಯವರು ಜೀಪು ತೆಗೆದುಕೊಂಡಿದ್ದಾರೆ ಇದನ್ನು ಏತಕ್ಕೆ ಉಪಯೋಗಿಸುತ್ತಾರೋ ಗೊತ್ತಿಲ್ಲ. ಈ ರೀತಿಯ ದುರ್ವ್ಯವಹಾರ ನಡೆಯತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಆದರೂ ಅಲ್ಲಿನ ಅಧಿಕಾರಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

ಅಧ್ಯಕ್ಷರೇ, ಒಂದು ಮಾತನ್ನು ಕಳಕಳಿಯಿಂದ ಹೇಳಬೇಕಾಗಿದೆ. ಋಣ ಪರಿಹಾರ ಕಾನೂನನ್ನು ತಂದು ದುರ್ಬಲವರ್ಗಕ್ಕೆ ರಕ್ಷಣೆ ಕೊಡುತ್ತೇವೆಂದು ಹೇಳಿದರೂ, ಇವತ್ತಿಗೂ ಕೂಡ ಅದಕ್ಕೆ ಪರ್ಯಾಯವಾದ ಯಾವುದಾದರೂ ಒಂದು ಸಾಲದ ವ್ಯವಸ್ಥೆಯನ್ನಾಗಲೀ ಮಾಡಲಿಲ್ಲ. ಮಾನ್ಯ ಹಣಕಾಸಿನ ಸಚಿವರು ತಲಾ ೧೦೦ ೧೨೫ ರೂಪಾಯಿಗಳನ್ನು ಸೊಸೈಟಿಗಳ ಮೂಲಕ ಒದಗಿಸುವ ವ್ಯವಸ್ಥೆ ಮಾಡುತ್ತಿದ್ದೇವೆ; ಇದಕ್ಕಾಗಿ ೬ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಆದರೆ ಯಾರಿಗೆ ಕೊಟ್ಟಿದ್ದಾರೆ, ಎಷ್ಟು ಕೊಟ್ಟರು ಎನ್ನುವುದು ಗೊತ್ತಾಗಲಿಲ್ಲ. ನ್ಯಾಷನಲ್ ಬ್ಯಾಂಕ್‌ನಿಂದ ಹಣ ಕೊಡಿಸುತ್ತೇವೆಂದು ಹೇಳಿದರು ಸಹಕಾರ ಸಂಘಗಳಲ್ಲಿ ಕೊಡುವುದಕ್ಕೆ ದುಡ್ಡಿಲ್ಲ. ಅಧ್ಯಕ್ಷರೇ, ತಮ್ಮ ಮುಂಖಾಂತರ ಮಾನ್ಯ ಮಂತ್ರಿಗಳಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾರಾದರೂ ಕಡಿಮೆ ಬಡ್ಡಿಗೆ ಸಾಲ ಕೊಡುವವರಿದ್ದರೆ ಅವರಿಗೆ ಹಣ ಕೊಡಿಸತಕ್ಕ ವ್ಯವಸ್ಥೆ ಮಾಡಿ. ಅನುಚಾನವಾಗಿ ಹಳ್ಳಿಗಾಡಿನಲ್ಲಿ ಕಡಿಮೆ ಬಡ್ಡಿಗೆ ಕೊಡುವಂತಹವರಿದ್ದಾರೆ. ಅಂಥವರಿಗೆ ಅವಕಾಶ ಕೊಡಿ. ಅನೇಕ ಜನ ಮಾನ್ಯ ಸದಸ್ಯರು ಹರಿಜನ ಗಿರಿಜನರ ಬಗ್ಗೆ ಹಾಗೂ ದುರ್ಬಲ ವರ್ಗದವರ ಬಗ್ಗೆ ಮಾತನಾಡುತ್ತಾ ಹೇಳಿದ್ದಾರೆ. ಪ್ರಪ್ರಥಮವಾಗಿ ಹರಿಜನ ಗಿರಿಜನರ ಹಾಗೂ ದುರ್ಬಲ ವರ್ಗದವರ ಅಗ್ರಿಕಲ್ಚರ್ ಫಾರ್ಮೇಷನ್ ಸೊಸೈಟಿ ಮಾರಣಗೆರೆಯಲ್ಲಿ ಪ್ರಾರಂಭವಾಯಿತು. ಸುಮಾರು ೫೫ ಹರಿಜನ ಕುಟುಂಬಗಳು ಸುಮಾರು ೨೫ ವರ್ಷದಿಂದ ಈ ಸೊಸೈಟಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಸರ್ಕಾರ ಮೊನ್ನೆ ಮಾರ್ಕೆಟಿಂಗ್ ಕಮಿಟಿಗೆ ಎಲೆಕ್ಷನ್ ಮಾಡುವ ಸಂದರ್ಭದಲ್ಲಿ ಈ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದ್ದಾರೆ. ಮಾತೆತ್ತಿದರೆ ಹರಿಜನರನ್ನು ಉದ್ಧಾರ ಮಾಡುತ್ತೇವೆ, ಅವರಿಗೆ ರಕ್ಷಣೆ ಕೊಡುತ್ತೇವೆಂದು ಹೇಳುವ ಕಾಂಗ್ರೆಸ್ ಸರ್ಕಾರವೇ ಈ ರೀತಿ ಮಾಡಿದೆ. ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ ಇದರ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಬೇಕೆಂದು ಕೇಳುತ್ತೇನೆ. ಹರಿಜನರಿಗೆ ಖಂಡಿತವಾಗಿಯೂ ಅನ್ಯಾಯ ಮಾಡಬೇಡಿ.

ಕೊನೆಯದಾಗಿ ರೆಗ್ಯುಲೇಟೆಡ್ ಮಾರುಕಟ್ಟೆ ವಿಚಾರವಾಗಿ ಒಂದು ಮಾತು ಹೇಳುತ್ತೇನೆ. ಏಕೆಂದರೆ ಅವರ ವರದಿಯಲ್ಲಿಯೇ ಹೇಳಿದ್ದಾರೆ; ಸುಮಾರು ೪೪೦ ಕೋಟಿ ರೂಪಾಯಿಗಳ ವ್ಯವಹಾರ ನಮ್ಮ ರಾಜ್ಯದಲ್ಲಿ ರೆಗ್ಯುಲೇಟೆಡ್ ಮಾರುಕಟ್ಟೆಗಳ ಮುಖಾಂತರ ನಡೆದಿದೆ ಎಂದು. ಇವರು ಹಾಕಿರತಕ್ಕ ೨ ಪರ್ಸೆಂಟ್ ಸೆಸ್‌ನಿಂದ ೮೪ ಲಕ್ಷ ರೂಪಾಯಿ ವ್ಯವಸಾಯಗಾರರಿಂದ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ. ನಾನು ಹೇಳುತ್ತೇನೆ, ಹೆಚ್ಚಿನ ಭಾಗ ಸೆಸ್ಸನ್ನು ದಳ್ಳಾಳಿಗಳು ತೆಗೆದುಕೊಳ್ಳುತ್ತಿದ್ದಾರೆ. ರೈತನಿಗೆ ಎಷ್ಟರಮಟ್ಟಿಗೆ ರಕ್ಷಣೆ ಕೊಟ್ಟಿದ್ದೀರಿ. ತಿಪಟೂರು ಮಾರ್ಕೆಟ್ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅಲ್ಲಿ ನಡೆದಿರುವ ಅವ್ಯವಹಾರದ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಕಾಗದ ಬರೆದಿದ್ದೇನೆ ಅಲ್ಲಿರತಕ್ಕ ಕಾರ್ಯನಿರ್ವಾಹಕ ಮಂಡಲಿಯವರು ಗುಂಡಿ ತೆಗೆಯುವುದಕ್ಕಾಗಿ ಹಣ ಕೊಟ್ಟು ಎರಡು ವರ್ಷವಾಗಿದೆ, ಇದುವರೆಗೂ ಗುಂಡಿ ತೆಗೆದಿಲ್ಲ, ಇದು ಯಾರ ಹಣ ? ಅಲ್ಲಿ ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ಅದರ ಆಡಳಿತವನ್ನು ಭ್ರಷ್ಟಾಚಾರಿಗಳ ಕೈಗೆ ಕೊಟ್ಟು, ಎಲ್ಲ ರೀತಿಯಲ್ಲೂ ದುರುಪಯೋಗವಾಗಿದೆ. ಅಲ್ಲಿರತಕ್ಕ ಕಾರ್ಯದರ್ಶಿಯವರು ರೆಕಾರ್ಡುಗಳನ್ನೆಲ್ಲಾ ಮ್ಯಾನ್ಯುಪ್ಲೇಟ್ ಮಾಡಿದ್ದಾರೆ ಹೈಕೋರ್ಟಿನಲ್ಲಿಯೂ ಈ ವಿಚಾರ ಇದೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ; ಅಂಥ ಭ್ರಷ್ಟ ಅಧಿಕಾರಿಗಳನ್ನು ಇನ್ನೂ ಅತಿ ಹೆಚ್ಚಿನ ಸ್ಥಾನಕ್ಕೆ ನೇಮಿಸುವ ಸಂಭವ ಏನಿತ್ತು ? ಇಂಥ ದುರ್ವ್ಯವಹಾರವನ್ನು ನಡೆಸಿರುವ ಅಧಿಕಾರಿಗಳ ಬಗ್ಗೆ ಗಮನಕೊಡದೇ ಇರುವುದಕ್ಕೆ ಕಾರಣ ಏನು?

ಇವೊತ್ತು ವಿಶ್ವಬ್ಯಾಂಕಿನಿಂದ ಮಾರುಕಟ್ಟೆಗಳನ್ನು ಹೆಚ್ಚು ಹೆಚ್ಚು ಮಾಡಲಿಕ್ಕೋಸ್ಕರ ಸಾಲ ತೆಗೆದುಕೊಳ್ಳುತ್ತಾರೆ. ಯಾವ ಯಾವ ಮಾರುಕಟ್ಟೆಗಳು ಎಲ್ಲೆಲ್ಲಿ ಅಭಿವೃದ್ಧಿ ಹೊಂದಿಲ್ಲ ಅಲ್ಲಿ ಸೆಸ್ ಹಾಕಿ. ಇವೊತ್ತು ಎಲ್ಲಾ ಕಡೆ ಸೆಸ್‌ಗಳನ್ನು ರೈತರಿಗೆ ಹಾಕುವುದು ಉಚಿತವಲ್ಲ ಎಂದು ಹೇಳಬಯಸುತ್ತೇನೆ. ತಿಪಟೂರು ಮಾರುಕಟ್ಟೆಯಲ್ಲಿ ಕೇವಲ ಇಬ್ಬರು ವರ್ತಕರಿಗೋಸ್ಕರ ಹರಾಜು ನಿಲ್ಲಿಸಿದ್ದಾರೆ, ಅವರಿಗೆ ಲುಕ್ಸಾನು ಆಗುತ್ತದೆ ಎನ್ನುವ ದೃಷ್ಟಿಯಿಂದ ಅಲ್ಲಿ ಹರಾಜು ನಿಲ್ಲಿಸಿದ್ದಾರೆ. ಅಲ್ಲಿರತಕ್ಕ ಸೊಸೈಟಿಯನ್ನು ಇವರಿಂದ ಸೂಪರ್‌ಸೀಡ್ ಮಾಡಲಿಕ್ಕೆ ಆಗಿಲ್ಲ ಎಂದು ಹೇಳುತ್ತೇನೆ. ಇವೊತ್ತು ಹಳ್ಳಿಯಲ್ಲಿರತಕ್ಕ ಗ್ರಾಮಾಂತರ ಜನರಿಗೆ ಸರಿಯಾದ ರೀತಿಯಲ್ಲಿ ಎಸೆನ್‌ಷಿಯಲ್ ಕಮಾಡಿಟೀಸ್ ಸಹಕಾರ ಸಂಘಗಳ ಮುಖಾಂತರ ಹಂಚಬೇಕಾಗಿರುವುದರಿಂದ ಪಟ್ಟಣದಲ್ಲಿ ತೆರೆದಿರುವಂಥ ಜನತಾ ಬಜಾರುಗಳನ್ನು ತಾಲ್ಲೂಕು ಮಟ್ಟದಲ್ಲಿ ತೆರೆಯಬೇಕು ಎಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಎಂ. ಹೊರಕೇರಿ (ಗುಳೇದಗುಡ್ಡ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ ಈವರೆಗೆ ಅನೇಕ ಸ್ನೇಹಿತರು ಸಹಕಾರ ಬೇಡಿಕೆಯ ಮೇಲೆ ತಮ್ಮ ಮಾತುಗಳನ್ನು ಹೇಳಿದ್ದಾರೆ ನಾನು ಹೇಳುವುದು ಏನೆಂದರೆ, ಇವೊತ್ತು ಸಹಕಾರಿ ಸಚಿವರು ಮಂಡಿಸಿದ ಬೇಡಿಕೆಯನ್ನು ಸ್ವಾಗತಿಸಿ ಸಹಕಾರಿ ಬೇಸಾಯ ಸಂಘಗಳ ಕಾರ್ಯಕ್ರಮವನ್ನು ರಾಷ್ಟ್ರೀಯ ಮಹಾಪುರುಷರಾದ ಮಹಾತ್ಮ ಗಾಂಧಿಜಿಯವರೂ, ಗುರುದೇವ ಠಾಗೋರರವರು, ಪಂಡಿತ ನೆಹರೂರವರೂ, ಅರ್ಥಶಾಸ್ತ್ರಜ್ಞ ಡಾ. ಗಾಡಗೀಳರವರೂ, ಒಳ್ಳೆ ಆಸ್ಥೆ ವಹಿಸಿ ತುಂಬು ಹೃದಯದಿಂದ ಸಹಕಾರಿ ಬೇಸಾಯಕ್ಕೆ ಬೆಂಬಲ ಕೊಟ್ಟರು. ನಮ್ಮ ರಾಜ್ಯದಲ್ಲಿ ಸಹಕಾರ ಬೇಸಾಯವು ಕಳೆದ ಒಂದೆರಡು ದಶಕಗಳಿಂದ ಕಾರ್ಯಗತವಾಗುತ್ತಾ ಬಂದದ್ದೇನೋ ನಿಜ. ಸರಕಾರವು ಒಂದು ಯೋಜನೆಯನ್ನು ತಯಾರಿಸಿ ಮೂಲ ಪೀಠಿಕೆ ಹಾಕಿಕೊಂಡಿದ್ದಾಯಿತು. ಆದರೆ ಈ ಕಾರ್ಯಕ್ರಮವು ಅಷ್ಟೊಂದು ಸಮಾಧಾನಕರವಾಗಿ ಪ್ರಗತಿಯಾಗದೆ, ನಿರೀಕ್ಷಿಸಿದ ಫಲಿತಾಂಶವು ದೊರಕಲಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸರಕಾರದವರು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಕಷ್ಟು ಹಣದ ನೆರವನ್ನು ಒದಗಿಸಿ ಯಶಸ್ವಿ ಮಾಡಲು ಯತ್ನಿಸಿದ್ದಾಯಿತು. ಮಂದಗತಿಯಿಂದ ಕಾರ್ಯಕ್ರಮ ನಡೆಯಿತೇನೋ ನಿಜ. ಆದರೆ, ಇದರ ಬಗ್ಗೆ ಸರಕಾರ ಅಧಿಕಾರಿಗಳಲ್ಲಿಯೂ, ಜನತೆಯಲ್ಲಿಯೂ ಅನಾದರಣೆ ಭಿನ್ನಾಭಿಪ್ರಾಯ ಕಂಡುಬಂದವು. ಯಾವುದೇ ಸಹಕಾರಿ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಸ್ಥಳೀಯ ನಾಯಕತ್ವ (Local Leadership)ದ ಅಗತ್ಯವಿದೆ. ಆ ತರದ ನಾಯಕತ್ವವನ್ನು ಹುಟ್ಟಿಸುವಂತಹ ಯೋಜನೆ ಸರಕಾರ ಕೈಕೊಳ್ಳಬೇಕಾಗಿತ್ತು. ಎಲ್ಲರಿಗೂ ಗೊತ್ತಿದ್ದಂತೆ, ಸಹಕಾರಿ ಚಳವಳಿಯು ಸಮಸ್ತ ಯಶಸ್ವಿಯಾಗಬೇಕಾದರೆ, ಅಲ್ಲಿಯ ಸದಸ್ಯರ ನಾಯಕರ ಹೊಂದಾಣಿಕೆ ಸದ್ಭಾವನೆಯ ಪ್ರವೃತ್ತಿ ಅಗತ್ಯ. ಉತ್ತರ ಕರ್ನಾಟಕದಲ್ಲಿ ಒಂದು ನಾಣ್ಣುಡಿ ಇದೆ. ''ಆಳಿಗೆ ಆಳು ಕೂಡಿದರೆ ಮೇಳಾಗಲು (ಸಹಕಾರ ಮಾಡಲು) ಬೇನೆ ಬಂದಿತು'' ಎಂದು. ಇಂಗ್ಲಿಷಿನಲ್ಲಿ ನಾಣ್ಣುಡಿಯಂತೆ Each for all and all for each

ಎಂದು ಹೇಳುತ್ತಾರೆ. ಹೀಗೆ ನಾಣ್ಣುಡಿಯ ಸದ್ಭಾವನೆ ಇದ್ದಾಗ್ಯೂ ಇನ್ನೊಂದು ಮಾತಿನನ್ವಯದಂತೆ ಅಂದರೆ-Every Bodys' work is no bodys' work. ಅಂತಾ ನಮ್ಮ ಸಹಕಾರ ಚಳವಳಿ ಪ್ರಗತಿಯಾಗಿಲ್ಲ.

ಸಹಕಾರಿ ಬೇಸಾಯದಲ್ಲಿ ಸಾಧಕ ಭಾದಕ (merits and demerits) ಗಳು ಇವೆ. ಬಾಧಕಗಳಿಗಿಂತಲೂ, ಸಾಧಕಗಳು ಹೆಚ್ಚಾಗಿದ್ದಾಗ್ಯೂ, ಅವುಗಳ ಉಪಯೋಗ ಮಾಡಿಕೊಳ್ಳಲು, ನಮ್ಮ ಜನ ಮುಂದೆ ಬಾರದವರಾಗಿದ್ದಾರೆ. ಅದಕ್ಕೆ ಕಾರಣ ಜನತೆಯಲ್ಲಿಯ ಅಜ್ಞಾನತನ-ಹಾಗೂ ಒಂದುಗೂಡಿ ಹೋಗುವ ಭಾವನೆಯ ಅಭಾವ ಕಾರಣ. ಪೂರ್ವ ಜರ್ಮನಿಯಲ್ಲಿ ಈ ಸಹಕಾರ ಬೇಸಾಯ ತುಂಬಾ ಹಾಗೂ ತ್ವರಿತಗತಿಯಿಂದ ಮುಂದುವರಿದಿದ್ದು ನೂರಕ್ಕೆ ತೊಂಭತ್ತೈದು ಕ್ಷೇತ್ರ ಸಹಕಾರಿ ಬೇಸಾಯವನ್ನು ಅಳವಡಿಸಿಕೊಂಡದ್ದಾಗಿವೆ. ಈ ಸಹಕಾರಿ ಬೇಸಾಯದ ಕಾರ್ಯಕ್ರಮವು ಪುನರ್ವಸತಿ ಯೋಜನೆ ಹಾಗೂ ಅಭಿವೃದ್ಧಿ ಯೋಜನೆಯನ್ವಯ ನಮ್ಮ ಸರಕಾರ ಹಾಕಿಕೊಂಡಿತು. ಈ ಯೋಜನೆಯಲ್ಲಿ ಗ. ತಾಯಿಸಿದ ಹಣಕಾಸಿನ ಸಫಲತೆ ಅದರ ಲಾಭ ನಷ್ಟಗಳ ಮೇಲೆ ಅಳತೆ ಮಾಡದೇ, ಈ ಕಾರ್ಯಕ್ರಮದಲ್ಲಿ ತೊಡಗಿದ ಬಡ ಕುಟುಂಬಗಳ ಉದ್ಯೋಗ ಹಾಗೂ ಅವರು ನಡೆಯಿಸಿದ ಜೀವನವನ್ನು ನಾವು ಲಕ್ಷಿಸಬೇಕೇ ಹೊರತು ಉಳಿದದ್ದನ್ನಲ್ಲ.

ನಮ್ಮ ರಾಜ್ಯದ ಬೇಸಾಯ ಸಂಘದ ಕಾರ್ಯಕ್ರಮವನ್ನು ಸಿಂಹಾವಲೋಕನೆ ಮಾಡಿದಲ್ಲಿ ಕರ್ನಾಟಕ ರಾಜ್ಯದಲ್ಲಿ ೧೯೭೭ನೇ ಜೂನ್ ಅವಧಿಗೆ ೧೨ ಲಕ್ಷ ರೂಪಾಯಿ ಆರ್ಥಿಕ ನೆರವನ್ನು ಸುಮಾರು ೬೦೦ ಬೇಸಾಯ ಸಹಕಾರಿ ಸಂಘಗಳಿಗೆ, ಕೊಡಲಾಗಿತ್ತು. ಒಟ್ಟು ೬೫ ಸಾವಿರ ಎಕರೆಗೂ ಮಿಕ್ಕಿ ಈ ಕಾರ್ಯಕ್ರಮದಲ್ಲಿ ಅಳವಡಿಸಲಾಯಿತು. ಈ ಕ್ಷೇತ್ರದಲ್ಲಿ ಅಂದಾಜು ೪೦,೫೦೦ ಎಕರೆ ಭೂಮಿಯಲ್ಲಿ ಈ ಹಣಕಾಸಿನ ನೆರವು ಪಡೆದು ಸಾಗುವಳಿ ತರಲಾಯಿತು. ಜೊತೆಗೆ ಈ ಸಂಘದಲ್ಲಿ ತೊಡಗಿದ ಕುಟುಂಬಗಳ ಶ್ರಮ-ದಂಡಿಮೆ, ಮಾನವಿ, ಶಕ್ತಿ ಸಾಗುವಳಿ ಇವೆಲ್ಲ ಪರಿಗಣಿಸಿದಲ್ಲಿ ಸರಕಾರದಿಂದ ಪ್ರತಿ ಎಕರೆಗೆ ಪಡೆದ ೩೦೦ ರೂಪಾಯಿ ಆರ್ಥಿಕ ಸಹಾಯ ಜೊತೆಗೆ, ೭೦೦ ರೂಪಾಯಿ ಶ್ರಮ-ಇತರ ದುಡಿಮೆಯಿಂದ ದೊರೆತು ಪ್ರತಿ ಎಕರೆಗೆ ಒಂದು ಸಾವಿರ ರೂಪಾಯಿ, ಸಾಗುವಳಿ ಖರ್ಚು ಬಂದಂತಾಯಿತು. ಈ ಸರಕಾರದ ಹಣದಿಂದ ೧೬ ಸಾವಿರ ಬಡ ಕುಟುಂಬಗಳ ಹಾಗೂ ಚಿಕ್ಕ ಹಿಡುವಳಿದಾರರಿಗೆ ನೆರವು ಕೊಟ್ಟಂತಾಯಿತು. ಹೀಗೆ ಉದಾತ್ತವಾದ ಧ್ಯೇಯದಿಂದ ಪ್ರಾರಂಭವಾದ ಸಹಕಾರಿ ಬೇಸಾಯ ಮುಂದೆ, ಕ್ರಮೇಣ ಪ್ರಗತಿಯಾಗದೆ ಅದು ಕುಂಠಿತವಾಯಿತು. ಅದಕ್ಕೆ ಕಾರಣಗಳು ಅನೇಕವಾಗಿವೆ.

(1) want of awakening among illiterate small poor farmers regarding advantage of farming societies.

(2) Absence of favourable ideological atmosphere for co-operative farming.

(3) dearth of devoted deligent local leadership to guide and maintaining the co-operative farming societies.

(4 Lack of co-ordinated efforts and assistance to the farming societies.

ಈ ಸಹಕಾರಿ ಬೇಸಾಯದ ಅಗತ್ಯತೆಯು, ಇನ್ನು ಮುಂದೆ ನಮ್ಮ ರಾಜ್ಯದಲ್ಲಿ ಸರಕಾರ ಮುತುವರ್ಜಿ ವಹಿಸಿ ಕೈಕೊಳ್ಳಲೇಬೇಕಾಗಿದೆ. ರಾಜ್ಯಾದ್ಯಂತವಾಗಿ ಭೂ ಸುಧಾರಣೆ ಕಾಯ್ದೆ ಅಮಲು ಬಜಾವಣೆಯಿಂದ ಅನೇಕ ಭೂರಹಿತ ಕೃಷಿ ಕಾರ್ಮಿಕರಿಗೆ ಒಂದು ಘಟಕ ಅಂದಾಜು ೫ ಎಕರೆ ೧೬ ಗುಂಟೆ ಕ್ಷೇತ್ರ ಕೊಟ್ಟದಾಗಿದೆಯೇನೋ ನಿಜ. ಈ ಭೂಸುಧಾರಣೆ ಯೋಜನೆಯನ್ವಯ ದೊರೆತ ಭೂಮಿಯನ್ನು ಈ ಕೃಷಿ ಕಾರ್ಮಿಕರು, ಸಾಗುವಳಿಯನ್ನು ವ್ಯಕ್ತಿಗತ ಮಾಡಲು ಅನೇಕ ಸಮಸ್ಯೆಗಳು ಎದುರಿಸುತ್ತವೆ. ಸರಕಾರ ಕೊಡಲಿದ ಹಾಗೂ ಈಗಾಗಲೇ ಕೊಟ್ಟ ಭೂಮಿಯು ಒಂದು ಘಟಕವನ್ನು ಸಾಗುವಳಿ ಮಾಡಲು ಒಂದು ಜೊತೆ ಎತ್ತು, ಬಂಡಿ ಗಾಡಿ, ವ್ಯವಸಾಯ ಉಪಕರಣಗಳನ್ನು ಪ್ರತಿಯೊಬ್ಬರು ಇಡಲು ಲೆಕ್ಕಚಾರವಾಗುವುದಿಲ್ಲ. ಕನಿಷ್ಠ ೮-೧೦ ಜನ ಕೂಡಿದರೆ ಮಾತ್ರ ಸಹಕಾರದಿಂದ ಸಾಗುವಳಿ ಮಾಡಿದರೆ-ಕನಿಷ್ಠ ಸಾಗುವಳಿ ಒಂದು ಘಟಕ ಕ್ಷೇತ್ರವಾಗುತ್ತದೆ. ಈ ಕ್ಷೇತ್ರಕ್ಕೆ ಒಂದು ಜೊತೆ ಎತ್ತು, ಬಂಡಿಗಾಡಿ ಉಳಿದ ಕುಂಟೆ, ರೆಂಟೆ, ಇಡಲು ಸಾಧ್ಯ. ಆದಕಾರಣ ಭೂ ಸುಧಾರಣೆಯನ್ವಯ, ೩೦-೪೦ ಎಕರೆ, ಒಂದೆಡೆಗೆ

ಹಂಚಿದ ಭೂಮಿಯನ್ನು, ಪಡೆದ ಕೃಷಿ ಕಾರ್ಮಿಕರಿಗೆ, ಸಹಕಾರಿ, ತತ್ವದ ಮೇಲೆ ಸರ್ವೀಸ್ ಸೊಸೈಟಿಗಳೇನಾದರೂ, ಮಾಡಲು ಅನಿವಾರ್ಯವಾಗುತ್ತದೆ. ಸದ್ಯದಲ್ಲಿ ಸಹಕಾರಿ ಬೇಸಾಯ ಮಾಡಬೇಕು, ಅದಕ್ಕಾಗಿ, ಸರಕಾರ ಸಮಾಲೋಚಿಸಿ, ಭೂ ಸುಧಾರಣೆಯನ್ವಯ ಪಡೆದ ಭೂಮಿಗಳಲ್ಲಿ ಸರಿಯಾದ ಉತ್ಪಾದನೆ ಬರುವಂತೆ ಈ ಬಡಕುಟುಂಬಗಳಿಂದ ಭೂಮಿಯ ಸಾಗುವಳಿಯ ಕಾರ್ಯಕ್ರಮ ಕೈಕೊಳ್ಳಲು ಬಹಳ ಮಹತ್ವದ್ದು. ಇಲ್ಲವಾದರೆ, ಭೂ ಸುಧಾರಣೆಯ ಕಾಯ್ದೆಯನ್ವಯ ಸಾಗುವಳಿ ಕೊಟ್ಟ ಭೂಮಿಗಳ, ಹದವರಿತ ಸಾಗುವಳಿ ಹದ ಬೆದೆಗಳಲ್ಲಿ ಬಿತ್ತನೆ, ಒಕ್ಕುವ ಕೆಲಸ ಸರಿಯಾಗಿ ಆಗದೆ, ಭೂ ಸುಧಾರಣೆಯ, ಮುಖ್ಯ ಉದ್ದೇಶ ಸಾಧಿಸದ ಭೂಮಿ ಪಡೆದ ಬಡಕುಟುಂಬಕ್ಕೂ ಪರಿಹಾರ ದೊರಕಲಾರದೆ ನಿಷ್ಫಲವಾಗುತ್ತದೆ. ಅದಕ್ಕಾಗಿ, ಸಹಕಾರಿ ಕೃಷಿ ಸೇವಾ ಸಂಘವನ್ನಾಗಲಿ, ಸಹಕಾರಿ ಸಾಮೂಹಿಕ ಬೇಸಾಯ ಸಂಘವನ್ನಾಗಲಿ ರಚಿಸಲು ರಾಜ್ಯದ ಎಲ್ಲ ಕಡೆಗೂ ಸರಕಾರ ಕಾರ್ಯಕ್ರಮ ಹಾಕಿಕೊಳ ಬೇಕು.

ಕುಟುಂಬ ಯೋಜನೆಯನ್ನು ಯಾವರೀತಿ ಸರಕಾರ ನಿರ್ವಹಿಸಲು ಕಾರ್ಯಕ್ರಮವನ್ನು ಹಾಕಿಕೊಂಡಿದೆಯೋ ಹಾಗೆ, ರಾಜ್ಯಮಟ್ಟದಲ್ಲಿ ತಜ್ಞರ ಒಂದು ಸಮಿತಿ ನೇಮಿಸಿ ಅದರ ಮುಖಾಂತರ ಸಹಕಾರಿ ಬೇಸಾಯ ಸಂಘದ ಒಂದು ರಚನಾತ್ಮಕ ಕಾರ್ಯಕ್ರಮವನ್ನು ಹಾಕಿಕೊಂಡು, ಜಿಲ್ಲಾಮಟ್ಟದ ಮೇಲೆ ತಾಲೂಕು ಮಟ್ಟದ ಮೇಲೆ, ಕಾರ್ಯ ನಡೆಯಿಸಿದಲ್ಲಿ ಜನತೆಯಲ್ಲಿ ಜಾಗ್ರತೆ ಉಂಟಾಗುವದೆಂಬ ಭರವಸೆ ನನಗಿದೆ. ಈ ಚಳವಳಿಯಲ್ಲಿ ಆಸಕ್ತಿಯುಳ್ಳವರನ್ನು ತರಬೇತುಗೊಳಿಸಿ, ಈ ಮೊದಲೇ ಹೇಳಿದ ರೀತಿ, ಅಗತ್ಯವಿದ್ದಲ್ಲೆಲ್ಲ, ಈ ಸಹಕಾರಿ ಬೇಸಾಯವನ್ನು ಕಾರ್ಯಗತಗೊಳಿಸಬೇಕು. ಭಾರತ ಸೇವಕ ಸಮಾಜ, ಸೇವಾದಳ, ಕೃಷಿಕಸಮಾಜಗಳ ಮುಖಾಂತರವೂ ಈ ಕಾರ್ಯಕ್ರಮದ ಅಭಿವೃದ್ಧಿಯಾಗುವ ಯೋಜನೆ ಹಾಕಿಕೊಳ್ಳಬೇಕು. ಈಗಾಗಲೇ ಕಾರ್ಯಗತದಲ್ಲಿರುವ ಭೂ ಸೇನಾ ಕಾರ್ಪೊರೇಷನ್ Land Army Corporation Limited. ಮುಖಾಂತರವಾದರೂ ಈ ಕಾರ್ಯಕ್ರಮ ಹಾಕಿಕೊಳ್ಳುವುದರ ಸಾಧಕಭಾಧಕಗಳನ್ನು ಪರಾಮರ್ಶಿಸಬೇಕು. ಸೂಕ್ತವಾದ ಕಾರ್ಯಕ್ರಮ ಸಹಕಾರಿ ಕ್ಷೇತ್ರದಲ್ಲಿ ಕೈಕೊಳ್ಳುವುದಾಗಿ ಪ್ರಾರ್ಥನೆ. ಸಹಕಾರಿ ಬೇಸಾಯ ಸಂಘಗಳ ಮಾರ್ಗದರ್ಶನ ಮೇಲ್ವಿಚಾರಣೆ, ಹಾಗೂ ಅವುಗಳ ಉತ್ತೇಜನಾರ್ಥವಾಗಿ, ರಾಜ್ಯಮಟ್ಟದ ಮೇಲೆ, ಒಂದು ಸಹಕಾರಿ ಬೇಸಾಯ ಸಲಹಾಮಂಡಳವಿದ್ದು, ಸಹಕಾರಿ ಸಚಿವರ ನೇತೃತ್ವದಲ್ಲಿ ಆಗಾಗ್ಗೆ ಸಹಕಾರಿ ಬೇಸಾಯ ಸಂಘಗಳ ಸಮಸ್ಯೆಗಳನ್ನು ಸಮಾಲೋಚಿಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತಿತ್ತು. ೧೯೭೨ರ ಚುನಾವಣೆ ಮುನ್ನವೇ ಆ ಸಲಹಾ ಸಮಿತಿಯು ಕೊನೆಗಂಡಂತಾಯಿತೆಂದು ಹೇಳಬಹುದು. ಏಕೆಂದರೆ, ೧೯೭೨ರ ನಂತರ ಆ ಸಮಿತಿಯು ತನ್ನ ಕಾರ್ಯಾಚರಣೆಯುಲ್ಲವೆಂದು ಹೇಳಬಲ್ಲೆನು. ಅದರಂತೆ, ಜಿಲ್ಲಾಮಟ್ಟದ ಮೇಲೆ ಹಾಗೂ ರಾಜ್ಯಮಟ್ಟದ ಮೇಲೆ ಸಹಕಾರಿ ಬೇಸಾಯ ಫೆಡರೇಷನ್ನುಗಳು ರಚಿತವಾಗಿ, ಕಾರ್ಯಗತವಾಗಿದ್ದವು. ಪ್ರತಿ ವರುಷ ಸರಕಾರದಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ದೊರೆಯತಕ್ಕ ಹಣಕಾಸಿನ ನೆರವು ಪ್ರಾರಂಭದಲ್ಲಿ ಕೆಲವು ವರುಷ ದೊರೆತು ಮುಂದೆ ಸಿಗದಂತಾಗಿ ಅವುಗಳು ಸಹ ನಿಷ್ಕ್ರಿಯವುಳ್ಳವಾದವು, ಸದ್ಯಕ್ಕೆ ಸರಕಾರ ಈ ಫಾರ್ಮಿಂಗ್ ಸೊಸೈಟಿಗಳನ್ನು ಪುನರಾವಮರ್ಶಿಸಿ, ಪುನರ್ಘಟಿಸಿ, ಪುನಶ್ಚೇತನವನ್ನು ಉಂಟುಮಾಡಬೇಕು. ಅಗತ್ಯವಿದ್ದ ಹಣಕಾಸಿನ ನೆರವು ತಾಂತ್ರಿಕ ನೆರವು ಕೊಟ್ಟು ಸ್ಥಳೀಯ ನಾಯಕರನ್ನು ಒದಗಿಸಿ, ಈ ಸ್ಥಗಿತಗೊಂಡ ಸಂಘಗಳನ್ನು ಚುರುಕುಗೊಳಿಸಿದ್ದಲ್ಲಿ ರಾಜ್ಯಾದ್ಯಂತವಾಗಿ ೬೫ ಸಾವಿರ ಎಕರೆ ಕ್ಷೇತ್ರ ಭೂಮಿಯಲ್ಲಿ ವ್ಯವಸಾಯ ಉತ್ಪಾದನೆ ಮಾಡಿದಂತಾಗುತ್ತದೆ. ಜೊತೆಗೆ ಭೂ ಸುಧಾರಣೆ ಕಾಯ್ದೆಯನ್ವಯ, ಭೂರಹಿತ ಕೃಷಿಕ ಕಾರ್ಮಿಕರಿಗೆ ಕೊಟ್ಟ ಭೂಮಿಯಿಂದಲೂ, ವ್ಯವಸಾಯ ಉತ್ಪನ್ನಕ್ಕೆ ಅವಕಾಶ ಕೊಟ್ಟಂತಾಗುತ್ತದೆಂದು ಈ ಮೂಲಕ ತಿಳಿಸುವೆ. ಅದಕ್ಕಾಗಿ ಸರಕಾರ ಫಾರ್ಮಿಂಗ್ ಸೊಸೈಟಿಗಳ ಪುನರ್ಘಟನೆ, ಪುನಶ್ಚೇತನಕ್ಕಾಗಿ ಕ್ರಮ ಕೈಕೊಳ್ಳಲು ಪ್ರಾರ್ಥಿಸುವೆ. ಅಗತ್ಯವಿದ್ದ ಹಣಕಾಸಿನ ನೆರವು, ಕೊಡುವುದಲ್ಲದೆ ರಾಜ್ಯಮಟ್ಟದ ಸಹಕಾರಿ, ಬೇಸಾಯ ಸಲಹಾಮಂಡಲವಾಗಲಿ, ಸಹಕಾರಿ ಬೇಸಾಯ ಸಂಘಗಳ ಫೆಡರೇಶನ್ನಾಗಲಿ, ಜಿಲ್ಲಾಮಟ್ಟದ ಫೆಡರೇಶನ್ನುಗಳನ್ನು ಪುನರ್ಘಟಿಸಿ, ಚೇತನಗೊಳಿಸಬೇಕು. ಇನ್ನು ಗ್ರಾಮ ಸೇವಾ ಸಹಕಾರಿ ಸಂಘಗಳನ್ನು ಕುರಿತು, ಒಂದೆರಡು ಮಾತುಗಳನ್ನು ಹೇಳಬೇಕೆಂದರೆ. ಸರಕಾರವು ಇಂತಹ ಸಂಘಗಳ ಅವಶ್ಯ 'ಮೇಷನ' ಕಾರ್ಯಕ್ರಮ ಕೈಕೊಂಡು ಒಂದು ವೈಯಾಬಲ್ ಯೂನಿಟ್ ಆಗುವಂತೆ ಮಾಡಿ, ಒಂದು ವಿಧಾಯುಕ ರೀತಿಯಲ್ಲಿ ಕ್ರೆಡಿಟ್ ಬಿಸಿನೆಸ್ ಸರಿಯಾಗಿ ನಡೆಯುವಂತೆ, ಗ್ರಾಮ ಸಹಕಾರಿ ಸಂಘಗಳ ಮೂಲಕ ಪ್ರತಿಯೊಬ್ಬ ರೈತನಿಗೂ ಕೃಷಿ ಕಾರ್ಮಿಕರಿಗೂ ಹಳ್ಳಿಯ ಕೈಕಾರಿಕೆ ಕಾರ್ಮಿಕರಿಗೂ ಹಣಕಾಸಿನ ನೆರವು ಕೊಡುವಂತೆ ಯೋಚಿಸಿ ಕಾರ್ಯಕ್ರಮ ಹಾಕಿಕೊಂಡರು. ಗ್ರಾಮಾಂತರದ ಈ ಹೊಂದಾಣಿಕೆ ಹಾಗೂ ಸಹಕಾರವೃದ್ಧಿಗೆ ಈ ಯೋಜನೆಯನ್ವಯ ಉಂಟಾದ ಸಂಘಗಳ ರಚನೆ ವಿರುದ್ಧ ರಿಟ್ ಅರ್ಜಿ ಹಾಕಿ ಅನೇಕ ಸಂಘಗಳ ಸಾಲ ವಿತರಣೆ ಕಾರ್ಯಕ್ಕೆ ಆತಂಕವಾಗಿದೆ.

ಸಹಕಾರಿ ಸಂಘಗಳಿಗೆ ಬೆಳೆ ಸಾಲ ಕೊಡುವಾಗ ರಿಜರ್ವ್ ಬ್ಯಾಂಕಿನ ಧೋರಣೆಯನ್ವಯ, ಕೇಂದ್ರ ಸಹಕಾರಿ ಬ್ಯಾಂಕುಗಳು ಗ್ರಾಮ ಸಂಘಗಳಿಗೆ, ಎ ಬಿ.ಸಿ. ಕಾಂಪೋನೆಂಟ್ ಮೂಲಕ ಸಾಲ ಹಣ ಹಂಚುತ್ತಾರೆ. 'ಬಿ' ಕಾಂಪೋನೆಂಟ್ ದಲ್ಲಿಯು ಪ್ರಕಾರ ಬೀಜ, ಗೊಬ್ಬರ ರಸಾಯನ ಔಷಧಗಳನ್ನು (in kind) ಹಂಚುತ್ತಾರೆ. ರೈತ ತಾನು ಸಂಗ್ರಹಿಸಿದ ಬೀಜ, ಗೊಬ್ಬರಗಳನ್ನು ಸೆಂಟ್ರಲ್ ಬ್ಯಾಂಕಿನವರು ಗಣನೆಗೆ ತರಲಾರರು. ದಯವಿಟ್ಟು ಈ ಧೋರಣೆಯಲ್ಲಿ ಸೂಕ್ತ ಬದಲಾವಣೆಯಾಗಿ, ರೈತರಿಗೆ, ತಮಗೆ ಬೇಕಾದ ಶುದ್ಧ ಸುಧಾರಿಸಿದ ಬೀಜಗಳನ್ನು ತಮ್ಮ ಆಹಾರ ಧಾನ್ಯದ ಪೂರೈಕೆಗೆ ಕೊರತೆಯನ್ನುಂಟು ಮಾಡಿ ಸಂಗ್ರಹಿಸಿ, ಉಪಯೋಗಿಸುವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ರಾಸಾಯನಿಕ ಗೊಬ್ಬರ ಬದಲು, Farm yard manure, Compost manure...ಗಳನ್ನು ಸಂಗ್ರಹಿಸಿದನ್ನು ಗಣನೆಗೆ ತೆಗೆದುಕೊಂಡು ಅವುಗಳ ಬೆಲೆಯನ್ನು ನಗದು ಹಣದ ಮೂಲಕ ಸಾಲ ಪೂರೈಸುವ ವ್ಯವಸ್ಥೆಯಾಗಬೇಕು ಅದಕ್ಕಾಗಿ, ರಿಜರ್ವ್ ಬ್ಯಾಂಕಿನ ಸದಸ್ಯರು 'ಎ.ಬಿ.ಸಿ.' ಕಾಂಪೋನೆಂಟನಲ್ಲಿ ಸೂಕ್ತ ಬದಲಾವಣೆ ಮಾಡಲು ಪ್ರಾರ್ಥಿಸುವೆ. ಇಷ್ಟು ಹೇಳಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P.M.

† ಶ್ರೀ ಎಚ್. ಬಿ ಕೆಂಪೇಗೌಡ (ಕೃಷ್ಣರಾಜನಗರ) —ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಸಹಕಾರಿ ಖಾತೆಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ವಿರೋಧ ಮಾಡುತ್ತಾ ನಾಲ್ಕು ಮಾತುಗಳನ್ನಾಡಲು ಇಚ್ಛಿಸುತ್ತೇನೆ.

ಈ ಸಹಕಾರಿ ಕ್ಷೇತ್ರವು ಯಾವ ಉದ್ದೇಶಕ್ಕಾಗಿ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿತೋ ಆ ಉದ್ದೇಶ ಸಾಧನೆಯಾಗುತ್ತದೆಯೋ ಎನ್ನುವ ಅನುಮಾನ ಇವತ್ತು ಜನಗಳಲ್ಲಿ ಬಂದಿದೆ. ಏಕೆಂದರೆ. ಈ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದಿದ್ದು ಬಡವಾಳ ಶಾಹಿಗಳಿಂದ ದುರ್ಬಲ ವರ್ಗದವರ, ರೈತರ ಶೋಷಣೆ ಆಗುತ್ತಿರುವುದನ್ನು ತಪ್ಪಿಸಬೇಕೆಂಬ ದೃಷ್ಟಿಯಿಂದ. ಆದರೆ ಇವತ್ತು ವಾಸ್ತವವಾಗಿ ಈ ಸಹಕಾರ ಸಂಘಗಳು ವ್ಯಾಪಾರ ಕೇಂದ್ರಗಳಾಗಿ ಸ್ವಾರ್ಥಿಗಳ ಕೈಗೆ ಸೇರಿದೆ ಇದರ ಜೊತೆಗೆ ಸಹಕಾರ ಸಂಘಗಳ ಸೆಕ್ರಟರಿಗಳು, ಡೈರೆಕ್ಟರ್‌ಗಳೊಡನೆ ಸರ್ಕಾರದಲ್ಲಿರತಕ್ಕ ಅಧಿಕಾರಿಗಳೂ ಶಾಮೀಲಾಗಿ ಲಂಚ ಹೊಡೆಯುವುದಕ್ಕೆ ಸಾಕಷ್ಟು ಅವಕಾಶವಾಗಿದೆ. ಇದರಿಂದಾಗಿ ಬಹಳಷ್ಟು ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ವಾಗುವುದಕ್ಕೆ ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸ್ವಾಮಿ. ಈ ಸಂದರ್ಭದಲ್ಲಿ ತಮಗೆ ಒಂದು ಉದಾಹರಣೆ ಹೇಳುವುದಾದರೆ, ನಮ್ಮ ತಾಲ್ಲೂಕು ಹೆಚ್ಚು ಭತ್ತ ಬೆಳೆಯತಕ್ಕ ಪ್ರದೇಶ. ಅಲ್ಲಿ ಸುಮಾರು ೬ ಲಕ್ಷ ಪ್ರೈಮರಿ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ. ಕೃಷ್ಣರಾಜನಗರ ತಾಲ್ಲೂಕಿನಲ್ಲಿರುವ ಪ್ರತಿಯೊಂದು ಸೊಸೈಟಿಗಳಲ್ಲೂ ೨೦ ಸಾವಿರ, ೩೦ ಸಾವಿರ, ೪೦ ಸಾವಿರ, ಕೆಲವು ಸೊಸೈಟಿಗಳಲ್ಲಿ ಸುಮಾರು ೯೦ ಸಾವಿರ ರೂಪಾಯಿಗಳವರೆಗೂ ಹಣ ದುರುಪಯೋಗವಾಗಿದೆ. ಈ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡತಕ್ಕ ಸಂದರ್ಭದಲ್ಲಿ ಸಹಕಾರಿ ಇಲಾಖೆಯ ಅಧಿಕಾರಿಗಳು ನನ್ನನ್ನು ಇವರ ಬಗ್ಗೆ ಒಂದು ಲಿಸ್ಟ್ ಕೊಡಿ ಎಂದು ಕೇಳಿದರು. ಸ್ವಾಮಿ, ನಾನು ಹೇಳುತ್ತೇನೆ. ಇವತ್ತು ಈ ಸಹಕಾರಿ ಕ್ಷೇತ್ರವನ್ನು ಶುದ್ಧೀಕರಣ ಮಾಡಬೇಕಾದರೆ, ಲಂಚದ ಹಾವಳಿಯಿಂದ ದೂರ ಮಾಡಬೇಕಾದರೆ ಇಲ್ಲಿಗೆ ಪ್ರಾಮಾಣಿಕರಾದವರನ್ನು, ನಿಷ್ಠೆಯಿಂದ ಜನ ಹಿತಕ್ಕಾಗಿ ದುಡಿಯುವವರನ್ನು, ಶುದ್ಧಹಸ್ತರನ್ನು ನೇಮಕ ಮಾಡಬೇಕು. ಇಲ್ಲದೇ ಹೋದರೆ ಈ ಸಹಕಾರ ಸಂಘಗಳು ಸರಿಯಾಗಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಒಂದು ಸಾರಿ ಸಹಕಾರಿ ಇಲಾಖೆಯ ಬಗ್ಗೆ ಮಾತನಾಡಬೇಕೆಂದು ಇಚ್ಛೆಪಟ್ಟೆ. ಆದರೆ ನಮ್ಮ ಡಿಸ್ಟ್ರಿಕ್ಟ್‌ನವರೇ ಈ ಇಲಾಖೆಯ ಮಂತ್ರಿಗಳಾಗಿದ್ದುದರಿಂದ ನಾನು ಏನನ್ನೂ ಮಾತನಾಡುವುದಕ್ಕೆ ಹೋಗಲಿಲ್ಲ. ಸಾಮಾನ್ಯವಾಗಿ ಈ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ವಾಗುತ್ತದೆ ಎಂದು ಎಲ್ಲ ಕಡೆಗಳಿಂದಲೂ ದೂರುಗಳು ಬರುತ್ತವೆ. ಆದರೆ ಎಲ್ಲ ಸಹಕಾರ ಸಂಘಗಳಲ್ಲೂ ಮಿಸ್ ಅಪ್ರೊಪ್ರಿಯೇಷನ್ ಆಗುತ್ತಿದೆಯೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಮಗೆ ಒಂದು ಉದಾಹರಣೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಭತ್ತ ಬೆಳೆಯುತ್ತಾರೆ. ಅಲ್ಲಿರತಕ್ಕ ಟಿ.ಎ ಪಿ.ಸಿ.ಎಂ.ಎಸ್. ಏನಿದೆ ಅದಕ್ಕೆ ಕಮ್ಯುನಿಕೇಷನ್ ಸೌಕರ್ಯ ಇದೆ. ಮತ್ತಿತರೇ ಸೌಕರ್ಯಗಳಿವೆ. ಆದರೂ ಕೂಡ ಇದು ಪ್ರತಿ ವರ್ಷ ೧ ಲಕ್ಷ, ೨ ಲಕ್ಷ, ೩ ಲಕ್ಷ ಲಾಸ್‌ನಲ್ಲಿ ನಡೆಯುತ್ತಿದೆ. ಹೀಗಿದ್ದರೂ ಅಲ್ಲಿನ ಡೈರೆಕ್ಟರ್‌ಗಳು ಒಬ್ಬರಿಗೊಬ್ಬರು ಬಹಳ ಪೈಪೋಟಿಯಿಂದ ಕೆಲಸ ಮಾಡುತ್ತಿದ್ದಾರೆ. ಹಣ ದುರುಪಯೋಗ ಮಾಡಿದ್ದಾರೆಂದು ಅಪಾದನೆಗೆ ಒಳಗಾಗಿದ್ದ ಒಬ್ಬರು ಈ ಸಾರಿ ಅಲ್ಲಿನ ಸಹಕಾರ ಸಂಘದ

ಡೈರೆಕ್ಟರ್ ಆಗಲು ಓಡಾಡುತ್ತಿದ್ದರು. ಆದರಲ್ಲಿ ನಮ್ಮ ಡಿಸ್ಟ್ರಿಕ್ಟ್‌ನ ಮಂತ್ರಿಗಳೊಬ್ಬರು ಹಸ್ತಕ್ಷೇಪ ಮಾಡಿದ್ದಾರೆಂದು ಹೇಳಬಯಸುತ್ತೇನೆ. ಆದಗೆ ಇಲ್ಲಿ ಮಾನ್ಯ ರಂಗನಾಥ್‌ರವರು ಇರುವುದರಿಂದ ವಿಷಯವನ್ನು ಹೇಳುತ್ತಿದ್ದೇನೆ. ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಮ್ಮ ಜಿಲ್ಲೆಯ ಮಂತ್ರಿಗಳು ಎಂದು ಹೇಳಿದರು. ಆದರೆ ಅವರ ಜಿಲ್ಲೆಯ ೩-೪ ಜನ ಮಂತ್ರಿಗಳಿರುವುದರಿಂದ ಯಾರು ಎಂಬುದನ್ನು ಮಾನ್ಯ ಸದಸ್ಯರು ನೇರವಾಗಿ ಸ್ಪಷ್ಟವಾಗಿ ಹೇಳಬೇಕು. ಹಾಗೆ ಹೇಳುವುದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಎಚ್. ಬಿ. ಕೆಂಚೇಗೌಡ.—ಮಾನ್ಯ ಲಿಂಗಪ್ಪನವರು ೧೭ ವರ್ಷದಿಂದ ಪ್ರೆಸಿಡೆಂಟ್ ಆಗಿ ವ್ಯವಹಾರ ನಡೆಸಿದ್ದಾರೆ. ಅಲ್ಲಿ ನಡೆದಿರುವ ವ್ಯವಸ್ಥೆಯನ್ನು ಹೇಳುವುದಾದರೆ ಫಿಕ್ಸೆಡ್ ಡಿಪಾಸಿಟ್‌ನಲ್ಲಿ ೨೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ, ೭ ಲಕ್ಷ ರೂಪಾಯಿಗಳನ್ನು ಆದಾಯ ಮಾಡಿದ್ದಾರೆ. ಪ್ರತಿ ವರ್ಷ ಬೋನಸ್ ಕೊಡುತ್ತಿದ್ದಾರೆ. ಸುಮಾರು ೩೫ ಲಕ್ಷ ರೂಪಾಯಿ ಬಂಡವಾಳ ಮಾಡಿದ್ದಾರೆ. ಇವತ್ತು ಏನಾಗಿದೆ ಎಂದರೆ ಯಾರ್ಯಾರು ತ್ಯಾಗಮಯ ದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ, ಪ್ರಾಮಾಣಿಕವಾಗಿ ಕೆಲಸ ಮಾಡುವವರಿದ್ದರೆ ಅಂಥವರನ್ನು ನಿವೃತ್ತಿಗೊಳಿಸುವುದಕ್ಕೆ ಅವಕಾಶವಾಗಿದೆ. ಸ್ವಾಮಿ ಈ ಸೊಸೈಟಿಗಳ ಪುನರ್ವಿಂಗಡಣೆ ಕಾಲದಲ್ಲಿ ನಮ್ಮ ಜಿಲ್ಲೆಯಲ್ಲಿ ಏನಾಗಿದೆ ಎಂಬ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಪಿರ್ಲೆ ಎಂಬ ಊರಿನ ಸೊಸೈಟಿಯಲ್ಲಿ ಸುಮಾರು ೭೦-೮೦ ಸಾವಿರ ರೂಪಾಯಿವರೆಗೂ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಯಾರ ಮೇಲೆ ಸುಮಾರು ೩೨ ಸಾವಿರ ರೂ. ವರೆಗೆ ದಾವಾ, ಡಿಕ್ರಿ ಆಗಿ ವಾರೆಂಟ್ ಇತ್ತೋ ಅಂಥವರು ಆ ಸೊಸೈಟಿಯ ಡೈರೆಕ್ಟರ್ ಆಗುವುದಕ್ಕೆ ಪ್ರಯತ್ನ ಮಾಡಿದ್ದರು. ಈ ವಿಷಯ ಮಾನ್ಯ ಸಚಿವರಿಗೆ ಗೊತ್ತಾದ ಮೇಲೆ ಅವರಿಗೆ ಅಲ್ಲಿ ಅವಕಾಶ ಕೊಡಲಿಲ್ಲ.

ಮಾನ್ಯ ಅಧ್ಯಕ್ಷಿಣಿಯವರೇ, ಇವತ್ತು ಅನೇಕ ದೊಡ್ಡ ದೊಡ್ಡ ಉದ್ಯಮಗಳು ಸಹಕಾರಿ ತತ್ವದ ಮೇಲೆ ನಡೆದಿವೆ. ಉದಾಹರಣೆಗೆ ಹೇಳುವುದಾದರೆ ಸಾಮಾನ್ಯವಾಗಿ ಸಕ್ಕರೆ ಕಾರ್ಖಾನೆಗಳು ಬಹಳ ಯಶಸ್ವಿಯಾಗಿ ನಡೆದಿವೆ. ಸಂಕೇಶ್ವರ ಷುಗರ್ ಫ್ಯಾಕ್ಟರಿಗೆ ನಾನು ಹೋಗಿ ನೋಡಿದ್ದೇನೆ. ಅದು ಬಹಳ ವ್ಯವಸ್ಥಿತವಾಗಿತ್ತು. ರೈತರು ಒಂದು ಕಾಲದಲ್ಲಿ ಒಂದು ಟನ್ ಕಬ್ಬನ್ನು ೨೧೦ ರೂಪಾಯಿಗೆ ಕೊಟ್ಟಿದ್ದಾರೆ. ಅದೇ ರೀತಿ ಪಾಂಡವಪುರ ಕಾರ್ಖಾನೆಯಲ್ಲೂ ಕೂಡ ನಡೆದಿದೆ. ನಾನು ವಿಧಾನಸಭಾ ಸದಸ್ಯನಾದ ಮೇಲೆ ಒಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕೆಂದು ಪ್ರಯತ್ನ ಪಟ್ಟೆ. ಇದನ್ನು ಒಂದು ಕೋ-ಆಪರೇಟೀವ್ ಬೇಸಿಸ್ ಮೇಲೆ ಸಹಕಾರಿ ಕ್ಷೇತ್ರದಲ್ಲಿ ಪ್ರಾರಂಭ ಮಾಡಬೇಕೆಂದು ತೀರ್ಮಾನವಾಯಿತು. ಇದಕ್ಕೆ ಯಾರಾದರು ಸತವಂತರು, ಪ್ರಾಮಾಣಿಕರು, ದಕ್ಷರಾದವರನ್ನು ಪ್ರಮೋಟ್ ಮಾಡಬೇಕೆಂಬ ವಿಚಾರ ಬಂತು. ಆಗ ನಮ್ಮ ತಾಲ್ಲೂಕಿನ ರೈತರೆಲ್ಲ ಸೇರಿ ನನ್ನನ್ನು ಪ್ರಮೋಟ್ ಮಾಡಿದರು. ನಾನು ಸಕ್ಕರೆ ಕಾರ್ಖಾನೆಯನ್ನು ತೆರೆಯಲೇಬೇಕು ಎಂದು ಹೊರಟು ನಾಲ್ಕಾರು ತಿಂಗಳ ಕಾಲದಲ್ಲಿಯೇ ೬ ಲಕ್ಷ ರೂಪಾಯಿಗಳ ಷೇರನ್ನು ಸಂಗ್ರಹ ಮಾಡಿದೆನು. ೨೯ನೇ ಆಗಸ್ಟ್ ೧೯೭೩ರಲ್ಲಿ ಅದನ್ನು ರಿಜಿಸ್ಟರ್ ಮಾಡಿದ್ದಾಯಿತು. ಮುಂದೆ ೩೦ನೇ ಸೆಪ್ಟೆಂಬರ್ ೧೯೭೩ರಲ್ಲಿ ಸರ್ವಸದಸ್ಯರ ಸಭೆಯನ್ನು ಕರೆಯಲಾಯಿತು. ಷೇರು ಹಣ ಸುಮಾರು ಆರು ಲಕ್ಷ ರೂಪಾಯಿಗಳಷ್ಟು ಕಲೆಕ್ಟ್ ಆದಮೇಲೆ ರಿಜಿಸ್ಟರ್ ಆದಮೇಲೆ ಒಂದು ಬೈಲಾವನ್ನು ತಯಾರುಮಾಡಿ ಸರ್ಕಾರದಿಂದ ಷೇರು ಹಣವನ್ನು ಪಡೆದದ್ದು ಆಯಿತು. ಸರ್ಕಾರದಿಂದ ಷೇರು ಪಡೆದ ಮೇಲೆ ಮಿತ್ರಿತರ ಸಂಸ್ಥೆಗಳಿಗೆ ಸರ್ಕಾರದ ಪರವಾಗಿ ಮ್ಯಾನೇಜಿಂಗ್ ಡೈರೆಕ್ಟರನ್ನು ನೇಮಿಸುವುದು ನಿಯಮವಿರುತ್ತದೆ. ಆದರೆ ನಮ್ಮಲ್ಲಿ ಮಂಡಲಿ ನೇಮಕ ಮಾಡುವಂಥ ಪ್ರಮೋಟರ್‌ರವರೇ ಚೇರ್‌ಮನ್‌ರಾಗಿರಬೇಕೆಂದು ತೀರ್ಮಾನವಾಗಿ ನನ್ನನ್ನೇ ಚೇರ್‌ಮನ್‌ರಾಗಿ ಆಯ್ಕೆ ಮಾಡಿದರು. ಇನ್ನು ಸರ್ಕಾರಿ ಪರವಾಗಿ ಮ್ಯಾನೇಜಿಂಗ್ ಡೈರೆಕ್ಟರನ್ನು ತೆಗೆದುಕೊಂಡರೆ ಸುಮಾರು ತಿಂಗಳಿಗೆ ಎರಡು ಸಾವಿರ ರೂಪಾಯಿಗಳ ಸಂಬಳವನ್ನು ಕೊಡಬೇಕಾಗುತ್ತದೆ, ಇದು ಸಂಘಕ್ಕೆ ಹೆಚ್ಚಿನ ಹೊರೆಯಾಗುತ್ತದೆ ಎಂದು ಹೇಳಿ ನಾನೇ ಮ್ಯಾನೇಜಿಂಗ್ ಡೈರೆಕ್ಟರು ಮತ್ತು ಚೇರ್‌ಮನ್ನಾಗಿ ಕೆಲಸವನ್ನು ನಿರ್ವಹಿಸಬೇಕಾಯಿತು. ಈ ಸಂದರ್ಭದಲ್ಲಿ ಸುಮಾರು ಪುನಹ ೪-೬ ತಿಂಗಳಲ್ಲಿಯೇ ೧೦ ಲಕ್ಷ ರೂಪಾಯಿಗಳಷ್ಟು ಷೇರು ಹಣವನ್ನು ವಸೂಲು ಮಾಡಿ ವ್ಯವಸ್ಥೆ ಮಾಡುವ ಕಾಲದಲ್ಲಿ ೧೭ನೇ ನವೆಂಬರ್ ೧೯೭೩ ರಿಂದ ೩೧ನೇ ಮೇ ೧೯೭೪ರ ವರೆಗೆ ೧೦ ಲಕ್ಷ ರೂಪಾಯಿ ಷೇರು ಹಣವನ್ನು ಸಂಗ್ರಹಿಸಿ ಸಂಸ್ಥೆಗೆ ಬೇಕಾದ ಮ್ಯಾನೇಜರ್, ಗುಮಾಸ್ತರು, ಅಕೌಂಟೆಂಟ್ ಮತ್ತು

ಕಾರ್ ಡ್ರೈವರು ಇತ್ಯಾದಿ ಇವೆಲ್ಲ ವ್ಯವಸ್ಥೆಯನ್ನು ಮಾಡಿದ್ದಾಯಿತು. ಸಂಘಕ್ಕೆ ಹೆಚ್ಚು ಖರ್ಚಾಗಬಾರದೆಂದು ನಾನು ಮ್ಯಾನೇಜಿಂಗ್ ಡೈರೆಕ್ಟರಾಗಿದ್ದುಕೊಂಡು ಸಂಬಳವನ್ನು ತೆಗೆದುಕೊಂಡಿಲ್ಲ. ಟಿ.ಎ. ಡಿ.ಎ. ತೆಗೆದುಕೊಂಡಿಲ್ಲ. ನನ್ನ ಜೊತೆಯಲ್ಲಿದ್ದ ಎಷ್ಟೋ ಜನ ಡೈರೆಕ್ಟರ್‌ರಾಗಿ ಕೆಲಸ ಮಾಡಿದವರು ಅವರೂ ಸಹ ಟಿ.ಎ. ಡಿ.ಎ. ತೆಗೆದುಕೊಂಡಿಲ್ಲ. ಸಂಬಳ ತೆಗೆದುಕೊಂಡಿಲ್ಲ. ಜನರಲ್ ಬಾಡಿ ಮೀಟಿಂಗ್ ಮಾಡಿದಾಗ ೧೫೦೦ ಜನಕ್ಕೆ ಊಟ ಉಪಚಾರ ಮಾಡಿದ್ದಕ್ಕಾಗಿ ಎರಡು ಸಾವಿರ ರೂಪಾಯಿಗಳಷ್ಟು ಖರ್ಚು ಬಂದರೂ ಅದನ್ನು ಫ್ಯಾಕ್ಟರಿಯ ಲೆಕ್ಕದಿಂದ ತೆಗೆದುಕೊಂಡಿರುತ್ತೇವೆಂದು ಕಡಿಮೆ ಖರ್ಚಿನಲ್ಲಿ ಮಾಡಲು ಸಾಧ್ಯವಿತ್ತೆಂದು ಸಂಸ್ಥೆಗೆ ನಷ್ಟ ಮಾಡಿದಿರಿ ಎಂದು ನನ್ನ ಮೇಲೆ ಅಪಾದನೆಯನ್ನು ಹೊರಿಸಲಾಯಿತು. ಇದಕ್ಕಾಗಿ ನಾನು ಒಂದು ಮನವಿಯನ್ನು ಸಹ ಹೊರಡಿಸಿದ್ದಾಯಿತು. ಷೇರು ಹಣ ೧೦ ಲಕ್ಷ ರೂಪಾಯಿಗೆ ೧ ಲಕ್ಷ ಚಿಲ್ಲರೆ ಬಡ್ಡಿ ರೂಪವಾಗಿಯೇ ಬಂದಿರುತ್ತದೆ. ಇದೆಲ್ಲ ಸೇರಿ ೨೧ ಲಕ್ಷ ೯೦ ಸಾವಿರ ರೂಪಾಯಿಗಳಾಯಿತು. ೩೧ನೇ ಮೇ ೧೯೭೭ರ ಹೊತ್ತಿಗೆ ಅಷ್ಟು ಹಣವಾಯಿತು ದಯವಿಟ್ಟು ಇದನ್ನೆಲ್ಲ ಕೇಳಬೇಕು. ಏತಕ್ಕೆಂದರೆ ಮಾನ್ಯ ಅಧ್ಯಕ್ಷಿಣಿಯವರೆ ಕಾರನ್ನು ತೆಗೆದುಕೊಳ್ಳುವುದಕ್ಕಾಗಿ ೩೯ ಸಾವಿರ ರೂಪಾಯಿಗಳು, ಆಫೀಸ್ ಬಾಡಿಗೆಗಾಗಿ ೨೪ ಸಾವಿರ ರೂಪಾಯಿ, ಟೇಬಲ್ ಕುರ್ಚಿ ವಗೈರೆ ಪೀಠೋಪಕರಣಗಳಿಗಾಗಿ ೬೩೫೦ ರೂಪಾಯಿಗಳು, ಪೆಟ್ರೋಲ್ ಖರ್ಚಿಗಾಗಿ ೩ ಸಾವಿರ ರೂಪಾಯಿಗಳು, ಇನ್ನಿತರ ಖರ್ಚಿಗಾಗಿ ೧೩ ಸಾವಿರ ರೂಪಾಯಿ ಕೊಟ್ಟಿದ್ದೇವೆ. ನನ್ನ ಮೇಲೆ ಅಪೀಲ್ ಹೊರಡಿಸಿರುವುದರಿಂದ ಈ ಸಂದರ್ಭದಲ್ಲಿ ಇದನ್ನೆಲ್ಲ ಹೇಳಬೇಕಾಯಿತು. ದಯವಿಟ್ಟು ತಾವು ಕ್ಷಮೆಯನ್ನು ಕೊಡುವುದಾದರೆ ನಮ್ಮ ಸದಸ್ಯರ ಮುಖಾಂತರ ಈ ಎಲ್ಲ ವಿವರಗಳನ್ನು ಮಾನ್ಯ ಮಂತ್ರಿಯವರಿಗೆ ಒಪ್ಪಿಸುತ್ತೇನೆ. ಇಷ್ಟೆಲ್ಲ ಖರ್ಚು ಮಾಡಿರುವುದರಲ್ಲಿ ನಾನು ಸಂಬಳ ತೆಗೆದುಕೊಂಡಿರುವುದಾಗಲಿ, ಟಿ.ಎ. ಡಿ.ಎ. ತೆಗೆದುಕೊಂಡಿರುವುದಾಗಲಿ ಪ್ರಯಾಣ ಭತ್ಯ ಊಟ ಉಪಚಾರಕ್ಕಾಗಿ, ಕೊನೆಗೆ ಒಂದು ಕಾಫಿ ಖರ್ಚಿಗಾಗಿ ತೆಗೆದುಕೊಂಡು ಸಂಘಕ್ಕೆ ನಷ್ಟವನ್ನುಂಟು ಮಾಡಿದ್ದರೆ ನಾನು ತಮ್ಮ ಮುಂದೆ ಪ್ರಾಮಾಣಿಕವಾಗಿ ಹೇಳುತ್ತೇವೆ ಅಕ್ಷಮ್ಯ ಅಪರಾಧಿ ಎಂದು. ಆದರೆ ನಮ್ಮ ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ನನ್ನ ಒಂದು ಚೇರ್‌ಮನ್ ಹುದ್ದೆಯನ್ನು ತೆಗೆದುಹಾಕಿದರು. ಅಷ್ಟೇ ಅಲ್ಲದೆ ಎಲ್ಲ ಡೈರೆಕ್ಟರನ್ನು ತೆಗೆದುಹಾಕಿದರು. ಈಗ ಅವರ ಕಡೆಯವರೇ ಚೇರ್‌ಮನ್ ಮ್ಯಾನೇಜಿಂಗ್ ಡೈರೆಕ್ಟರ್‌ರವರಾಗಿರುತ್ತಾರೆ. ಈಗ ಮಹದೇಶ್ವರ ಶುಗರ್ ಫ್ಯಾಕ್ಟರಿ ಎಂದು ಏನು ನಡೆಯುತ್ತಿದೆ ಅದೇನು ಉಳಿಯುವ ಸ್ಥಿತಿಯಲ್ಲಿಲ್ಲ. ಅದಕ್ಕೆ ಕಬ್ಬು ಸಿಗುತ್ತಾ ಇಲ್ಲ. ೬ ತಿಂಗಳಾಯಿತು ಕಾರ್ಖಾನೆಯನ್ನು ನಡೆಸಿ. ಕೋಟಿಗಟ್ಟಲೆ ರೂಪಾಯಿ ನಷ್ಟವಾಗುತ್ತಾ ಇದೆ. ಅವರ ನೆಂಟರನ್ನೇ ಡೈರೆಕ್ಟರನ್ನಾಗಿ ಮಾಡಿಕೊಂಡು ೧೭ ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟಿದ್ದಾರೆ. ಶುಗರ್ ಕೇನನ್ನು ಟನ್‌ಗೆ ೨೫೦ ರೂಪಾಯಿ ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ನಮ್ಮ ಮಂತ್ರಿಗಳು ಶ್ರೀಮಾನ್ ಚನ್ನಬಸಪ್ಪನವರು ಕಂಡಸಾರಿ ಶುಗರ್‌ಗೆ ೧೫೦ ರೂಪಾಯಿ ಕೊಡಿಸಿದ್ದಾರೆ. ಫ್ಯಾಕ್ಟರಿಗೆ ತಮ್ಮ ಜನರನ್ನೆ ಮ್ಯಾನೇಜಿಂಗ್ ಡೈರೆಕ್ಟರಾಗಿ ಮಾಡಿದ್ದಾರೆ. ಡೆಪ್ಯುಟಿ ಕಮಿಷನರ್‌ರವರನ್ನೇ ಚೇರ್‌ಮನ್‌ರಾಗಿ ಮಾಡಿರುತ್ತಾರೆ. ಇದನ್ನೆಲ್ಲ ಒಳಗೇನೇ ಮಾಡಿರುತ್ತಾರೆ. ದಯವಿಟ್ಟು ಇದನ್ನೆಲ್ಲ ತಪ್ಪಿಸಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಿದ್ದಕ್ಕೆ ಕ್ಷಮಿಸುತ್ತೀರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಸಿದ್ದಯ್ಯ, (ಸಂತೆಮಾರನಹಳ್ಳಿ)—ಮಾನ್ಯ ಅಧ್ಯಕ್ಷರೆ ಈವತ್ತಿನ ದಿವಸ ಸಹಕಾರಿ ಮಂತ್ರಿಗಳು ಮಂಡಿಸಿರತಕ್ಕಂಥ ಡಿಮ್ಯಾಂಡ್‌ನ್ನು ನಾನು ಪೂರ್ಣವಾಗಿ ಬೆಂಬಲಿಸುತ್ತಾ ಎರಡು ಮಾತುಗಳನ್ನು ಸರ್ಕಾರದ ಗಮನಕ್ಕೆ ತರಲು ಅಪೇಕ್ಷೆಪಡುತ್ತೇನೆ. ಈಗ ನಮ್ಮ ಸರ್ಕಾರದವರು ಹೊಸದಾಗಿ ಎಲ್ಲ ಡಿಸ್ಟ್ರಿಕ್ಟ್‌ಗಳಲ್ಲೂ ಅಂದರೆ ದೇಶಾದ್ಯಂತ ಸೊಸೈಟಿಗಳನ್ನು ಆರ್ಗನೈಸ್ ಮಾಡಿದ್ದಾರೆ. ಮೈಸೂರು ಡಿಸ್ಟ್ರಿಕ್ಟ್‌ನಲ್ಲೂ ಈ ರೀತಿ ಸೊಸೈಟಿಗಳನ್ನು ಆರ್ಗನೈಸ್ ಮಾಡಿದ್ದರೂ ನಮ್ಮ ಎರಡು ತಾಲೂಕುಗಳಲ್ಲಿ ಎಷ್ಟೋ ವರ್ಷಗಳಿಂದ ನಾಮಿನೇಷನ್ ಡೈರೆಕ್ಟರುಗಳನ್ನು ಹಾಕಿಲ್ಲವೆಂಬ ವಾದ ಇದೆ. ಸರ್ಕಾರ ಆದಷ್ಟು ಬೇಗ ನಾಮಿನೇಷನ್ ಡೈರೆಕ್ಟರುಗಳನ್ನು ಹಾಕಿದರೆ ಜನರಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆಂದು ಮತ್ತೊಮ್ಮೆ ಈ ಸಭೆಯಲ್ಲಿ ಒತ್ತಿ ಹೇಳುತ್ತೇನೆ.

ಅಧ್ಯಕ್ಷರು.—ನಿಮ್ಮ ತಾಲೂಕುಗಳೆಂದರೆ ಯಾವುದು ? ವಿವರವಾಗಿ ಹೇಳಿ.

ಶ್ರೀ ಕೆ. ಸಿದ್ದಯ್ಯ.—ನಮ್ಮ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಗುಂಡ್ಲುಪೇಟೆ ಮತ್ತು ಟಿ. ನರಸೀಪುರ ತಾಲ್ಲೂಕುಗಳಲ್ಲಿ ಇದರ 15 ಸೊಸೈಟಿಗಳಲ್ಲಿ ಮ್ಯಾನೇಜಿಂಗ್ ಡೈರೆಕ್ಟರು ಟೆಕ್ನಿಕಲ್ ಅಸಿಸ್ಟೆಂಟ್ ಯಾರನ್ನೂ ಅಪಾಯಿಂಟ್ ಮಾಡಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಗುಂಡ್ಲುಪೇಟೆಯಲ್ಲಿ ಇನ್ನೂ ಅಪಾಯಿಂಟ್ ಆಗದಿರುವುದಕ್ಕೆ 20 ಅಂಶದ ಕಾರ್ಯಕ್ರಮದ ಚನ್ನಬಸಪ್ಪನವರು ಕಾರಣರೋ ಅಥವಾ ಯಾರು ಕಾರಣರು ಎಂಬುದನ್ನು ಹೇಳುತ್ತೀರಾ ? ಆದ್ದರಿಂದ ಅಲ್ಲಿಗೆ ಮ್ಯಾನೇಜಿಂಗ್ ಡೈರೆಕ್ಟರನ್ನು ಬೇಗ ಪೋಸ್ಟ್ ಮಾಡಿಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 12 ಸೊಸೈಟಿಗಳಲ್ಲಿ ಮ್ಯಾನೇಜಿಂಗ್ ಡೈರೆಕ್ಟರುಗಳು ಮತ್ತು ಟೆಕ್ನಿಕಲ್ ಅಸಿಸ್ಟಂಟ್ಸ್‌ನ್ನು ಪೋಸ್ಟ್ ಮಾಡಿಲ್ಲ. ಇದನ್ನು ಸಹ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಮತ್ತೆ ಕೆಲವು ಸೊಸೈಟಿಗಳಿಗೆ ಷೇರ್ ಕ್ಯಾಪಿಟಲ್ಲನ್ನು ಎಲ್ಲರಿಗೂ ಯೂನಿಫಾರಂ ಆಗಿ ಕೊಟ್ಟಿಲ್ಲ. ಇದನ್ನೂ ಸಹ ಎಗ್ಸಾಮಿನ್ ಮಾಡಿ ಇದನ್ನು ಕೊಡಿಸಬೇಕು. ನಮ್ಮ ತಾಲ್ಲೂಕಿನ ಕೆಲವು ಸೊಸೈಟಿಗಳಲ್ಲಿ ನಡೆದಿರುವ ಇರ್‌ರೆಗ್ಯುಲಾರಿಟೀಸ್ ಬಗ್ಗೆ ಈಗಾಗಲೇ ನಾವು ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ಆ ಬಗ್ಗೆ ತನಿಖೆ ಮಾಡಿ ಅದನ್ನು ಸರಿಪಡಿಸಬೇಕು ಎಂದು ಹೇಳಿಕೊಳ್ಳುತ್ತೇನೆ. ಈ ದೇಶದಾದ್ಯಂತ ಇರುವ ಅನೇಕ ಸೊಸೈಟಿಗಳಲ್ಲಿ ಅನೇಕ ಸಂದರ್ಭಗಳಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿ ಹಣ ಷಾರ್ಟೇಜ್ ಬಂದಿರುವುದನ್ನು ನಮ್ಮ ಮಾನ್ಯ ಸದಸ್ಯರನೇಕರು ತಮ್ಮ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಇನ್‌ಸ್ಪೆಕ್ಟಿಂಗ್ ಸೆಲ್ ಎಂದು ಮಾಡಿ, ಇನ್‌ಸ್ಪೆಕ್ಟಿಂಗ್ ಆಫೀಸರನ್ನು ನೇಮಕ ಮಾಡಿದ್ದಾರೆ. ಆದರೂ ಅವರು ಸರಿಯಾಗಿ ಕೆಲಸ ನಿರ್ವಹಿಸುತ್ತಾ ಇಲ್ಲ. ಈ ಸೊಸೈಟಿಗಳಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆದಾಗ ಅದು ಆಡಿಟ್ ರಿಪೋರ್ಟ್ ಆದಂತ ಕಾಲದಲ್ಲಿ ಹೊರಗೆ ಬರುತ್ತದೆಯೇ ವಿನ ಅದಕ್ಕಿಂತ ಮುಂಚೆ ಅಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗಿದೆ ಎಂದು ಕಂಡುಬರುವುದಿಲ್ಲ. ಈ ಇನ್‌ಸ್ಪೆಕ್ಟಿಂಗ ಆಫೀಸರ್ಸ್ ಅಲ್ಲಿ ಆಡಿಟ್ ರಿಪೋರ್ಟ್ ಆಗುವುದಕ್ಕಿಂತ ಮುಂಚಿತವಾಗಿ ಈ ಮಿಸ್‌ಅಪ್ರೋಪ್ರಿಯೇಷನ್ನನ್ನು ಏತಕ್ಕೆ ಕಂಡು ಹಿಡಿಯುವುದಿಲ್ಲ ಎಂದು ಕೇಳುತ್ತೇನೆ. ಈ ಇನ್‌ಸ್ಪೆಕ್ಟಿಂಗ್ ಆಫೀಸರ್ಸ್ ಅಲ್ಲಿ ನಡೆಯತಕ್ಕಂಥ ಮಿಸ್‌ಅಪ್ರೋಪ್ರಿಯೇಷನನ್ನು ಆಡಿಟ್ ರಿಪೋರ್ಟ್ ಆಗುವುದಕ್ಕಿಂತ ಮುಂಚಿತವಾಗಿ ಕಂಡುಹಿಡಿದಿದ್ದೇ ಆದರೆ ಮಿಸ್‌ಅಪ್ರೋಪ್ರಿಯೇಷನ್ ಆಗುವಂತಾದ್ದು ಬಹುಶಃ ಕಡಿಮೆಯಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಈ ಬಗ್ಗೆ ಗಮನಕೊಡಬೇಕೆಂದು ಹೇಳುತ್ತೇನೆ ಈ ಮಿಸ್‌ಅಪ್ರೋಪ್ರಿಯೇಟ್ ಆದಂತ ಹಣವನ್ನು ಅವರಿಂದ ಕಲೆಕ್ಟ್ ಮಾಡುವಾಗ ಪೀನಲ್ ಇಂಟರೆಸ್ಟನ್ನು ಹಾಕುತ್ತಾರೆ. ಅದರ ದರ ಏನಿದೆ ಎಂದರೆ 18–19 ಪರ್ಸೆಂಟಿಗೆ ಮೀರಿರುವುದಿಲ್ಲ. ಯಾರು ಲಕ್ಷಗಟ್ಟಲೆ ಹಣವನ್ನು ಮಿಸ್‌ಅಪ್ರೋಪ್ರಿಯೇಟ್ ಮಾಡಿರುತ್ತಾರೋ ಅಂತಹವರ ಮೇಲೆ ಈ 18 ಪರ್ಸೆಂಟ್ ಪೀನಲ್ ಇಂಟರೆಸ್ಟ್ ಹಾಕಿದರೂ ಪರವಾಗಿಲ್ಲ, ಆದರೆ ಆರ್ಡಿನರಿ ಸಾಲ ತೆಗೆದುಕೊಳ್ಳುವಂತಹವರ ಮೇಲೆ ಈ ಇಂಟರೆಸ್ಟನ್ನು ಹಾಕಿದರೆ ಧರ್ಮವೇ ಎಂದು ಕೇಳಬೇಕಾಗಿದೆ. ಈ 18 ಪರ್ಸೆಂಟ್ ಪೀನಲ್ ಇಂಟರೆಸ್ಟ್ ಹಾಕಿದರೂ ಬಹುಶಃ ಅದು ಮಿಸ್‌ಅಪ್ರೋಪ್ರಿಯೇಷನ್ ಮಾಡುವುದಕ್ಕೆ ಎನ್‌ಕರೇಜ್‌ಮೆಂಟ್ ಕೊಟ್ಟಹಾಗೆ ಆಗುತ್ತದೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ವಿಷಯವನ್ನು ಮೈಸೂರು ಜಿಲ್ಲೆಯ ಡೆಪ್ಯುಟಿ ಕಮಿಷನರ್‌ರವರ ಗಮನಕ್ಕೆ ತಂದಾಗ ರಿಸರ್ವ್ ಬ್ಯಾಂಕ್‌ನವರು ಹಣ ಕೊಡುತ್ತಾರೆ, ಅವರೇ ಇಂಟರೆಸ್ಟ್ ಹಾಕುತ್ತಾರೆ' ಎಂದು ಹೇಳಿದರು ಆದರೆ ನಾನು ಹೇಳುತ್ತೇನೆ ಈ ಬಗ್ಗೆ ಕಾಂಪಿಟೆಂಟ್ ಅಥಾರಿಟಿ ಯಾರು ಇರುತ್ತಾರೋ ಅವರು 25 ಪರ್ಸೆಂಟ್, 30 ಪರ್ಸೆಂಟ್ ಇಂಟರೆಸ್ಟ್ ಹಾಕಿದರೂ ಚಿಂತೆ ಇಲ್ಲ, ಈ ಪೀನಲ್ ಇಂಟರೆಸ್ಟ್ ಹಾಕುವುದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಸರ್ಕಾರದವರು ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಸೊಸೈಟಿಗಳಲ್ಲಿ ಸಾಲವನ್ನು ಪಡೆಯುವಾಗ ಅನೇಕ ಸಂದರ್ಭಗಳಲ್ಲಿ ಈ ಬೇನಾಮಿ ಟ್ರಾನ್ಸಾಕ್ಷನ್ ಹೆಚ್ಚಾಗಿ ನಡೆಯುತ್ತದೆ. ಇದು ಹೇಗೆ ಎಂದರೆ ಸುಳ್ಳು ಹೆಸರುಗಳನ್ನು ಬರೆದುಕೊಂಡು ಸಾಲವನ್ನು ತೆಗೆದುಕೊಳ್ಳುವಂಥಾದ್ದು ಇರುತ್ತದೆ ಇದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಇನ್ನು ಕೆಲವು ಸೊಸೈಟಿಗಳಲ್ಲಿ ಕೆಲವು ಅಧಿಕಾರಿಗಳು ರೆಸಲ್ಯೂಷನ್ ಮಾಡಿ ಹೆಚ್ಚು ಸಂಬಳವನ್ನು ಫಿಕ್ಸ್ ಮಾಡಿಕೊಳ್ಳುತ್ತಾರೆ. ಅದಕ್ಕೆ ಕಾಂಪಿಟೆಂಟ್ ಅಥಾರಿಟಿಯವರ ಸ್ಯಾಂಕ್ಷನ್ ಇರುವುದಿಲ್ಲ. ಅವರು ಫಿಕ್ಸ್ ಮಾಡಿಕೊಂಡಂಥ ಸಂಬಳವನ್ನು ತೆಗೆದುಕೊಳ್ಳುತ್ತಿರುತ್ತಾರೆ. ಸೊಸೈಟಿಗಳಲ್ಲಿ ಅಷ್ಟು ಫೈನಾನ್ಸ್ ಕೆಪಾಸಿಟಿ ಇಲ್ಲದಿದ್ದರೂ ಕೂಡ ಹಣವನ್ನು ತೆಗೆದುಕೊಳ್ಳುತ್ತಿರುತ್ತಾರೆ ಇದರ ಬಗ್ಗೆ ಇನ್‌ಸ್ಪೆಕ್ಟ್ ಮಾಡಿ ಆ ಹಣವನ್ನು ತೆಗೆದುಕೊಳ್ಳಬಾರದು ಎಂದು ಯಾರೂ ಹೇಳುವುದಿಲ್ಲ ಮೇಲಧಿಕಾರಿಗಳು ಇಂತಹ ಕೇಸ್‌ಗಳನ್ನು ಇಮ್ಮಿಡಿಯೆಟ್ ಆಗಿ ಫಾಲೋ ಮಾಡಿ, ಇಮ್ಮಿಡಿಯೆಟ್ ಆಕ್ಷನ್ ತೆಗೆದು ಕೊಂಡರೆ ಇದು ನಿಲ್ಲುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನು ಈ ಸೊಸೈಟಿಗಳಲ್ಲಿ ನಡೆಯುವ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲು ಹಾನರರಿ ಅರ್ಬಿಟ್ರೇಟರ್ಸ್‌ನ್ನು ಅಪಾಯಿಂಟ್ ಮಾಡುವ ಬಗ್ಗೆ ನಮ್ಮ ಮಾನ್ಯ ಮಿತ್ರರು ಹೇಳಿದ್ದಾರೆ. ಈ ಕಾಲದಲ್ಲಿ ಸೊಸೈಟಿಗಳಲ್ಲಿ ಸಾಲದ ವ್ಯವಹಾರಗಳ ಬಗ್ಗೆ ವಾಜ್ಯಗಳು ಇಲ್ಲದಿದ್ದರೆ ಕೋರ್ಟ್‌ನಲ್ಲಿ ಲಿಟಿಗೇಷನ್ ಕಡಿಮೆಯಾಗುತ್ತದೆ. ಲಾಯರ್‌ಗಳಿಗೆ ಕೆಲಸ

ಇಲ್ಲದೇ ಇರುವಾಗ ರಿಟೈರ್ಡ್ ಆಫೀಸರ್ಸ್ ಅನ್ನು ರೀ ಅಪಾಯಿಂಟ್‌ಮೆಂಟ್ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶಕೊಡದೇ ರೀ ಅಪಾಯಿಂಟ್‌ಮೆಂಟ್ ಮಾಡುವುದನ್ನು ತಪ್ಪಿಸುವುದು ಒಳ್ಳೆಯದು. ಇನ್ನೊಂದು ವಿಷಯವೇನೆಂದರೆ ರಿಟೈರ್ಡ್ ಆಫೀಸರ್ಸ್‌ಗೆ ರೀ ಅಪಾಯಿಂಟ್‌ಮೆಂಟ್ ಕೊಡುವುದರಿಂದ ಸಣ್ಣಪುಟ್ಟ ಲಾಯರ್‌ಗಳಿಗೆ ಕೆಲಸ ಸಿಕ್ಕುತ್ತಾ ಇಲ್ಲ. ಈ ಸಣ್ಣಪುಟ್ಟ ಲಾಯರ್‌ಗಳಿಗೂ ಕೆಲಸ ಸಿಕ್ಕಬೇಕು. ಅದ್ದರಿಂದ ಇದನ್ನು ಕಂಸಿಡರ್ ಮಾಡಬೇಕೆಂದು ಹೇಳುತ್ತೇನೆ. ಮೊದಲು ಈ ಆರ್ಬಿಟ್ರೇಟರ್ ಆಗಲೀ, ಲಾಯರ್‌ಗಳಾಗಲೀ ಲಾ ಡಿಗ್ರಿ ಮಾಡಿದರೆ ಸಾಕಾಗುತ್ತಿತ್ತು. ಇತ್ತೀಚೆಗೆ ಏನು ಮಾಡಿಬಿಟ್ಟಿದ್ದಾರೆ ಎಂದರೆ ಲಾಯರ್ ಆಗಲೀ, ಆರ್ಬಿಟ್ರೇಟರ್ ಆಗಲೀ ಗ್ರ್ಯಾಜುಯೇಟ್ ಆದರೆ ಸಾಲದು ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡಬೇಕೆಂದು ಮಾಡಿದ್ದಾರೆ. ಆದರೆ ಈಗ ಎಷ್ಟೋ ಅಧಿಕಾರಿಗಳು ಲಾ ಓದಿದ್ದರೂ ಅವರು ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡಿಲ್ಲ. ಆದರೂ ಅವರು ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಅದೇ ರೀತಿಯಲ್ಲಿ ಲಾಯರ್‌ಗಳಾಗಲೀ, ಆರ್ಬಿಟ್ರೇಟರ್ ಆಗಲೀ ಕೋರ್ಟಿನಲ್ಲಿ 5 6 ವರ್ಷ ಪ್ರಾಕ್ಟೀಸ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಅವರಿಗೆ ಲಾ ಡಿಗ್ರಿ ಆದರೆ ಸಾಕು. ಆದ್ದರಿಂದ ಆರ್ಬಿಟ್ರೇಟರ್ಸ್ ಮತ್ತು ಲಾಯರ್‌ಗಳು ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡತಕ್ಕಂಥದ್ದನ್ನು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಮಾನ್ಯ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ಹೇಳಿದರು ಈ ಎಸ್. ಸಿ ಮತ್ತು ಎಸ್. ಟಿ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಲ್ಲಿ ಬೇನಾಮಿ ಟ್ರಾನ್ಸಾಕ್ಷನ್ ನಡೆಯುತ್ತಿದೆ ಎಂದು ಹೇಳಿದರು. ಈ ರೀತಿ ಇರುವುದೇ ಆದರೆ ರೆಗ್ಯುಲರ್ ಆಗಿ ಬೇರೆ ರೀತಿಯಲ್ಲಿ ಜನರಲ್ ಬಾಡಿ ಮೀಟಿಂಗ್ ಕರೆದು ಅಲ್ಲಿರತಕ್ಕಂಥ ಲೆಕ್ಕಪತ್ರಗಳನ್ನು ಸಲ್ಲಿಸುವಂತೆ ಮಾಡಿ ಆಡಿಟ್ ಮಾಡಿದರೆ ಅನೇಕ ವಿಷಯಗಳು ಹೊರಗೆ ಬರಬಹುದು. ಆಗ ತಪ್ಪಿತಸ್ಥರನ್ನು ಶಿಕ್ಷೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ನಾನು ಲಾ ಅಂಡ್ ಪಾರ್ಲಿಮೆಂಟರಿ ಅಫೇರ್ಸ್ ವಿಷಯದಲ್ಲಿ ಹೇಳುತ್ತೇನೆ. ಇತ್ತೀಚೆಗೆ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ 215 ಜನ ಮುನ್ಸಿಫರನ್ನು ರೆಕ್ರೂಟ್‌ಮೆಂಟ್ ಮಾಡುವ ಬಗ್ಗೆ . ...

ಶ್ರೀ ಕೆ. ಹೆಚ್. ರಂಗನಾಥ್ —ಅದು ನನಗೆ ಸಂಬಂದಪಟ್ಟಿದ್ದು ಅಲ್ಲ. ಆ ವಿಷಯ ಲಾ ಮಿನಿಸ್ಟರ್‌ಗೆ ಸಂಬಂಧಪಟ್ಟಿದೆ. ಎಲೆಕ್ಷನ್ ವಿಚಾರದಲ್ಲಿ ತಾವು ಹೇಳಬಹುದು

ಶ್ರೀ ಕೆ. ಸಿದ್ದಯ್ಯ.—ಇನ್ನು ಈ ರೆಗ್ಯುಲೇಟೆಡ್ ಮಾರ್ಕೆಟ್ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸಂತೇಮಾರಹಳ್ಳಿ ಎಂದು ಇದೆ. ಅಲ್ಲಿ ಸಂತೆ ನಡೆಯುತ್ತದೆ. ಈ ರೆಗ್ಯುಲೇಟೆಡ್ ಮಾರ್ಕೆಟ್‌ನ ಟ್ಯಾಕ್ಸ್ ಕಲೆಕ್ಟಿಂಗ್ ಆಫೀಸರ್ಸ್ ಏನಿದ್ದಾರೆ ಅವರು ಸಂತೆ ಬೌಂಡರಿ ಬಿಟ್ಟು ಹೊರಗಡೆ ನಿಂತುಕೊಂಡು ರೂಲ್ಸ್‌ಗೆ ವಿರುದ್ಧವಾಗಿ ವ್ಯಾಪಾರಸ್ಥರ ಮತ್ತು ಕಂಸ್ಯೂಮರ್ಸ್‌ರ ಹತ್ತಿರ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿದ್ದಾರೆ. ಈ ವಿಚಾರವನ್ನು ಡೆಪ್ಯುಟಿ ಕಮೀಷನರ್‌ರವರ ಗಮನಕ್ಕೆ ತಂದಾಗ್ಯೂ ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಕ್ರಮ ಕೈಕೊಂಡರೆ ಅವರು ಸುಳ್ಳು ಟ್ಯಾಕ್ಸ್ ಕಲೆಕ್ಟ್ ಮಾಡುವುದು ತಪ್ಪುತ್ತದೆಂದು ಹೇಳುತ್ತೇನೆ. ಇನ್ನು ಎಲೆಕ್ಷನ್ ವಿಚಾರದಲ್ಲಿ ಹೇಳಬೇಕೆಂದರೆ ಈ ಬಗ್ಗೆ ಡೀಲಿಮಿಟೇಷನ್ ಮಾಡುವಾಗ ...ಳ್ಳಿಗಳಿಗೆ ಓಟನ್ನು ಕೊಡುವಾಗ. ಅಲ್ಲಿ ಒಂದು ಊರು ಇದ್ದರೂ ಎರಡು ಭಾಗವಾದರೆ ಆಗ ಬೇರೆಬೇರೆ ದಾಖಲೆ ಇರುತ್ತದೆ. ಆಗ ಏನಾಗುತ್ತದೆ ಎಂದರೆ ಒಂದೇ ಊರು ಇದ್ದರೂ ಬೇರೆ ಬೇರೆ ದಾಖಲೆ ಇರುವಾಗ ಅದನ್ನು ರೂಲ್ಸ್ ಪ್ರಕಾರ ಪೋಲಿಂಗ್ ಆಫೀಸರ್ಸ್ ಅಸೈನ್ ಮಾಡಬೇಕಾದರೆ 2-3 ಮೈಲಿ ನಡೆದುಕೊಂಡು ಹೋಗಬೇಕಾಗುತ್ತದೆ. ಇದಲ್ಲದೆ ಜನರಲ್ ಓಟ್ ಮಾಡುವಾಗ ಇದರಿಂದ ಅನಾನುಕೂಲವಾಗುತ್ತದೆ. ಆದ್ದರಿಂದ ಈ ಬಗ್ಗೆ ಎನ್ಯೂಮರೇಷನ್ ರೀ ಅರೇಂಜ್‌ಮೆಂಟ್ಸ್ ಮಾಡಿ. ಒಂದೇ ಊರಿನಲ್ಲಿ ದಾಖಲೆ ಇರುವಂತೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಜನರು ತಮ್ಮ ಓಟಿನ ಹಕ್ಕನ್ನು ಚಲಾಯಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಎಗ್ಸಾಮಿನ್ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

ಶ್ರೀ ಸಿ. ಬೈರೇಗೌಡ (ವೇಮಗಲ್) —ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಸಹಕಾರ ಸಚಿವರು ತಮ್ಮ ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ವಿರೋಧಿಸಿ ಕೆಲವು ಮಾತುಗಳನ್ನಾಡಬೇಕೆಂದು ಇಚ್ಛಿಸಿದ್ದೇನೆ. ಸರ್ಕಾರದವರು ಒದಗಿಸಿರತಕ್ಕ ಸಣ್ಣ ಕೈಪಿಡಿಯಲ್ಲಿ ಒಂದು ಮಾತನ್ನು ಅವರೇ ಒಪ್ಪಿಕೊಂಡಿದ್ದಾರೆ. ಯಾವ ಕಾರಣದಿಂದ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡಿದು

ಎಂಬುದನ್ನು ಹೇಳಿದ್ದಾರೆ. ಅದನ್ನು ನೋಡುವುದಾದರೆ ಮತ್ತು ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಕೆಲವು ಕಾನೂನುಗಳಿಗೆ ಮಾಡಿರುವ ತಿದ್ದುಪಡಿಗಳನ್ನು ನೋಡುವುದಾದರೆ ಅದರ ಗುಣ ಬಹಳ ಉದಾತ್ತವಾಗಿದೆ. ಆದರೆ ಇದನ್ನು ಕಾರ್ಯಗತ ಮಾಡುವಾಗ ಅದಕ್ಕೆ ತದ್ವಿರುದ್ಧವಾಗಿ ಸಹಕಾರ ತತ್ವದ ಕಗ್ಗೊಲೆಯಾಗಿರುವುದನ್ನು ದೇಶದಾದ್ಯಂತ, ರಾಜ್ಯದಾದ್ಯಂತ ಇವತ್ತಿನ ದಿವಸ ನಾವು ನೋಡುತ್ತಿದ್ದೇವೆ. ಮಾನ್ಯ ಮಂತ್ರಿಗಳು ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಚುನಾವಣಾ ಭರದಲ್ಲಿ ಮಾತನಾಡುತ್ತಾ ದಾವಣಗೆರೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಪತ್ರಿಕೆಗಳನ್ನು ಆಮೇಲೆ ನೋಡಿಕೊಳ್ಳೋಣ ಎಂದು ಹೇಳಿದ್ದಾರೆ. ಈಗ ಬಹುಶಃ ಅವರು ಪತ್ರಿಕೆಗಳನ್ನು ನೋಡುತ್ತಿರಬಹುದು. ಮಾನ್ಯ ಸಚಿವರು ಬೀದರ್‌ಗೆ ಹೋಗಿ ಯಾರ ಪಕ್ಕದಲ್ಲಿ ನಿಂತು ಫೋಟೋ ತೆಗೆಸಿಕೊಂಡಿದ್ದಾರೋ ಅವರ ಕೈಗೆ ಬೇಡಿ ಬೀಳುವುದನ್ನು ಇನ್ನು ಕೆಲವು ದಿವಸಗಳಲ್ಲಿ ಪತ್ರಿಕೆಗಳಲ್ಲಿ ಅವರು ಓದಬೇಕು ಎಂದು ನನ್ನ ಆಸೆ. ಅಂಥ ಸುದ್ದಿ ಏನಾದರೂ ಬಂದರೆ ಮಾನ್ಯ ಸಚಿವರು ದಯವಿಟ್ಟು ಓದಬೇಕು. ಸಂಜಯ್ ಗಾಂಧಿಯವರು ಬೀದರ್‌ಗೆ ಬಂದಿದ್ದಾಗ...

ಅಧ್ಯಕ್ಷರು.—ಅವರ ಮಾತುಗಳು ಯಾಕೆ ಇಲ್ಲಿ ಹೇಳುತ್ತಿದ್ದೀರಿ ?

ಶ್ರೀ ಸಿ. ಬೈರೇಗೌಡ – ಪತ್ರಿಕೆಗಳನ್ನು ಆಮೇಲೆ ನೋಡಿಕೊಳ್ಳೋಣ ಎಂದು ಹೇಳಿದ್ದರು. ಅದಕ್ಕೋಸ್ಕರ ಆ ಮಾತನ್ನು ಹೇಳುತ್ತಿದ್ದೇನೆ. ಕಳೆದ ಸಾರಿ ಇದೇ ಡಿಮ್ಯಾಂಡಿನ ಮೇಲೆ ನಾನು ಮಾತನಾಡುತ್ತಾ ಈ ಸಹಕಾರ ಸಂಘಗಳ ರೀ-ಆರ್ಗನೈಸೇಷನ್ ಆಗಬೇಕಾದ ಅವಶ್ಯಕತೆ ಇದೆ ಸಹಕಾರ ಸಂಘಗಳಲ್ಲಿರತಕ್ಕ ಪಟ್ಟಭದ್ರಹಿತಾಸಕ್ತಿಗಳ ನಿರ್ಮೂಲನ ಆಗಬೇಕಾಗಿದೆ ಎಂಬ ಮಾತನ್ನು ನಾನು ಹೇಳಿದ್ದೆ. ಆಗ ಮಾನ್ಯ ಮಂತ್ರಿಗಳು ಇದು ಯಾವುದೋ ಓಬೀರಾಯನ ಕಾಲದ ಅಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್ ಕಮಿಷನ್ ಆಧಾರದಮೇಲೆ ಬೈರೇಗೌಡರು ಸಲಹೆ ಮಾಡುತ್ತಿದ್ದಾರೆ, ಆದ್ದರಿಂದ ಇದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿದ್ದುಂಟು. ಆದರೆ ಇವತ್ತಿನ ದಿವಸ ಆ ಸಲಹೆಯನ್ನು ಕಾರ್ಯಗತ ಮಾಡಿದ್ದಾರೆ, ರೀ-ಆರ್ಗನೈಸೇಷನ್ ಆಗಬೇಕು ಎಂಬ ತತ್ವವನ್ನು ಒಪ್ಪಿದ್ದಾರೆ, ಅದು ಸ್ವಾಗತಾರ್ಹ ಕೂಡ. ರೀ-ಆರ್ಗನೈಸೇಷನ್ ವಿಚಾರದಲ್ಲಿ ಬಹಳ ಮಾತನಾಡಬೇಕೆಂದು ಅಂದುಕೊಂಡಿದ್ದೆ. ಆದರೆ ಆ ವಿಚಾರದಲ್ಲಿ ಕೆಲವು ಸಲಹೆಗಳನ್ನು ಒಪ್ಪಿರುವುದರಿಂದ ಆ ವಿಷಯವನ್ನು ಇಷ್ಟಕ್ಕೇ ಬಿಡುತ್ತೇನೆ. ಇಲ್ಲದೇ ಇದ್ದರೆ ಇದರಲ್ಲಿ ಯಾರು ಯಾರಿದ್ದಾರೆ, ಎಲ್ಲೆಲ್ಲಿ ಏನೇನು ಮಾಡಿದ್ದಾರೆ ಎಂಬುದನ್ನು ಹೇಳಬಹುದಾಗಿತ್ತು. ಇವತ್ತು ಅದಕ್ಕೆ ಅವಕಾಶ ಇಲ್ಲದಂತೆ ಮಾಡಿದ್ದೀರಿ, ಸಂತೋಷ. ನಮ್ಮ ಡಿ.ಸಿ.ಸಿ. ಬ್ಯಾಂಕುಗಳು ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಇವೆ. ರಾಜ್ಯದಲ್ಲಿರತಕ್ಕ ೧೯ ಜಿಲ್ಲಾ ಬ್ಯಾಂಕುಗಳ ಪೈಕಿ ನಾಲ್ಕು ವೀಕರ್ ಬ್ಯಾಂಕುಗಳು ಇವೆ. ಅದು ಕೋಲಾರ, ಬೆಂಗಳೂರು, ತುಮಕೂರು, ಮತ್ತು ಚಿತ್ರದುರ್ಗಗಳಲ್ಲಿವೆ. ಆ ನಾಲ್ಕು ಬ್ಯಾಂಕುಗಳ ಪೈಕಿ ಕೋಲಾರವೂ ಒಂದು.

ಶ್ರೀ ಕೆ. ಎಚ್. ರಂಗನಾಥ್.—ಈಗ ಹಾಗಿಲ್ಲ.

ಶ್ರೀ ಸಿ. ಬೈರೇಗೌಡ —ಈಗ ಅಬಲ ಸಂಘಗಳು ಸಬಲವಾಗಿವೆ. ಕೋಲಾರ ಜಿಲ್ಲಾ ಡಿ. ಸಿ. ಸಿ. ಬ್ಯಾಂಕ್ ವಿಚಾರದಲ್ಲಿ ಮಾನ್ಯ ಮಂತ್ರಿಗಳ ಬಳಿ ಖುದ್ದಾಗಿ ಮಾತನಾಡಿದ್ದೇನೆ, ಮತ್ತೆ ಬರವಣಿಗೆಯಲ್ಲೂ ಕೂಡ ಒಂದು ಮನವಿಯನ್ನು ರಾಜ್ಯಸರ್ಕಾರದ ರಿಜಿಸ್ಟ್ರಾರ್ ಅವರಿಗೆ ಕಳಿಸಿದ್ದೇನೆ. ಕೋಲಾರ ಡಿ.ಸಿ.ಸಿ. ಬ್ಯಾಂಕಿನವರು ಅನುಸರಿಸುತ್ತಿರುವ ಮಾರ್ಗ, ಮಾಡುತ್ತಿರತಕ್ಕ ದುರ್ವ್ಯವಹಾರ ಇವುಗಳ ಬಗ್ಗೆ ಬರೆದಿದ್ದೇನೆ. ಇವತ್ತು ಡಿ.ಸಿ.ಸಿ. ಬ್ಯಾಂಕಿನ ಕಾರು ಅಧ್ಯಕ್ಷರ ಸ್ವಂತ ಆಸ್ತಿಯಾಗಿದೆ. ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರ ಕಾರು ಎಲ್ಲೆಲ್ಲಿ ನಿಂತಿರುತ್ತದೆ ಎಂದರೆ ಹೆಂಡದಂಗಡಿಗಳ ಹತ್ತಿರ ಇರುತ್ತದೆ. ಹೆಂಡ ಎಂದರೆ ವಿಸ್ಕೀ ಕೂಡ ನಮ್ಮ ಭಾಷೆಯಲ್ಲಿ ಆ ಗುಂಪಿಗೆ ಸೇರುತ್ತದೆ. ಇದರ ಜೊತೆಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಈ ಕೋಲಾರ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರ ಕಾರು, ನಿಮ್ಮ ಅಚ್ಚುಮೆಚ್ಚಿನ ಅಧ್ಯಕ್ಷರು ಉಪಯೋಗಿಸತಕ್ಕಂಥ ಕಾರು ವೇಶ್ಯಯರ ಮನೆಗಳ ಮುಂದೆ ನಿಂತಿರುತ್ತದೆ.

ಅಧ್ಯಕ್ಷರು.—ಅವರ ಕಾರು ಎಲ್ಲಾದರೂ ನಿಂತಿರಲಿ. ನಿಮಗೇನು ಅದನ್ನು ಕಟ್ಟಿಕೊಂಡು ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಾಗ 'ನಿಮ್ಮ ಅಧ್ಯಕ್ಷರು' ಎಂದು ಹೇಳುತ್ತಾರೆ. ನನಗೇನೂ ಇದರ ಅರ್ಥ ಗೊತ್ತಾಗಲಿಲ್ಲ. ಆ ಅಧ್ಯಕ್ಷರೇನು ನನ್ನ ಚಿಕ್ಕಪ್ಪನ ಮಗನೇ ಅಥವಾ ಸಂಬಂಧಿಕನೇ ?

ಶ್ರೀ ಸಿ. ಬೈರೇಗೌಡ.—ಈ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರು ಬಂಗಾರಪೇಟೆ ಮಾರ್ಕೆಟಿಂಗ್ ಕಮಿಟಿಯ ಅಧ್ಯಕ್ಷರೂ ಕೂಡ ಆಗಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ನೀವು ಅದಕ್ಕೆ ಡೈರೆಕ್ಟರಲ್ಲವೇ ?

ಶ್ರೀ ಸಿ. ಬೈರೇಗೌಡ.—ಹೌದು.

SRI K H RANGANATH.—Then he is a party to all those decisions, and if he has not given a dissenting note, he has failed in his duty.

ಶ್ರೀ ಸಿ. ಭೈರೇಗೌಡ.—ನಿಮ್ಮ ಅಧಿಕಾರಿಗಳು ಅವರು ಹೇಳಿದಹಾಗೆ ಡ್ಯಾನ್ಸ್ ಮಾಡಬೇಕು. ಆ ರೀತಿ ಮಾಡದೇ ಇದ್ದರೆ ಆ ಅಧಿಕಾರಿಗಳು ಆ ಜಾಗದಲ್ಲಿರುವುದಿಲ್ಲ. ಮಾರನೆಯ ದಿವಸವೇ ಗಂಟುಮೂಟೆ ಕಟ್ಟಿಕೊಂಡು ಬೇರೆಕಡೆಗೆ ಹೋಗಬೇಕಾಗುತ್ತದೆ. ೧೯೭೨ನೇ ಇಸವಿಯಿಂದ ೧೯೭೬ನೇ ಇಸವಿಯವರೆಗೆ ಅವರು ಬಂಗಾರಪೇಟೆ ಮಾರ್ಕೆಟಿಂಗ್ ಕಮಿಟಿ ಅಧ್ಯಕ್ಷರಾಗಿದ್ದರು ಒಂದೇ ತಾರೀಖಿನಲ್ಲಿ ಟಿ.ಎ. ಮತ್ತು ಡಿ.ಎ. ಗಳನ್ನು ಬಂಗಾರಪೇಟೆ ಮಾರ್ಕೆಟಿಂಗ್ ಕಮಿಟಿ ಮತ್ತು ಡಿ.ಸಿ.ಸಿ. ಬ್ಯಾಂಕ್ ಎರಡೂ ಕಡೆಯಿಂದ ಪಡೆದಿದ್ದಾರೆ. ಬೇಕಾದರೆ ಕೆಲವು ವಿವರಗಳನ್ನು ಕೊಡುತ್ತೇನೆ. ೨೦-೧೨-೧೯೭೨ ರಂದು ಚಿಕ್ಕ ಅಕ್ಕಂಡಹಳ್ಳಿಯಿಂದ ಕೆ.ಜಿ.ಎಫ್ ಗೆ ಹೋದರು ಅದಕ್ಕೆ ೮ ರೂ. ೬೦ ಪೈಸೆ ಟಿ.ಎ. ತೆಗೆದುಕೊಂಡಿದ್ದಾರೆ, ೮ ರೂ. ಡಿ.ಎ. ತೆಗೆದುಕೊಂಡಿದ್ದಾರೆ. ಅದೇ ತರಹ ೨೦-೧೨-೧೯೭೨ರಲ್ಲಿ ಚಿಕ್ಕ ಅಕ್ಕಂಡಹಳ್ಳಿಯಿಂದ ಮಾಲೂರಿಗೆ ಹೋಗಿದ್ದಾರೆ. ಅದಕ್ಕೆ ೨೨ ರೂಪಾಯಿ ಟಿ.ಎ. ತೆಗೆದುಕೊಂಡಿದ್ದಾರೆ. ಅಲ್ಲಿ ಡಿ.ಎ. ತೆಗೆದುಕೊಂಡಿಲ್ಲ. ಅದೇ ರೀತಿ ೩೪ ಸಾರಿ ಡಿ. ಸಿ. ಸಿ. ಬ್ಯಾಂಕ್ ಮತ್ತು ಬಂಗಾರಪೇಟೆ ಮಾರ್ಕೆಟ್ ಕಮಿಟಿ ಎರಡೂ ಕಡೆಯಿಂದ ಟಿ.ಎ., ಡಿ.ಎ. ಗಳನ್ನು ತೆಗೆದುಕೊಂಡಿದ್ದಾರೆ. ಈ ರೀತಿಯಿಂದ ೧,೮೦೧ ರೂಪಾಯಿ ೮ ಪೈಸೆ ಒಂದು ಕಡೆ ಮತ್ತು ೩೪೨ ರೂಪಾಯಿ ಇನ್ನೊಂದು ಕಡೆ ಪಡೆದಿದ್ದಾರೆ. ಇದನ್ನು ಬಹಳ ಸಣ್ಣ ಅಮೌಂಟ್ ಎಂದು ಭಾವಿಸಬಹುದು. ಆದರೆ ಅಲ್ಲಿ ಯಾವರೀತಿ ಅವ್ಯವಹಾರ ನಡೆದಿದೆ ಎಂಬುದಕ್ಕೆ ಉದಾಹರಣೆ ಕೊಡುತ್ತಿದ್ದೇನೆ. ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರು ಅವರೇ ಸ್ವತಹ ಕಾರನ್ನು ಇಟ್ಟುಕೊಂಡಿಲ್ಲ. ಏತಕ್ಕೆಂದರೆ ಡಿ.ಸಿ.ಸಿ. ಬ್ಯಾಂಕಿನ ಕಾರನ್ನೇ ಸ್ವಂತ ಕಾರಿನಂತೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಸ್ವಂತ ಕಾರಿನಲ್ಲಿ ಹೋಗಿದ್ದೇನೆಂದು ಡಿ.ಸಿ.ಸಿ. ಬ್ಯಾಂಕಿನಲ್ಲಿ ಹಣ ತೆಗೆದುಕೊಂಡಿದ್ದಾರೆ, ಇದು ಸಾವಿರಾರು ರೂಪಾಯಿಗಳಷ್ಟಾಗಿದೆ. ಆದರೆ, ಅವರ ಬಳಿ ಸ್ವಂತ ಕಾರಿಲ್ಲ. ಅಲ್ಲದೆ ಮಾರ್ಕೆಟಿಂಗ್ ಕಮಿಟಿಯಲ್ಲೂ ಕೂಡ ಸ್ವಂತ ಕಾರು ಇದೆ ಎಂದು ಪಡೆದಿದ್ದಾರೆ. ಮಾರ್ಕೆಟಿಂಗ್ ಕಮಿಟಿಯ ಆಡಿಟ್ ವರದಿಯ ಕೆಲವು ಎಕ್ಸ್‌ಟ್ರಾಕ್ಟ್‌ಗಳು ನನ್ನ ಬಳಿ ಇವೆ. ಮಾರ್ಕೆಟಿಂಗ್ ಸಮಿತಿಗಳನ್ನು ಸರ್ಕಾರದವರು ಇನ್ನೂ ಏತಕ್ಕೆ ಇಟ್ಟಿದ್ದಾರೆನ್ನುವುದು ನನಗರ್ಥವಾಗುತ್ತಿಲ್ಲ. ಸಿಮೆಂಗಾಗದೇ ಇರುವವರನ್ನು ಕೂಕ್ಕುವುದಕ್ಕೆ ಈ ಸಮಿತಿಗಳನ್ನಿಟ್ಟುಕೊಂಡಿದ್ದೀರೆಂದು ನನ್ನ ಭಾವನೆ. ನಾನು ಮಾರ್ಕೆಟಿಂಗ್ ಸಮಿತಿ ಬಗ್ಗೆ ಕೂಡ ದೂರುಗಳನ್ನು ಕೊಟ್ಟಿದ್ದೇನೆ. ಮಾರ್ಕೆಟಿಂಗ್ ಸಮಿತಿಯ ಸದಸ್ಯರೊಬ್ಬರು ಅಲ್ಲಿನ ಸೆಕ್ರೆಟರಿಯನ್ನು ಟಿ.ಎ. ಮತ್ತು ಡಿ.ಎ. ಬಿಲ್ಲಿನ ಎಕ್ಸ್‌ಟ್ರಾಕ್ಟ್ ಕೊಡಿ ಎಂದು ಕೇಳಿದರೆ, ಕೊಡುವುದಿಲ್ಲವೆಂದು ಸದಸ್ಯರಿಗೆ ಉತ್ತರ ಕೊಡುತ್ತಾರೆ. ಟಿ.ಎ. ಮತ್ತು ಡಿ.ಎ. ಬಗ್ಗೆ ಆಡಿಟ್ ವರದಿ ಕೂಡ ಇದೆ. ಇದರಲ್ಲಿ ೧೯೭೦-೭೧ ರಿಂದ ಹಿಡಿದು ೧೯೭೫-೭೬ ರವರೆಗಿನ ಕಥೆಯಲ್ಲಾ ಇದೆ. ಇದರಲ್ಲಿ ಸಾವಿರಾರು ರೂಪಾಯಿಗಳಷ್ಟು ಹಣವನ್ನು ಲೂಟಿ ಮಾಡಿದ್ದಾರೆ. ಸಹಕಾರ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಏನು ಕೆಲಸ ಮಾಡಿದ್ದಾರೆ ? ಅವರಿರುವುದೇತಕ್ಕೆ ? ವಿಜಿಲೆನ್ಸ್ ಸೆಲ್, ಇನ್‌ಸ್ಪೆಕ್ಷನ್ ಸೆಲ್ ಎಲ್ಲಾ ಏನು ಕೆಲಸ ಮಾಡುತ್ತಿವೆ ? ಇದೇನಿದ್ದರೂ ಸರಕಾರದ ಅಚ್ಚುಮೆಚ್ಚಿನ ಅಥವಾ ಅವರ ಪಕ್ಷಕ್ಕೆ ಸಂಬಂಧಪಟ್ಟವರಿದ್ದರೆ- ಅವರು ಏನು ಬೇಕಾದರೂ ಮಾಡಲಿ, ಯಾರ ತಲೆಯನ್ನು ಎಷ್ಟಾದರೂ ಹೊಡೆಯಲಿ-ಯಾವ ಚಿಂತೆಯೂ ಇಲ್ಲ. ಅವರಿಗೆ ಎಲ್ಲ ವಿಧವಾದ ಸವಲತ್ತುಗಳೂ ದೊರಕುತ್ತಿವೆ. ಅವರು ಮಂತ್ರಿಗಳ ಹತ್ತಿರ ಬಂದರೆ, ಆಹಾ! ಅವರಿಗೆಂಥ ಗೌರವ ಸ್ಥಾನ. ಅವರು ಆಗ ಬಹಳ ಗೌರವಾನ್ವಿತ ವ್ಯಕ್ತಿಗಳು ! ಕೋಲಾರ ತಾಲ್ಲೂಕಿನ ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರು ಡಿಫಾಲ್ಟರ್ ಆಗಿದ್ದಾರೆ. ಅವರಿಗೆ ನಾನು ಸರ್ಟಿಫಿಕೇಟ್ ಕೊಡುತ್ತೇನೆ. ಆದರೆ, ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ತಯಾರಿರಲಿಲ್ಲ ?

ಶ್ರೀ ಕೋಣಂದೂರು ಲಿಂಗಪ್ಪ.—ಏತಕ್ಕೆ ?

ಶ್ರೀ ಸಿ. ಬೈರೇಗೌಡ.—ಅವರು ಯಾವ ಕಾಂಗ್ರೆಸಿನವರು. ಇದನ್ನು (ಒಂದು ಪತ್ರವನ್ನು ತೋರಿಸಿ) ಕೊಡುತ್ತೇನೆ, ಅವರು ಡಿಫಾಲ್ಟರ್ ಎನ್ನುವುದಕ್ಕೆ ಸರ್ಟಿಫಿಕೇಟ್ ಇದು. ಮಾನ್ಯ ಸಹಕಾರ ಸಚಿವರು ತಕ್ಷಣ ಅವರನ್ನು ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕುವುದಕ್ಕೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ ಒಟ್ಟು ಹತ್ತೊಂಬತ್ತು ಸಹಕಾರ ಸಕ್ಕರೆ ಕಾರ್ಖಾನೆಗಳಿವೆ. ಇವುಗಳಲ್ಲಿ ಒಂಬತ್ತು ಕಾರ್ಖಾನೆಗಳು ಮಾತ್ರ ಕೆಲಸ ಮಾಡುತ್ತಿವೆ. ಮಾನ್ಯ ಕೆಂಚೇಗೌಡರು ಹೇಳಿದ ಹಾಗೆ, ಒಂದೊಂದು ಸಕ್ಕರೆ ಕಾರ್ಖಾನೆಯಲ್ಲಿ ಒಂದೊಂದು ಬೆಲೆ. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ೧೮೦ ರೂಪಾಯಿನವರೆಗೂ ಅಲ್ಲಿನ ರೈತರಿಗೆ ಕೊಡುತ್ತಿದ್ದಾರೆ. ಇನ್ನು ಕೆಲವು ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ ೧೨೦-೧೩೦ ರೂಪಾಯಿಗಳಂತೆ ಕೊಡುತ್ತಿದ್ದಾರೆ. ಈ ರೈತರು ಮಾಡಿದ ಅನ್ಯಾಯವಾದರೂ ಏನು ? ಪಾಂಡವಪುರದವರು ಏತಕ್ಕೆ ಇಷ್ಟೊಂದು ಪುಣ್ಯ ತೆಗೆದುಕೊಳ್ಳುತ್ತಿದಾರೆ? ಬೇರೆ ರೈತರು ಮಾಡಿದ ಪಾಪದ ಕೆಲಸವೇನು ; ಮಾನ್ಯ ಸಚಿವರು ಇದರ ಬಗ್ಗೆ ದಯವಿಟ್ಟು ಹೇಳಬೇಕು. ಯಾವ ರೈತನೇ ಆಗಲಿ ಅವನು ಕಬ್ಬನ್ನು ಎಲ್ಲೇ ಬೆಳೆಯಲಿ-ಅವನಿಗೆ ಯೋಗ್ಯವಾದ ಮತ್ತು ಏಕರೂಪವಾದ ಬೆಲೆಯನ್ನು ಕೊಡುವುದಕ್ಕೆ ಸರ್ಕಾರದವರು ಎಲ್ಲ ಪ್ರಯತ್ನವನ್ನೂ ಮಾಡಬೇಕು. ನಮ್ಮ ಜಿಲ್ಲೆಯ ಗೌರಿಬಿದನೂರಿನಲ್ಲಿ ಒಂದು ಸಹಕಾರ ಸಕ್ಕರೆ ಕಾರ್ಖಾನೆಯಿದೆ. ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವವರು, ಕಳೆದ ೭-೮ ವರ್ಷಗಳಿಂದಲೂ ಇದ್ದುಕೊಂಡು, ಬಹಳ ಸಬಲರಾಗಿದ್ದಾರೆ ಗೊಬ್ಬರದ ವ್ಯವಹಾರದ ಒಂದರಲ್ಲಿ ಸುಮಾರು ೩ ಲಕ್ಷ ರೂಪಾಯಿಗಳ ದುರ್ವ್ಯವಹಾರ ನಡೆದಿದೆ. ಅಲ್ಲಿ ಕೊಟ್ಟು ತೆಗೆದುಕೊಳ್ಳುವ ವ್ಯವಹಾರವನ್ನು ಒಬ್ಬ ದಿನ ಗೂಲಿ ಮೇಲೆ ಕೆಲಸ ಮಾಡುವ ಗುಮಾಸ್ತನ ಮೂಲಕ ನಡೆಸುತ್ತಿದ್ದಾರೆ. ಆದರೆ, ಈ ಅವ್ಯವಹಾರಕ್ಕೆ ಕಾರಣ ಗುಮಾಸ್ತನಲ್ಲ. ಅವನು ನಡೆಸುತ್ತಲೂ ಇಲ್ಲ. ಅಲ್ಲಿರುವ ಮ್ಯಾನೇಜಿಂಗ್ ಡೈರೆಕ್ಟರ್, ಸೆಕ್ರೆಟರಿ ಮತ್ತು ಇತರ ಸಿಬ್ಬಂದಿ ವರ್ಗದವರೆಲ್ಲ ಸೇರಿ ನಡೆಸಿರುವ ದುರ್ವ್ಯವಹಾರವಿದು. ಅದನ್ನೆಲ್ಲಾ ಮುಚ್ಚು ವುದಕ್ಕೆ ಇಂದು ಆ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ಗುಮಾಸ್ತನ ಮೇಲೆ ಹಾಕುತ್ತಿದ್ದಾರೆ. ಏಕೆಂದರೆ, ಅವನಿಗೆ ಜವಾಬ್ದಾರಿ ಇಲ್ಲ. ಬಹಳ ವಿಶ್ವಪ್ರಯತ್ನ ಮಾಡುತ್ತಿದ್ದಾರೆ ಆದುದರಿಂದ, ಮಾನ್ಯ ಸಹಕಾರ ಸಚಿವರು, ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಮೇಲೆ, ದುರ್ವ್ಯವಹಾರದ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡರು ಎಂಬುದನ್ನು ಕೇಳಬಯಸುತ್ತೇನೆ. ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಹಾಗೂ ಸಂಸದೀಯ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ಪುಷ್ಟೀಕರಿಸಿ, ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ನಾನು ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ವರ್ಷ ೧೯೩೭. ವ್ಯವಸಾಯ ಕ್ಷೇತ್ರದಲ್ಲಾಗಲೀ, ಸಣ್ಣ ಪುಟ್ಟ ಕೈಗಾರಿಕೆಗಳ ಕ್ಷೇತ್ರದಲ್ಲಾಗಲೀ ಅಥವಾ ಸಾಮಾಜಿಕ ನ್ಯಾಯವನ್ನು ದೊರಕಿಸುವ ದೃಷ್ಟಿಯಿಂದಲಾಗಲೀ ಸಹಕಾರ ಸಂಘಗಳು ಮತ್ತು ಸಹಕಾರ ಇಲಾಖೆ ಒಂದು ಒಳ್ಳೆಯ ಮಾಧ್ಯಮವೆಂದು ತಿಳಿದು ನಾನು ಅವುಗಳಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿ, ಗ್ರಾಮ ಮಟ್ಟದ ಸಹಕಾರ ಸಂಘದಿಂದ ಹಿಡಿದು ರಾಜ್ಯ ಮಟ್ಟದ ಸಹಕಾರ ಸಂಘಗಳಲ್ಲೂ ಸಕ್ರಿಯ ಪಾತ್ರ ವಹಿಸುವ ಅವಕಾಶ ೧೯೬೭ ರವರೆಗೂ ಅಂದರೆ, ನಾನು ಶಾಸಕನಾಗಿ ಚುನಾಯಿತನಾಗುವವರೆಗೂ ಇತ್ತು. ಸಹಕಾರ ತತ್ವ ಮತ್ತು ಸಹಕಾರ ಇಲಾಖೆ ಮೂಲಕ ಜನತೆಗೆ ಉತ್ತಮ ಸೇವೆ ಸಲ್ಲಿಸಲು ಅವಕಾಶವಿದೆ ಎನ್ನುವ ದೃಷ್ಟಿಯಿಂದ ಇವುಗಳ ಬಗ್ಗೆ ಹೆಚ್ಚು ನಂಬಿಕೆಯಿಟ್ಟು ಕೊಂಡಿರುವವರ ಪೈಕಿ ನಾನು ಒಬ್ಬ. ನಾನು ೧೯೬೭ನೇ ಇಸವಿಯಿಂದೀಚೆಗೆ ಯಾವ ಸಂಘ ಸಂಸ್ಥೆ ಗಳಲ್ಲೂ ಡೈರೆಕ್ಟರ್ ಆಗಿಲ್ಲ, ಮತ್ತು ಸಕ್ರಿಯವಾಗಿ ಅವುಗಳಲ್ಲಿ ಕೆಲಸ ಮಾಡುವುದನ್ನು ಬಿಟ್ಟಿದ್ದೇನೆ. ಆದರೆ, ಸಹಕಾರ ಸಂಘಗಳು ನಡೆಯುತ್ತಿರುವ ಬಗ್ಗೆ, ಸಹಕಾರ ಇಲಾಖೆ ಕೆಲಸ ಮಾಡುತ್ತಿರುವ ಬಗ್ಗೆ ಸಾರ್ವಜನಿಕ ಜೀವನದಲ್ಲಿ ನಾನು ಶಾಸಕನಾಗಿರುವುದರಿಂದ ಒಂದಲ್ಲ ಒಂದು ರೀತಿಯಿಂದ ನನ್ನ ಗಮನಕ್ಕೆ ಬರುತ್ತಿವೆ. ಸಹಕಾರ ತತ್ವ ಅದರಲ್ಲೂ ಸಮಾಜವಾದದಲ್ಲಿ ನಂಬಿಕೆಯಿರುವ ಮತ್ತು ಆ ಬಗ್ಗೆ ನಿಚ್ಚಳ ಭಾವನೆಯನ್ನಿಟ್ಟುಕೊಂಡಿರುವ, ಕಾಯಾವಾಚಾಮನಸಾ ಸಮಾಜವಾದವನ್ನು ದೊರಕಿಸಬೇಕೆನ್ನುವ ವಿಚಾರದಲ್ಲಿ ಕಳಕಳಿಯಿರುವವರೊಬ್ಬರು ಈ ಇಲಾಖಾ ಮಂತ್ರಿಗಳಾದ ಮೇಲೆ, ಸಹಕಾರ ತತ್ವಗಳ ಅರಿವು ಇರುವ ವ್ಯಕ್ತಿಯನ್ನು ಇಲಾಖೆಯ ಮುಖ್ಯಾಧಿಕಾರಿಯನ್ನಾಗಿ ನೇಮಿಸದೆ, ಒಬ್ಬ ಐ.ಎ.ಎಸ್ ಅಧಿಕಾರಿಯನ್ನು ನೇಮಿಸುವ ನೀತಿ ಹಾಕಿಕೊಂಡಿರುವ ವಿಚಾರ ನನಗೆ ಬಹಳ ದುಃಖವನ್ನುಂಟು ಮಾಡುತ್ತದೆ ವ್ಯವಸಾಯ ಇಲಾಖೆಯ ನಿರ್ದೇಶಕರನ್ನು ನೇಮಿಸುವದಾಗಲಿ, ರೇಷ್ಮೆ ಇಲಾಖೆಯ ನಿರ್ದೇಶಕರನ್ನು ನೇಮಿಸುವ ವಿಚಾರದಲ್ಲಾಗಲಿ ಸಹಕಾರ ಇಲಾಖೆಗೆ ರಿಜಿಸ್ಟ್ರಾರ್ ಅವರನ್ನು ನೇಮಿಸುವ ವಿಚಾರದಲ್ಲಾಗಲೀ ಸರ್ಕಾರದವರು ಐ.ಎ.ಎಸ್ ಅಧಿಕಾರಿಗಳನ್ನು ನೇಮಿಸುವ ನಿಲುವನ್ನು ಅಥವಾ ನೀತಿಯನ್ನು ಏತಕ್ಕೆ ತಾಳಿದರೆಂದು ನನಗರ್ಥವಾಗುವುದಿಲ್ಲ. ಈ ನಿಲುವಿನಂತೆ ಕಳೆದ ನಾಲ್ಕೈದು ವರ್ಷಗಳಿಂದ

ಸಹಕಾರ ಇಲಾಖೆಯಲ್ಲಿ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ರಿಜಿಸ್ಟ್ರಾರ್ ಅನ್ನಾಗಿ ನೇಮಕ ಮಾಡಿರುವುದರಿಂದ, ಇಲಾಖೆಯಲ್ಲಿ ನುರಿತು ಮೆಚ್ಚುಗೆಯನ್ನು ಪಡೆದಿರುವ ಅಧಿಕಾರಿಗಳಿಗೆ ಇಲಾಖಾ ಮುಖ್ಯಾಧಿಕಾರಿಗಳಾಗಲು ಅವಕಾಶ ತಪ್ಪಿರುವುದರಿಂದ, ಈ ಇಲಾಖೆ ಇಂದು ತುಕ್ಕು ಹಿಡಿದಿದೆಯೇನೋ ಎಂದು ನನಗಾದರೂ ಭಾವನೆಯಾಗುತ್ತಿದೆ. ಸಹಕಾರ ಇಲಾಖೆ ಇಂದು ನಡೆಯುತ್ತಿರುವ ವಿಧಾನವನ್ನು ನೋಡಿದರೆ ಅದು ಅಧೋಗತಿಗಿಳಿಯುತ್ತಿದೆ ಎಂದು ಹೇಳಿದರೆ, ಮಾನ್ಯ ಮಂತ್ರಿಗಳು ತಪ್ಪಾಗಿ ತಿಳಿಯಬಾರದೆಂದು ಹೇಳುತ್ತೇನೆ. ನಮ್ಮ ಸಹಕಾರ ಇಲಾಖೆಯಲ್ಲಿ ದಕ್ಷರಿದ್ದಾರೆ, ಮಾನ್ಯ ಮಂತ್ರಿಗಳ ಮೆಚ್ಚುಗೆಯನ್ನು ಪಡೆದ ಅಧಿಕಾರಿಗಳೂ ಇದ್ದಾರೆ ಮಹಾರಾಷ್ಟ್ರದಲ್ಲಿ ಸಹಕಾರ ಇಲಾಖೆ ಚೆನ್ನಾಗಿ ಕೆಲಸ ಮಾಡಿರುವುದನ್ನು ಮೆಚ್ಚಬೇಕಾದರೂ ಕರ್ನಾಟಕದಲ್ಲಿ ಅದಕ್ಕೆ ಕಡಮೆ ಇಲ್ಲದಷ್ಟು ಮಟ್ಟಿಗೆ ಸಹಕಾರ ಇಲಾಖೆ ಚೆನ್ನಾಗಿ ಆಡಳಿತ ನಿರ್ವಹಿಸಿದೆ. ಆದರೆ, ಐ.ಎ.ಎಸ್. ಅಧಿಕಾರಿಗಳನ್ನು ಇದರ ಮುಖ್ಯಾಧಿಕಾರಿಗಳನ್ನಾಗಿ ನೇಮಕ ಮಾಡಬಾರದು. ಸಹಕಾರ ತತ್ವಗಳ ಕಲ್ಪನೆಯನ್ನರಿತವರೂ, ದಕ್ಷರೂ ಈ ಇಲಾಖೆಯಲ್ಲಿ ಹತ್ತಾರು ವರ್ಷಗಳ ಕಾಲ ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿದ ಅಧಿಕಾರಿಗಳನ್ನು ಈ ಇಲಾಖೆಯ ಮುಖ್ಯಾಧಿಕಾರಿಗಳನ್ನಾಗಿ ನೇಮಿಸುವ ನಿಲುವನ್ನು ತಾಳಬೇಕೆಂದು ನಾನು ಸಹಕಾರ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಈಗಾಗಲೇ ನಮ್ಮ ಕರ್ನಾಟಕದಲ್ಲಿ ರಿಜರ್ವ್ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡು, ಸಹಕಾರ ಸಂಘಗಳು ವ್ಯವಸ್ಥಿತ ರೀತಿಯಿಂದ ಕೆಲಸ ಮಾಡುವ ಉದ್ದೇಶದಿಂದ, ಅವುಗಳನ್ನು ಒಂದೊಂದು ಯೂನಿಟ್ಟುಗಳನ್ನಾಗಿ ಮಾಡಿ, ಪುನರ್ವಿಂಗಡಣಾ ಕೆಲಸವನ್ನು ಕೈಗೊಂಡಿದ್ದು, ಹಲವಾರು ಜಿಲ್ಲೆಗಳಲ್ಲಿ ಇದು ಕಾರ್ಯರೂಪದಲ್ಲೂ ನಡೆದಿದೆ. ಆದರೆ, ಇನ್ನೂ ಕೆಲವು ಜಿಲ್ಲೆಗಳಲ್ಲಿಲ್ಲಾ ಈ ಕಾರ್ಯ ನಡೆದಿಲ್ಲ, ಮತ್ತು ಈಗಾಗಲೇ ಈ ಕಾರ್ಯ ನಡೆದಿರುವ ಜಿಲ್ಲೆಗಳ ತಾಲ್ಲೂಕು ಭಾಗಗಳಲ್ಲಿ ನಡೆದಿಲ್ಲ. ಆದುದರಿಂದ, ತಾಲ್ಲೂಕು ಮಟ್ಟದಲ್ಲೂ ಆದಷ್ಟು ಬೇಗ ಪುನರ್ವಿಂಗಡಣಾ ಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ. ಸಹಕಾರ ಸಂಘಗಳ ಪುನರ್ವಿಂಗಡಣೆ ಬಗ್ಗೆ ಮಾನ್ಯ ಸದಸ್ಯ ಶ್ರೀ ಸಿದ್ಧಯ್ಯನವರೂ ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಟೆಕ್ನಿಕಲ್ ಅಸಿಸ್ಟೆಂಟ್‌ಗಳನ್ನು ಇನ್ನೂ ನೇಮಕ ಮಾಡದಿರುವುದರಿಂದ, ಹಣಕಾಸು ಬ್ಯಾಂಕಿನವರು, ಇದೊಂದನ್ನು ನೆಪವಾಗಿಟ್ಟುಕೊಂಡು, ಈ ಸಂಘಗಳಿಗೆ ಹಣಕಾಸು ಸಹಾಯವನ್ನು ಮುಂದೂಡುತ್ತಿದ್ದಾರೆ ಎಂದು ಗೊತ್ತಾಗಿದೆ. ಆದುದರಿಂದ, ದಯವಿಟ್ಟು ಈ ಸಂಘಗಳಿಗೆ ಕೂಡಲೇ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಟೆಕ್ನಿಕಲ್ ಅಸಿಸ್ಟೆಂಟಗಳನ್ನು ನೇಮಕ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ನಾನು ಮತ್ತು ಮಾನ್ಯ ಸ್ನೇಹಿತ ಸದಸ್ಯ ಶ್ರೀ ಸಿದ್ಧಯ್ಯನವರು ಒಂದೇ ತಾಲ್ಲೂಕಿಗೆ ಸೇರಿದ ಶಾಸಕರು. ನಮ್ಮ ತಾಲ್ಲೂಕಿನ ಪಿ.ಎಲ್.ಡಿ. ಬ್ಯಾಂಕ್ ಮತ್ತು ಟಿಎಪಿಸಿಎಂ ಸೊಸೈಟಿಗಳ ಅಕ್ರಮಗಳ ಬಗ್ಗೆ ಹಿಂದಿನ ಸಹಕಾರ ಸಚಿವರಾದ ಶ್ರೀ ಪಿ ಎನ್. ಪಾಟೀಲರಿಗೆ ದೂರು ಕೊಟ್ಟಿದ್ದೆವು. ನಾವು ಮಾಡಿರುವ ಆಪಾದನೆಗಳು ಸರಿಯೇ ಇಲ್ಲವೆ ಎನ್ನುವುದನ್ನು ನೋಡಲು, ಅವರು ಆ ಸಂಘಗಳ ೨-೩ ವರ್ಷಗಳ ಆಡಿಟ್ ರಿಪೋರ್ಟನ್ನು ತರಿಸಿಕೊಂಡು ವಿಚಾರ ಮಾಡಿ, ಅದರ ಮೇಲೆ ಚೆಕ್ ಆಡಿಟ್ ಕೂಡ ಮಾಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಬರೆದಿದ್ದಾರೆ. ಆದರೆ, ಇದುವರೆಗೂ ಇದಕ್ಕೆ ಸಂಬಂಧಪಟ್ಟವರ ಮೇಲೆ ಇಲಾಖೆಯವರಾಗಲೀ ಅಥವಾ ಸರ್ಕಾರದವರಾಗಲೀ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಸಹಕಾರ ಇಲಾಖೆ ಅಧೋಗತಿಗಿಳಿಯುತ್ತಿದೆ. ಮಂತ್ರಿಗಳು ಈ ಸಂಘಗಳಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಗಮನ ಹರಿಸಿ, ವಿಚಾರಣೆ ನಡೆಸಬೇಕೆಂದು ಹೇಳುತ್ತೇನೆ.

ಇನ್ನು ಅಧ್ಯಕ್ಷರೇ ನಮ್ಮಲ್ಲಿಯ ಒಂದು ಕಳಕಳಿ ಏನೆಂದರೆ, ನಮ್ಮ ಕ್ಷೇತ್ರದಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಿ ಕಬ್ಬನ್ನು ಅರಿಯುವುದಕ್ಕೂ ಪ್ರಾರಂಭವಾಗಿದೆ ಆದರೆ ಒಂದು ಚಿಂತಾಜನಕ ವಿಚಾರವೇನೆಂದರೆ, ಅದರ ಬಗ್ಗೆ ಮಾನ್ಯ ಶ್ರೀ ಕೆಂಚೇಗೌಡರವರು ಕೂಡ ಹೇಳಿದರು. ಕೊಳ್ಳೇಗಾಲದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬನ್ನು ಅರಿಯತಕ್ಕ ಕಾಲದಲ್ಲಿ ಇಲ್ಲಿಯ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್‌ರೊಬ್ಬರು, ಅವರು ನಮಗೆ ತಿಳಿದ ಮಟ್ಟಿಗೆ ಬಹುಶಃ ಬೋರ್ಡ್ ಆಫ್ ಮ್ಯಾನೇಜ್‌ಮೆಂಟನಲ್ಲಿ ಅನೇಕ ಸಂದರ್ಭದಲ್ಲಿ ಗೊಂದಲ ಉಂಟು ಮಾಡತಕ್ಕಂಥ ಅನೇಕ ಅವ್ಯವಹಾರಗಳನ್ನು ಮಾಡಿ ಹಣವನ್ನು ನಷ್ಟ ಮಾಡತಕ್ಕಂಥ ಕೆಲಸಗಳನ್ನು ಮಾಡಿದ್ದಾರೆ. ಅದನ್ನು ಸರ್ಕಾರದವರ ಗಮನಕ್ಕೂ ತಂದಿದ್ದೇವೆ. ಅಂಥವರನ್ನು ಅಲ್ಲಿಂದ ತೆಗೆದು ಹಾಕಿ ಮತ್ತೊಮ್ಮೆ ಅವರನ್ನೇ ಚುಂಚನ ಕಟ್ಟೆ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಹಾಕಿದ್ದಾರೆ ಎಂದು ತಿಳಿದು ಬಂದಿದೆ. ಕೊಳ್ಳೆಗಾಲ ಸಹಕಾರಿ ಸುಗರ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಅಲ್ಲಿ ಎಷ್ಟು ಕಬ್ಬು ಬರುತ್ತದೆ ? ಎಷ್ಟನ್ನು ಅರಿಯುವುದಕ್ಕೆ ಸಾಧ್ಯ

ವಾಗುವುದಕ್ಕೆ ಎಂಬುದನ್ನೆಲ್ಲಾ ಲೆಕ್ಕ ಹಾಕಿ ಶುರು ಮಾಡಿ ಒಂದೂವರೆ ವರ್ಷವಾಗಿದ್ದರೂ ಕೂಡ ಅಲ್ಲಿ ವರ್ಷದಲ್ಲಿ ೩-೪ ತಿಂಗಳೂ ಕೂಡ ಸರಿಯಾಗಿ ಕೆಲಸವಾಗುತ್ತಿಲ್ಲ. ಇದರಿಂದಾಗಿ ನಾವು ಅಲ್ಲಿಗೆ ಏನು ಲೋನ್ ತೆಗೆದುಕೊಂಡಿದ್ದೇವೆ ಆ ಹಣವನ್ನು ಕೂಡ ಹಿಂದಿರುಗಿಸಿ ಕೊಡುವುದಕ್ಕೂ ಆಗುತ್ತಿಲ್ಲ. ಆ ರೀತಿಯಿಂದಾಗಿ ನಷ್ಟವನ್ನು ಅನುಭವಿಸಬೇಕಾದ ಪರಿಸ್ಥಿತಿ ಬಂದಿದೆ ಅಲ್ಲಿ ಸುತ್ತ ಮುತ್ತ ಕಬ್ಬನ್ನು ಬೆಳೆಯುತಕ್ಕಂಥವರು ಶೇಕಡ ೯೫ ಭಾಗ ಕಬ್ಬನ್ನು ಶುಗರ್ ಫ್ಯಾಕ್ಟರಿಗೇ ಕೊಡಬೇಕೆಂದು ಅಲ್ಲಿಯ ಫ್ಯಾಕ್ಟರಿಯ ಮ್ಯಾನೇಜಿಂಗ್ ಡೈರೆಕ್ಟರ್‌ವರೂ ಮತ್ತು ಅಲ್ಲಿಯ ಚೇರ್ಮನ್‌ರವರೂ ತೀರ್ಮಾನ ಮಾಡಿ ಲೆವಿಯನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಇದರಿಂದಾಗಿ ಹಳ್ಳಿಗಳಲ್ಲಿ ಕಾಫಿ, ಟೀ ಕುಡಿಯುತಕ್ಕಂಥವರಿಗೂ ಸಹ ಸಕ್ಕರೆಗೆ, ಬೆಲ್ಲಕ್ಕೆ ಕಬ್ಬನ್ನು ಉಳಿಸಿಕೊಳ್ಳದೇ ಬೆಳೆದಂಥ ಕಬ್ಬನ್ನೆಲ್ಲಾ ಆ ಫ್ಯಾಕ್ಟರಿಯವರಿಗೇ ಕೊಡಬೇಕಾಗಿದೆ. ಆದುದರಿಂದ ೬೦ ಪರ್ಸೆಂಟ್ ಶುಗರ್ ಕೇನ್‌ನನ್ನು ಫ್ಯಾಕ್ಟರಿಗೆ ಇನ್ನು ೪೦ ಪರ್ಸೆಂಟ್ ಅವರ ಮನೆಯವರಿಗೆ ಮತ್ತು ಬೆಲ್ಲವನ್ನು ಅವನ ಸಂಸಾರಕ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಇದರ ಬಗ್ಗೆ ಅಲ್ಲಿಯ ಶಾಸಕರು ಮತ್ತು ಅಲ್ಲಿಯ ಜನರೆಲ್ಲಾ ಮನವಿಗಳನ್ನು ಸರ್ಕಾರಕ್ಕೂ ಮಾನ್ಯ ಸಚಿವರುಗಳಿಗೂ ಕೊಟ್ಟಿದ್ದೇವೆ. ಆದರೂ ಇನ್ನೂವರೆಗೆ ಅದರ ಬಗ್ಗೆ ತೀರ್ಮಾನ ಮಾಡಿಲ್ಲ. ಹಾಗೂ ಒಂದು ಟನ್ನಿಗೆ ೧೨೦ ರೂಪಾಯಿಗಳವರೆಗೆ ಮಾತ್ರ ಕೊಡುತ್ತಿದ್ದಾರೆ. ಅದೇ ಬೇರೆ ಕಡೆಯಲ್ಲಿ ೧೫೦ ರಿಂದ ೧೬೦ ರೂ. ಗಳವರೆಗೆ ಒಂದು ಟನ್ನಿಗೆ ಕೊಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ಇದರಿಂದಾಗಿ ಕಬ್ಬನ್ನು ಬೆಳೆಯುತಕ್ಕಂಥವರಿಗೆ ಮುಂದೆ ಕಬ್ಬನ್ನೇ ಬೆಳೆಯಬಾರದು ಎನ್ನುವ ನಿರ್ಧಾರಕ್ಕೆ ಬರುವವರಿದ್ದಾರೆ. ಆದುದರಿಂದ ಕೂಡಲೇ ಮಾನ್ಯ ಸಚಿವರು ಇದರ ಕಡೆಗೆ ಗಮನ ಹರಿಸಿ ಲೆವಿ ಆರ್ಡರ್ ಏನಿದೆ ಅದನ್ನು ಫೈ ಮಾಡಿ ೬೦-೪೦ರ ಹಾಗೆ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ

ಸನ್ಮಾನ್ಯ ಅಧ್ಯಕ್ಷಣೀಯವರೇ ಮಾನ್ಯ ಫೈನಾನ್ಸ್ ಮಿನಿಸ್ಟರ್ ರವರು ಕೂಡ ಒಂದಲ್ಲ ೨-೩ ಬಾರಿ ೧೯೭೭-೭೮ನೇ ವರ್ಷದಲ್ಲಿ ಕ್ರಾಪ್ ಲೋನ್ಸ್ ಮತ್ತು ಅಗ್ರಿಕಲ್ಚರಲ್ ಲೋನ್ಸ್‌ಗಾಗಿ ೨೦೦ ಕೋಟಿ ರೂಪಾಯಿಗಳಿಗೆ ಮೀರಿದ ಹಾಗೆ ಕೊಡುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ ಆದರೆ ಇವತ್ತು ಒಂದು ಸಮಸ್ಯೆ ಉದ್ಭವವಾಗಿದೆ ಅದು ಏನೆಂದರೆ ಕೋ ಆಪರೇಟಿವ್ ಬ್ಯಾಂಕ್ ಮತ್ತು ಕಮರ್ಷಿಯಲ್ ಬ್ಯಾಂಕ್‌ಗಳಿಗೆ ಫಿನಾನ್ಸ್ ಮಾಡುವುದಕ್ಕೆ, ಹಣವನ್ನು ಅಲಾಟ್ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದರೆ, ಜಿಲ್ಲಾ ಮಟ್ಟದಲ್ಲಿ ಇದ್ದರೆ ಅದನ್ನು ರಾಜ್ಯಮಟ್ಟದಲ್ಲಿ ಅಲಾಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಹೀಗೆ ಬದಲಾವಣೆಗಳನ್ನು ಮಾಡುತ್ತಿದ್ದಾರೆ ಇದರಿಂದಾಗಿ ಅನೇಕ ಸೊಸೈಟಿಗಳಿಗೆ ನಿರ್ದಿಷ್ಟವಾಗಿ ಹಣ ಸಿಕ್ಕದೇ ಬಹಳ ತೊಂದರೆಯಾಗಿದೆ, ಇನ್ನು ಕ್ರಾಪ್ ಲೋನ್ ಕೋ ಆಪರೇಟಿವ್ ಬ್ಯಾಂಕ್‌ನಿಂದ ನಮ್ಮ ಮೈಸೂರು ಜಿಲ್ಲೆಯಲ್ಲಿ ತಿಂಗಳು ಗಟ್ಟಲೆಯಾದರೂ ಇನ್ನೂ ಅವರು ಹಣವನ್ನು ರಿಲೀಸ್ ಮಾಡಿಲ್ಲ, ಒಂದಲ್ಲ ಒಂದು ಕಾರಣದಿಂದ ಸತಾಯಿಸುತ್ತಿದ್ದಾರೆ ಆದುದರಿಂದ ಮಾನ್ಯ ಮಂತ್ರಿಗಳವರು ಇದನ್ನು ಗಮನಿಸಬೇಕು ಹಾಗೂ ಸೂಕ್ತ ಕ್ರಮವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ತಿಳಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಸನ್ಮಾನ್ಯ ಅಧ್ಯಕ್ಷರೇ, ಸಹಕಾರ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ.

ಮುಖ್ಯವಾಗಿ ಸ್ಟೇಟ್ ಲೆಜಿಸ್ಲೇಚರ್ ಅಂಡ್ ಎಲೆಕ್ಷನ್‌ಗಾಗಿ ಏನು ೩ ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಭೆಯ ಮುಂದೆ ಮಂಜೂರಾತಿಗಾಗಿ ಇಟ್ಟಿದ್ದಾರೆ. ತಮಗೆ ಗೊತ್ತಿರುವಂತೆ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗ ಈ ಮೂರು ಪ್ರತ್ಯೇಕವಾಗಿರಬೇಕು. ಆದರೆ ನಮ್ಮ ಕರ್ನಾಟಕದ ದುರ್ದೈವ ಏನಾಗಿದೆ ಎಂದರೆ, ಈ ಶಾಸಕಾಂಗ ಇನ್ನೂ ಪ್ರತ್ಯೇಕವಾಗದೇ ಅದು ಒಂದು ಕಾರ್ಯಾಂಗದ ಒಂದು ಭಾಗವಾಗಿದೆ ಎಂದು ಹೇಳಿ ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಅದು ಈ ಸದನದ ಎಲ್ಲಾ ಸದಸ್ಯರಿಗೂ ಗೊತ್ತಿದೆ, ಮಾನ್ಯ ಅಧ್ಯಕ್ಷರಿಗೇ ಗೊತ್ತಿರುವ ಹಾಗೆ ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಏರ್ಪಡಿಸಿದ್ದೆವು ಅದರಲ್ಲಿ ವಿರೋಧ ಪಕ್ಷದ ನಾಯಕರು, ಶ್ರೀ ಪುಟ್ಟಸ್ವಾಮಿಯವರು ಮುಂತಾದ ಸದಸ್ಯರೆಲ್ಲರೂ ಇದ್ದರು, ಆವಾಗ ನಾನು ಅದರಲ್ಲಿ ಸದಸ್ಯನಾಗಿದ್ದೆ. ಹಿಂದೆ ಆವಾಗ ಪಾರ್ಲಿಮೆಂಟರಿ ಸಚಿವರಾಗಿದ್ದ ಶ್ರೀ ಎಸ್. ಎಂ. ಕೃಷ್ಣರವರು ಒಂದು ಮಸೂದೆಯನ್ನು ತರುತ್ತೇವೆಂದು ಹೇಳಿ ಲಾ ಡಿಪಾರ್ಟ್‌ಮೆಂಟಿನವರ ಸಲಹೆ ಪಡೆದು ಲೆಜಿಸ್ಲೇಚರ್‌ನ್ನು ಲಾ ಸೆಕ್ರೆಟರಿಯೇಟ್‌ನಿಂದ ಪ್ರತ್ಯೇಕ ಮಾಡಬೇಕಾಗಿದೆ ಅದನ್ನು ಮಾಡುತ್ತೇವೆಂದು ಹೇಳಿದರು. ಆದರೆ ಅದು ಆದ ೨೪

ಗಂಟೆಯೊಳಗೇ ಅವರು ತಮ್ಮ ನಿಲುವನ್ನು ಬದಲಾವಣೆ ಮಾಡಿಕೊಂಡರು. ಅದಕ್ಕೆ ಕಾರಣವೇನೊ ಗೊತ್ತಾಗಲಿಲ್ಲ. ಆ ಕಮಿಟಿಯವರು ವಿಧಾನ ಮಂಡಳದ ರೂಲ್ಸ್ ಮತ್ತು ಪ್ರೊಸೀಜರ್ ಏನಿದೆ ಅದನ್ನು ಬದಲಾವಣೆ ಮಾಡಬೇಕು ಹಾಗೆಂದು ಹೇಳಿ ಮಾಡಿದ್ದೆವು ಆದರೆ ಎಗ್ಜಿಕ್ಯುಟಿವ್ ಅದಕ್ಕೂ ಅವಕಾಶ ಕೊಡಲಿಲ್ಲ. ಇದರಿಂದ ನಮ್ಮ ಶಾಸನ ಸಭೆಗೆ ಈ ವಿಧಾನ ಮಂಡಲಕ್ಕೆ ಒಂದು ಕಳಂಕವೆಂದು ಭಾವಿಸಿದ್ದೇನೆ. ಅನೇಕ ರಾಜ್ಯಗಳಲ್ಲಿ ಯಾವ ರೀತಿ ವಿಧಾನ ಮಂಡಲಗಳು ಕೆಲಸ ಮಾಡುತ್ತಿವೆ ಎನ್ನುವ ಬಗ್ಗೆ ನಾನು ಸ್ವಲ್ಪ ಅಭ್ಯಾಸ ಮಾಡಿದ್ದೇನೆ. ಏತಕ್ಕೆಂದರೆ ಆಶ್ವಾಸನೆಗಳ ಸಮಿತಿಯ ಅಧ್ಯಕ್ಷನಾಗಿದ್ದಾಗ ನಾನು ಕೆಲವು ರಾಜ್ಯಗಳಿಗೆ ಭೇಟಿ ಕೊಟ್ಟಾಗ ಅದನ್ನೆಲ್ಲಾ ನೋಡಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ರೂಲ್ಸ್ ಆಫ್ ಪ್ರೊಸೀಜರ್ ಬಗ್ಗೆ ಹಿಂದೆ ಕೂಡ ಮಾನ್ಯ ಶ್ರೀ ಬಾಳಿಗಾರವರು ಇದ್ದ ಕಾಲದಲ್ಲಿಯೇ ಒಂದು ಕಮಿಟಿ ಮಾಡಿದ್ದರು, ಆದರೆ ಅದು ಆಗ ಆಗಲಿಲ್ಲ ಆದುದರಿಂದ ಈಗಲೂ ಕೂಡ ಮಾನ್ಯ ಸದಸ್ಯರು ಬದಲಾವಣೆ ಮಾಡಬೇಕೆಂದು ಅಪೇಕ್ಷಿಸುವುದಾದರೆ ಸರ್ಕಾರ ಅದಕ್ಕೆ ಅಡ್ಡಿ ಬರುವುದಿಲ್ಲ.

ಅಧ್ಯಕ್ಷರು.—ರೂಲ್ಸ್ ಆಫ್ ಪ್ರೊಸೀಜರ್ ಬಗ್ಗೆ ಅವರು ಮಾತನಾಡುತ್ತಿಲ್ಲ, ಇಂಡಿಪೆಂಡೆನ್ಸ್ ಆಫ್ ದಿ ಲೆಜಿಸ್ಲೇಚರ್ ಬಗ್ಗೆ ಹೇಳಿದರು.

ಶ್ರೀ ಕೆ ಎಚ್. ರಂಗನಾಥ್.—ಇಲ್ಲಾ ಮೇಡಂ ಅವರು ರೂಲ್ಸ್ ಆಫ್ ಪ್ರೊಸೀಜರ್‌ನ್ನು ಚೇಂಜ್ ಮಾಡಬೇಕು ಎನ್ನುವ ಬಗ್ಗೆಯು ಮಾತನಾಡಿದರು ಎಂದು ತಿಳಿದುಕೊಂಡಿದ್ದೆ.

ಶ್ರೀ ಕೆ. ಎಂ. ರುದ್ರಪ್ಪ.—ಎರಡರ ಬಗ್ಗೆಯೂ ಹೇಳಿದೆ......

ಶ್ರೀ ಕೆ. ಎಚ್. ರಂಗನಾಥ್.—ರೂಲ್ಸ್ ಆಫ್ ಪ್ರೊಸೀಜರ್ ಬಗ್ಗೆ ಆದರೆ ನಾನು ಒಪ್ಪಿಕೊಳ್ಳುತ್ತೇನೆ. ತಮಗೇ ಅಧಿಕಾರವಿದೆ ಸರ್ಕಾರ ಯಾವುದೇ ರೀತಿಯಲ್ಲಿ ಅದಕ್ಕೆ ಅಡ್ಡಿ ಬರುವುದಿಲ್ಲ. ತಮಗೇ ಗೊತ್ತಿರುವ ಹಾಗೆ ೧೯೭೨ರಲ್ಲಿ ಒಂದು ಕಮಿಟಿ ರಚನೆಯಾಗಿತ್ತು, ಆಗ ಕೂಡ ಅದನ್ನು ಬದಲಾವಣೆ ಮಾಡಲಿಲ್ಲ.

ವಿಧಾನ ಮಂಡಲದ ಕಾರ್ಯಾಲಯ ಸ್ವತಂತ್ರವಾಗಿರುವ ಬಗ್ಗೆ ಹಿಂದೆ ಇದ್ದಂತ ಮಾಜಿ ಸಚಿವರಾದ ಶ್ರೀಮಾನ್ ಕೃಷ್ಣನವರು, ಸ್ಪೀಕರ್‌ರವರೂ, ಮುಖ್ಯಮಂತ್ರಿಗಳು ಕೂತು ಒಂದು ನಿರ್ಣಯಕ್ಕೆ ಬಂದು: ಈ ಸದನದಲ್ಲೂ ಕೂಡ ಆಶ್ವಾಸನೆ ಕೊಟ್ಟಿದ್ದರು.

ಶ್ರೀ ಕೆ. ಎಚ್. ರಂಗನಾಥ್.—ರೂಲ್ಸ್ ಮತ್ತು ಪ್ರೊಸೀಜರ್ ವಿಚಾರದಲ್ಲಿ ಸರ್ಕಾರ ಅಡ್ಡಿ ಬರುವುದಿಲ್ಲ.

7-00 P. M.

ಶ್ರೀ ಕೆ.ಎಂ, ರುದ್ರಪ್ಪ.—ಕೇರಳರಾಜ್ಯದಲ್ಲಿಯೂ ಕೂಡ ಶಾಸಕಾಂಗ ಪ್ರತ್ಯೇಕವಾಗಿದೆ, ಅದೇರೀತಿ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಶಾಸಕಾಂಗ ಪ್ರತ್ಯೇಕವಾಗಿಯೇ ಇದೆ. ಮಾದರೀ ರಾಜ್ಯವಾದ ಕರ್ನಾಟಕದಲ್ಲಿ ಇದುವರೆವಿಗೂ ಆಗದೇ ಇರುವುದು ಒಂದು ರೀತಿಯ ಕಳಂಕವಾಗಿದೆ. ಹಿಂದೆ ದಿವಾನ ರಂಗಾಚಾರ್ಲು ಅವರ ಕಾಲದಲ್ಲಿ ಮೈಸೂರು ರೆಪ್ರೆಸೆಂಟೆಟೀವ್ ಅಸೆಂಬ್ಲಿಗಳು ಸ್ಥಾಪಿತವಾಯಿತು. ಅಂಥ ಒಂದು ಕೀರ್ತಿಯನ್ನು ಸಂಪಾದನೆ ಮಾಡಿದಂತ ಈ ರಾಜ್ಯದಲ್ಲಿ ಶಾಸಕಾಂಗ, ಕಾರ್ಯಾಂಗಕ್ಕೆ ಅಧೀನವಾಗಿರುವುದು ಬಹಳ ವಿಷಾದವಾಗುತ್ತದೆ. ತಾವು ಕೂಡ ಕಳೆದ ಐದೂವರೆ ವರ್ಷಗಳಿಂದ ಈ ಸಭೆಯನ್ನು ಬಹಳ ದಕ್ಷತೆಯಿಂದ ನಡೆಸಿಕೊಂಡು ಬಂದಿದ್ದೀರಿ; ತಮ್ಮ ಕಾಲದಲ್ಲಾದರೂ ಶಾಸಕಾಂಗವನ್ನು ಪ್ರತ್ಯೇಕವಾಗಿ ಮಾಡಲೇಬೇಕು. ಮುಖ್ಯಮಂತ್ರಿಗಳನ್ನು ಹಾಗೂ ಸಂಬಂಧಪಟ್ಟ ಸಚಿವರನ್ನು ಕರೆಸಿ: ಅವರ ಸಮ್ಮುಖದಲ್ಲಿ ಸಮಾಲೋಚನೆ ಮಾಡುತ್ತೀರೆಂದು ನಾನು ನಂಬಿದ್ದೇನೆ, ಇಂದು ಶಾಸಕಾಂಗ: ಕಾನೂನು ಇಲಾಖೆಯ ಒಂದು ಭಾಗವಾಗಿದೆ ಯಾವುದಾದರೂ ಒಂದು ಸಮಿತಿಯವರು ಬೇರೆ ರಾಜ್ಯಗಳಿಗೆ ಹೋಗಬೇಕಾಗಿದ್ದರೆ, ಮುಖ್ಯಮಂತ್ರಿಗಳಿಂದ ಪರ್ಮಿಷನ್ ಪಡೆಯಬೇಕಾಗಿತ್ತು, ಇತ್ತೀಚೆಗೆ ತಮಗೆ ಅಧಿಕಾರವನ್ನು ವಹಿಸಿಕೊಟ್ಟಿದ್ದಾರೆಂದು ಕೇಳಿದ್ದೇನೆ, ಬಹಳ ಸಂತೋಷ. ಈ ಅಧಿಕಾರ ತಮ್ಮಲ್ಲಿಯೇ ಇರಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಶಾಸಕರು ಮತ್ತು ಅಡ್ವೋಕೇಟುಗಳು ಬೇರೆಯವರ ಹಕ್ಕು ಭಾದ್ಯತೆಗಳಿಗೆ ಹೊಡೆದಾಡುತ್ತಾರೆಯೇ ಹೊರತು, ತಮ್ಮ ಹಕ್ಕು ಭಾದ್ಯತೆಗಳಿಗೆ ಹೊಡೆದಾಡುತ್ತಿಲ್ಲ ಶಾಸಕಾಂಗವನ್ನು ಸಂಪೂರ್ಣ ಪ್ರತ್ಯೇಕಿಸಲು ಕಾಂಗ್ರೆಸ್ ಸದಸ್ಯರೂ ಭಾಗಿಗಳಾಗಿದ್ದಾರೆಂದು ಹೇಳುತ್ತೇನೆ ಶಾಸಕಾಂಗವನ್ನು ಪ್ರತ್ಯೇಕವಾಗಿ ಮಾಡಿ ಈ ರಾಜ್ಯಕ್ಕೆ ಕೀರ್ತಿ ತರಬೇಕೆಂದು ಹೇಳುತ್ತೇನೆ.

ಇನ್ನು ಸಹಕಾರಿ ಇಲಾಖೆ ಬಗ್ಗೆ ಹೇಳುವುದಾದರೆ, ಮೊದಲು ಸೊಸೈಟಿಗಳು ೮೨೭೬ ಇದ್ದವು ಪುನರ್ರಚನೆ ಮಾಡಿದಮೇಲೆ ೪೦೭೬ ಸೊಸೈಟಿಗಳಿಗೆ ಇಳಿಸಿದ್ದಾರೆ. ಮಲೆನಾಡು ಪ್ರದೇಶದಲ್ಲಿ ಒಂದು ಸಮಸ್ಯೆ ಏನು ಎಂದರೆ, ಜನಸಂಖ್ಯೆ ಅತಿ ವಿರಳ, ಪುನರ್ರಚನೆಯಾದ ಸೊಸೈಟಿಗಳ ಮೇರೆಗೆ ವ್ಯಾಪ್ತಿ ೧೦-೧೫ ಮೈಲಿಗಳ ದೂರದಿಂದ ಬರಬೇಕಾಗಿದೆ. ಜನಸಂಖ್ಯೆಯ ವಿಚಾರದಲ್ಲಿ ರಿಯಾಯಿತಿ ಕೊಡುವುದಲ್ಲದೆ ಟರ್ನ ಓವರ್ ಎರಡು ಲಕ್ಷದ ಬಗ್ಗೆಯೂ ಕೂಡ ವಿನಾಯಿತಿ ಕೊಡಬೇಕು. ದೊಡ್ಡ ದೊಡ್ಡ ಸೊಸೈಟಿಗಳನ್ನು ಬೈಫರ್‌ಕೇಟ್ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿರುವ ಆಲೂರನ್ನು ಸಕಲೇಶಪುರದ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಸೇರಿಸಿದ್ದಾರೆ. ಇದರಿಂದ ಬಹಳ ಸಮಸ್ಯೆಗಳು ಉಂಟಾಗಿವೆ.

ಇನ್ನು ಮಿಸ್ ಅಪ್ರೋಪ್ರಿಯೇಷನ್ ವಿಚಾರದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಸಕಲೇಶಪುರ ತಾಲ್ಲೂಕಿನಲ್ಲಿರುವ ಬೆಳ್ಳಿಗೋಡು ಸೊಸೈಟಿಯಲ್ಲಿ ೧೫ ವರ್ಷಗಳ ಹಿಂದೆ ಮೂರು ಲಕ್ಷ ರೂಪಾಯಿ ಅವ್ಯವಹಾರ ನಡೆದಿದೆ, ಇದರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿನ ಕಾರ್ಯದರ್ಶಿಯವರು ಮತ್ತು ಅಧ್ಯಕ್ಷರು ಬಹಳ ಬುದ್ಧಿವಂತಿಕೆಯಿಂದ ಯಾರಯಾರದೋ ಹೆಸರಿನಲ್ಲಿ ಸಾಲ ಹಾಕಿಸಿ, ಬಹಳ ಅನ್ಯಾಯ ಮಾಡಿದ್ದಾರೆ. ಅವರ ಮೇಲೆ ಡಿಕ್ರಿ ಬಂದಿದ್ದರೂ ವಜಾ ಮಾಡಿಸಿಕೊಂಡಿದ್ದಾರೆ. ಸಕಲೇಶಪುರ ತಾಲ್ಲೂಕಿನಲ್ಲಿಯೇ ಸುಮಾರು ೧೫-೨೦ ಲಕ್ಷರೂಪಾಯಿಗಳು ದುರುಪಯೋಗವಾಗಿದೆ ಇದರ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಅಲ್ಲದೆ ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇನ್ನು ಡೈರೆಕ್ಟರ್ ಮತ್ತು ಪ್ರೆಸಿಡೆಂಟರುಗಳನ್ನು ಅಪಾಯಿಂಟ್ ಮಾಡುತ್ತೀರಿ, ಈ ರೀತಿ ಮಾಡುವಾಗ ಪೂರ್ಣ ಅಧಿಕಾರ ತಮ್ಮಲ್ಲಿಯೇ ಇರಬೇಕು. ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳು ಪ್ರವೇಶ ಮಾಡುವ ವಿಚಾರ ನನ್ನ ಗಮನಕ್ಕೆ ಬಂದಿದೆ, ಅದಕ್ಕೆ ಖಂಡಿತವಾಗಿಯೂ ಅವಕಾಶಕೊಡಬಾರದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ತಾವು ಒಪ್ಪಿರುವುದನ್ನೇ ಮಾಡಿರುವುದು, ಒಪ್ಪದೇ ಇರುವುದನ್ನು ನಾನು ಮಾಡಿಲ್ಲ.

ಶ್ರೀ ಕೆ. ಎಂ ರುದ್ರಪ್ಪ.—ಪಾನ್ ಬ್ರೋಕರ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಕೆಲವರು ಲೈಸೆನ್ಸ್ ತೆಗೆದುಕೊಂಡು ಗಿರವಿ ಇಟ್ಟುಕೊಳ್ಳುತ್ತಿದ್ದರು, ಸಕಲೇಶಪುರದಲ್ಲಿ ಒಬ್ಬರು ಲೈಸೆನ್ಸ್ ತೆಗೆದು ಕೊಂಡೇ ಗಿರವಿ ವ್ಯಾಪಾರ ಮಾಡುತ್ತಿದ್ದರು ಅವರಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ಸಾಮಾನುಗಳನ್ನು ಗಿರವಿಗೆ ಇಟ್ಟಿದ್ದರು. ಸರ್ಕಾರದ ಕಾನೂನಿನಂತೆ ಸಾಮಾನುಗಳನ್ನು ವಾಪಸ್ಸು ಕೊಡ ಬೇಕಾಗಿ ಬಂದಾಗ ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದರು. ನಂತರ ಜವೇ ವ್ಯಾಪಾರ ನಡೆಸುತ್ತಿದ್ದರು, ಈಚೆಗೆ ಅವರು ನನ್ನ ಮನೆಯಲ್ಲಿ ೩ ಸಾವಿರ ರೂಪಾಯಿ ಕ್ಯಾಷ್ ಇಟ್ಟಿದ್ದೆ ಗಿರವಿ ಸಾಮಾನುಗಳನ್ನು ಮತ್ತು ಕ್ಯಾಷನ್ನು ಕಳ್ಳರು ಕದ್ದುಕೊಂಡು ಹೋಗಿದ್ದಾರೆಂದು ಪೋಲೀಸ್‌ನವರಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಇದುವರೆವಿಗೂ ಪೋಲೀಸಿನವರಿಂದ ಪತ್ತೆ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಗಿರವಿ ಇಟ್ಟಿರುವವರು ನನ್ನ ಹತ್ತಿರ ಬಂದು ಹೇಳುತ್ತಿದ್ದಾರೆ. ಅವರ ಹೆಸರು ಸುಬ್ಬೇಗೌಡರು, ದೊಡ್ಡ ಕಾಫಿ ಪ್ಲಾಂಟರ್ ೧೦೦ ರೂಪಾಯಿಗೆ ಒಂದು ತಿಂಗಳಿಗೆ ೧೦ ರೂಪಾಯಿ ಬಡ್ಡಿ ತೆಗೆದುಕೊಳ್ಳುತ್ತಾರೆಂದು ದೂರಿದೆ. ಗಿರವಿ ಇಟ್ಟಿರುವವರ ಗತಿ ಏನು ? ತಾವು ಇದರ ಬಗ್ಗೆ ವಿಚಾರಣೆ ಮಾಡಿ, ಗಿರವಿ ಇಟ್ಟಿರುವವರ ಸಾಮಾನುಗಳನ್ನು ವಾಪಸ್ಸು ಕೊಡಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ರೆಗ್ಯುಲೇಟೆಡ್ ಮಾರುಕಟ್ಟೆಗಳ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಕ್ಷೇತ್ರವ್ಯಾಪ್ತಿ ಮಾಡುವ ವಿಚಾರದಲ್ಲಿ ಅನೇಕ ಲೋಪದೋಷಗಳು ಇವೆ. ಆಲೂರನ್ನು ಸಕಲೇಶಪುರ ತಾಲ್ಲೂಕಿಗೆ ಸೇರಿಸಿದ್ದಾರೆ. ಆಲೂರಿನಲ್ಲಿ ಭತ್ತವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಆಲೂರನ್ನು ಹಾಸನಕ್ಕೆ ಸೇರಿಸುವ ಬಗ್ಗೆ ಮನವಿಗಳನ್ನು ಕೊಟ್ಟಿದ್ದೇವೆ ಸಕಲೇಶಪುರದಲ್ಲಿ ಏಲಕ್ಕಿ ಮಾರುಕಟ್ಟೆ ಇದೆ, ಅಲ್ಲಿ ಭತ್ತದ ಮಾರ್ಕೆಟ್ ಇಲ್ಲ. ಸಕಲೇಶಪುರದಲ್ಲಿ ಭತ್ತಕ್ಕೆ ಒಂದು ಕ್ವಿಂಟಾಲಿಗೆ ೪ ರೂಪಾಯಿಯನ್ನು ವಸೂಲು ಮಾಡುತ್ತಾರೆ, ಆ ರಶೀತಿ ಇಟ್ಟುಕೊಂಡು ಹಾಸನಕ್ಕೆ ಹೋಗಬೇಕು. ಅನಂತರ ಹಾಸನದಲ್ಲಿಯೂ ತೆರಿಗೆವಸೂಲ್ ಮಾಡು-ತ್ತಾರೆ ಆದ್ದರಿಂದ ಆಲೂರನ್ನು ಹಾಸನಕ್ಕೆ ಸೇರಿಸುವ ವಿಚಾರವನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷೀಣಿಯವರೆ, ಈಗ ನಮ್ಮ ಸಹಕಾರ ಹಾಗೂ ಸಂಸದೀಯ ಸಚಿವರು ಮತ್ತು ಮಾರುಕಟ್ಟೆ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು

ಸಂಪೂರ್ಣ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ನಮ್ಮ ಸಹಕಾರ ಸಚಿವರನ್ನು ನಾವೆಲ್ಲರೂ ಕೂಡ ಅಭಿನಂದಿಸಬೇಕಾಗಿದೆ ಎಂದು ನನ್ನ ವಾದ. ಏಕೆಂದರೆ ಇವರು ಸಹಕಾರ ಇಲಾಖೆಯನ್ನು ವಹಿಸಿಕೊಳ್ಳುವವರೆಗೂ ಹಗ್ಗವಿಲ್ಲದ ದನಗಳು ಬೇಲಿಯನ್ನು ದಾಟಿ ಹೊಲ ಗದ್ದೆಗಳನ್ನು ನುಗ್ಗಿ ಲೂಟಿ ಮಾಡುವಂತೆ ಈ ಸಹಕಾರ ಸಂಘಗಳಲ್ಲಿ ಮಾಡುತ್ತಿದ್ದುದನ್ನು ತಪ್ಪಿಸಿದ್ದಾರೆ. ಅದರ ಕೀರ್ತಿ ಮಾನ್ಯ ಸಚಿವರಾದ ರಂಗನಾಥ್ ಅವರಿಗೆ ಸಲ್ಲಬೇಕಾಗಿದೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ನಮ್ಮ ಮನೆಯ ಹಿರಿಯ ಸದಸ್ಯರು ಹಾಗೂ ಇತರ ಸದಸ್ಯರು ಈ ಸಹಕಾರ ಇಲಾಖೆಯ ಮೇಲೆ ಸಾಕಷ್ಟು ವಿಚಾರಗಳನ್ನು ಹೇಳಿದರು. ಇವೊತ್ತಿನ ದಿವಸ ೧೯೭೩–೭೪ನೇ ಇಸವಿಯ ವರೆಗೂ ನಡೆದಿರತಕ್ಕ ಅವ್ಯವಹಾರಗಳನ್ನು ಪಟ್ಟಿ ಮಾಡಿ, ೧೯೭೩ನೇ ಇಸವಿಯಿಂದ ಈಚೆಗೆ ನಡೆದಿರತಕ್ಕದ್ದನ್ನು ಪಟ್ಟಿ ಮಾಡಿ ಹೋಲಿಕೆ ಮಾಡಿದರೆ ಯಾರದು ಹೆಚ್ಚಿಗೆ ತಪ್ಪಿದೆ, ಯಾರು ಲಂಚಕೋರರಾಗಿದ್ದರು ಎನ್ನುವುದು ಬೆಳಕಿಗೆ ಬಂದರೆ ಗೊತ್ತಾಗುತ್ತದೆ. ನಾವು ಇದರ ಬಗ್ಗೆ ಏನಾದರೂ ಸರಿಯಾಗಿ ನಡೆದಿದೆ ಎಂದು ಹೇಳುವುದಕ್ಕೆ ಹೋದರೆ ವಿರೋಧಪಕ್ಷದ ಸದಸ್ಯರಿಗೆ ಕೋಪ ಬರುತ್ತದೆ. ಹಿಂದೆ ಇದರಲ್ಲಿ ಏನಾಗಿತ್ತೆಂದರೆ ಅಡೆ ತಡೆ ಇಲ್ಲದೇ ಮೇಯತಕ್ಕ ಕೆಲವು ಜನರಿಗೆ ಈ ಸಹಕಾರಿ ರಂಗವೇ ಉದ್ಯೋಗವಾಗಿತ್ತು. ಅವರನ್ನು ಅವರ ಹಿಡಿತದಿಂದ, ಅವರ ಬಿಗಿಮುಷ್ಟಿಯಿಂದ ಈ ಚಳುವಳಿ ಮಾರ್ಗ ತಪ್ಪಿಸಿ ಬಡವರ ಅಭಿವೃದ್ಧಿಗೋಸ್ಕರ ದೀನದಲಿತರ, ಸಾಮಾನ್ಯ ಜನರ ಉಪಯೋಗಕ್ಕೋಸ್ಕರ ಈ ಸಹಕಾರ ಸಂಘ ಇರಬೇಕೆಂಬ ಉದ್ದೇಶದಿಂದ ಮಾನ್ಯ ಸಚಿವರು ತಿದ್ದುಪಡಿಗಳನ್ನು ತಂದು ಹಾಗೆ ಪುನರ್‌ವಿಂಗಡಣೆ ಕೂಡ ಮಾಡಿದರು ಅದಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕಾಗಿದೆ ಎಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಟಿ.ಎ. ಮತ್ತು ಡಿ.ಎ. ಗಳನ್ನು ಸಹಕಾರ ರಂಗದಲ್ಲಿ ಯಾವರೀತಿ ಡ್ರಾ ಮಾಡುತ್ತಾರೆ ಅದನ್ನು ಮಾನ್ಯಸದಸ್ಯರು ತಿಳಿಸಬೇಕು.

ಶ್ರೀ ಡಿ. ಹಲಗೇಗೌಡ.—ಇವೊತ್ತು ಟಿ.ಎ. ಮತ್ತು ಡಿ.ಎ. ಸಹಕಾರ ರಂಗದಲ್ಲಿ ಹೆಚ್ಚು ಸಿಕ್ಕುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಸಹಕಾರ ರಂಗದಲ್ಲಿ ಟಿ.ಎ. ಮತ್ತು ಡಿ.ಎ. ಗಳನ್ನು ಸುಮಾರು ಎಂಟು, ಹತ್ತು ಸಾವಿರ ರೂಪಾಯಿಗಳವರೆಗೆ ಡ್ರಾ ಮಾಡಿರತಕ್ಕದ್ದು ಇದೆ, ಆ ಬಗ್ಗೆ ಮಾನ್ಯ ಸಚಿವರುಗಳಿಂದಲೇ ತಿಳಿದುಕೊಳ್ಳಿ ಗೊತ್ತಾಗುತ್ತದೆ.

ಶ್ರೀ ಡಿ. ಹಲಗೇಗೌಡ.—ಮಾನ್ಯ ಸದಸ್ಯರು ಕೆಲವರು ಈ ಸಹಕಾರ ಸಂಘಗಳಲ್ಲಿ ಅವ್ಯವಹಾರ ಜಾಸ್ತಿ ನಡೆಯುತ್ತದೆ ಎಂದು ಆಕ್ರೋಶವಾಗಿ ಮಾತನಾಡಿದರು.

ಶ್ರೀ ಸಿ. ಬೈರೇಗೌಡ.—ಎಲ್ಲೆಲ್ಲಿ ಅವ್ಯವಹಾರ ನಡೆದಿದೆ ಅದನ್ನು ಹೇಳಿದ್ದೇವೆ.

ಶ್ರೀ ಡಿ. ಹಲಗೇಗೌಡ.—ಇವೊತ್ತು ಸಾಮಾನ್ಯ ಜನರಿಗೆ, ದೀನದಲಿತರಿಗೆ, ಸಹಕಾರ ಸಂಘಗಳು ಇಲ್ಲದೇ ಇದ್ದಿದ್ದರೆ ಅವರು ಬಹಳ ತೊಂದರೆ ಅನುಭವಿಸಬೇಕಾಗಿತ್ತು. ಅವರು ಮಾಡತಕ್ಕ ವ್ಯವಸಾಯಕ್ಕಾಗಲಿ, ಅಥವಾ ಯಾವುದೇ ಒಂದು ಕಾರ್ಯಕ್ಕಾಗಲಿ, ಗ್ರಾಮಾಂತರ ಪ್ರದೇಶದಲ್ಲಿ ಎಲ್ಲಿಯೂ ಕೂಡ ಹಣ ದೊರೆಯುವುದಿಲ್ಲ. ಅವರ ಕಷ್ಟಕಾರ್ಪಣ್ಯಗಳನ್ನು ಪೂರೈಸಬೇಕಾದರೆ ಈ ಸಹಕಾರ ಸಂಘಗಳೇ ಅಗತ್ಯ. ಈ ಒಂದು ಸಹಕಾರಸಂಘ ಪ್ರತಿಯೊಬ್ಬ ಮನುಷ್ಯನ ಜೀವನವನ್ನು ತಬ್ಬಿಕೊಂಡಿರತಕ್ಕದ್ದು. ಆದುದರಿಂದ ಇದಕ್ಕೆ ಎಲ್ಲದಕ್ಕಿಂಥ ಹೆಚ್ಚಿನ ಮಹತ್ವ ದೊರಕಬೇಕಾಗಿದೆ. ಇವೊತ್ತು ಸಹಕಾರ ಸಂಘಗಳಲ್ಲಿ ವ್ಯವಹಾರ ನಡೆಯುವಾಗ ಕೆಲವು ತಪ್ಪುಗಳು ಆಗಬಹುದು, ಅದಕ್ಕೆ ಉದಾಹರಣೆ ಹೇಳಬೇಕು ಎಂದರೆ, ನಡೆಯುವವರು ಎಡವದೇ ಕುಳಿತಿರುವವರು ಎಡುವವರೇ, ಹಾಗೆ ವ್ಯವಹಾರ ಮಾಡತಕ್ಕ ಸಂದರ್ಭದಲ್ಲಿ ಲಾಭ ಬರಬಹುದು ಅಥವಾ ನಷ್ಟವಾಗಬಹುದು, ಅದನ್ನು ಸಹಿಸಿಕೊಂಡು ಉತ್ತಮ ಸ್ಥಿತಿಗೆ ತರತಕ್ಕಂಥ ಸಲಹೆಗಳನ್ನು ಕೊಡಬೇಕೇ ಹೊರತು ಅದನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು ಎನ್ನುವ ಮನೋಭಾವನೆ ಯಾರಿಗೂ ಇರಬಾರದು ಎಂದು ಹೇಳುತ್ತೇನೆ. ಇನ್ನು ಸಹಕಾರ ಸಂಘಗಳಲ್ಲಿ ನಾಮಕರಣ ಮಾಡತಕ್ಕ ವಿಚಾರದಲ್ಲಿ ಅನೇಕ ದೂರುಗಳು ಬರುತ್ತಿವೆ. ಇದರ ಬಗ್ಗೆ ಹೇಳಬೇಕು ಎಂದರೆ ನಮ್ಮ ಕ್ಷೇತ್ರದಲ್ಲಿ ನಾಮಕರಣ ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಸಚಿವರು ನಮ್ಮನ್ನು ಕೇಳಿ ಹೇಳಿ, ಮಾಡಲಿಲ್ಲ. ಸರ್ಕಾರದ ಅಧಿಕಾರಿಗಳು ಇದ್ದರು ಅವರು ಕೊಟ್ಟಂಥ ಲಿಸ್ಟಿನ ಪ್ರಕಾರ ಚರ್ಚೆ ನಡೆಸಿ, ಅಲ್ಲಿಯೇ ತೀರ್ಮಾನ ಮಾಡಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಪುನರ್ ವಿಂಗಡಣೆಯಾದ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ವಿರೋಧ ಪಕ್ಷದ

ಸದಸ್ಯರು ಇದ್ದಾರೆ. ಅವರನ್ನು ಅಧ್ಯಕ್ಷರನ್ನಾಗಿಯೂ ಕೂಡ ಮಾಡಿದ್ದಾರೆ ಇದನ್ನು ನಿರ್ಭಯವಾಗಿ ಹೇಳುತ್ತಿದ್ದೇನೆ. ಈಗ ನಾಮಕರಣದ ವಿಷಯದಲ್ಲಿ ಅವರಿಗೆ ಮನಸ್ಸಿಗೆ ಬಂದವರನ್ನು ಮಾಡಿಕೊಂಡಿದ್ದಾರೆ ಎಂದು ಹೇಳತಕ್ಕ ಮಾತನ್ನು ನಾನು ಒಪ್ಪುವುದಿಲ್ಲ.

ಶ್ರೀ ಸಿ. ಬೈರೇಗೌಡ.—ನಮ್ಮ ತಾಲ್ಲೋಕಿನಲ್ಲಿ ಯಾರು ಯಾರನ್ನು ಮಾಡಿದ್ದಾರೆ ಎನ್ನುವುದು ಹೇಳಲಿ.

ಶ್ರೀ ಡಿ. ಹಲಗೇಗೌಡ.—ನನ್ನ ಕ್ಷೇತ್ರದಲ್ಲಿ ಆಗಿರತಕ್ಕದನ್ನೇ ಬೇರೆ ಕ್ಷೇತ್ರದಲ್ಲೂ ಮಾಡಿರುತ್ತಾರೆ ಎನ್ನುವ ಭಾವನೆಯಿಂದ ಹೇಳುತ್ತಿದ್ದೇನೆ.

ಇವೊತ್ತು ರಾಷ್ಟ್ರದಲ್ಲಿ ಕರ್ನಾಟಕಕ್ಕೂ ಕೂಡ ಸಹಕಾರ ರಂಗದಬಗ್ಗೆ ಒಳ್ಳೆಯ ಹೆಸರು ಇದೆ. ಮಹಾರಾಷ್ಟ್ರ ಪಂಜಾಬ್, ಗುಜರಾತ್ ಇಂತಹ ರಾಜ್ಯಕ್ಕೆ ಒಳ್ಳೆಯ ಹೆಸರು ಇದ್ದರೂ ಕೂಡ ನಾಲ್ಕನೇ ಸ್ಥಾನ ಕರ್ನಾಟಕಕ್ಕೆ ನಿಲ್ಲುತ್ತದೆ ಹೀಗೆ ನಾಲ್ಕನೇ ಸ್ಥಾನದಲ್ಲೇ ನಿಲ್ಲಿಸದೇ ಇನ್ನೂ ಹೆಚ್ಚು ಬೆಳೆಸಬೇಕು ಎಂದು ಹೇಳುತ್ತೇನೆ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಗೋಸ್ಕರ ಕೊಟ್ಟಿರತಕ್ಕ ಸಾಲ ೮೫ ಕೋಟಿ ರೂಪಾಯಿ, ಮತ್ತೆ ಅಲ್ಪಾವಧಿ ಮಧ್ಯಮಾವಧಿ ಎಲ್ಲಾ ಸೇರಿ ಒಟ್ಟು ೧೦೦ ಕೋಟಿ ರೂಪಾಯಿಗಳವರೆಗೆ ಸಾಲಕೊಟ್ಟಿದ್ದಾರೆ. ಈ ಒಂದು ಯೋಜನೆ ೨೦೦ಕೋಟಿ ರೂಪಾಯಿಗಳವರೆಗೆ ಮುಟ್ಟಬೇಕು ಎನ್ನುವ ಮಹತ್ವಾಕಾಂಕ್ಷೆ ನಮ್ಮ ಸಚಿವರಿಗೆ ಇದೆ. ಆದುದರಿಂದ ಈ ಒಂದು ಸಹಕಾರರಂಗಕ್ಕೆ ಬೆಂಬಲಕೊಡಬೇಕೇ ಹೊರತು ಅದನ್ನು ವಿರೋಧಿಸಿಕೊಂಡು ಹೋಗಬಾರದು ಎಂದು ಹೇಳುತ್ತೇನೆ. ಇನ್ನು ಇಲ್ಲಿಯವರೆಗೂ ಕೂಡ ನಮ್ಮ ರೈತಾಪಿ ಜನರು ಅವರು ಸಂಪಾದನೆ ಮಾಡತಕ್ಕಂಥ ಹಣವನ್ನು ವಾಣಿಜ್ಯ ಬ್ಯಾಂಕುಗಳಲ್ಲಿ ಮಾತ್ರ ಠೇವಣಿ ಇಡುತ್ತಿದ್ದಾರೆ. ಆದುದರಿಂದ ಇನ್ನು ಮುಂದೆ ಅವರು ಸಂಪಾದನೆ ಮಾಡತಕ್ಕಂಥ ಹಣವನ್ನು, ನಾವು ಕೊಡತಕ್ಕಂಥ ಹಣವನ್ನು ರೈತಾಪಿಜನರು ವಾಣಿಜ್ಯ ಬ್ಯಾಂಕುಗಳಲ್ಲಿ ಠೇವಣಿ ಇಡತಕ್ಕಂಥಾದ್ದನ್ನು ತಪ್ಪಿಸಿ ಸಹಕಾರಿ ಬ್ಯಾಂಕುಗಳಲ್ಲೇ ಇಡುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತೆ ಸಂಬಳ ಸಾರಿಗೆಗಳನ್ನು ಪಾವತಿ ಮಾಡುವಾಗಲೂ ಕೂಡ ಸಹಕಾರಿ ಬ್ಯಾಂಕುಗಳ ಮುಖಾಂತರವೇ ನಡೆಸಬೇಕು, ಇದರ ಬಗ್ಗೆ ಮಾನ್ಯ ಸಚಿವರು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಪುನರ್ವಿಂಗಡಣೆಯಾದ ಮೇಲೆ ಸಹಕಾರ ಸಂಘಗಳು ಸಬಲವಾಗಿರ ಬೇಕೆಂದು ಮಾಡಿದ್ದೀರಿ. ಈ ರೀತಿ ಸಹಕಾರ ಸಂಘಗಳನ್ನೆಲ್ಲಾ ಒಂದು ಗೂಡಿಸಿ ಅವು ಕಾರ್ಯರೂಪಕ್ಕೆ ಬರುವಂತೆ ಮಾಡಬೇಕಾದರೆ ಅದಕ್ಕೆ ಸ್ವಲ್ಪ ಹಣದ ಕೊರತೆ ಇರುತ್ತೆ. ಇದೆಲ್ಲಾ ಒಂದು ವ್ಯವಸ್ಥಿತ ರೂಪಕ್ಕೆ ಬರುವವರೆಗೆ ಒಬ್ಬ ಪೂರ್ಣ ಕಾಲಿಕ ಸೆಕ್ರೆಟರಿಯನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಆತನಿಗೆ ಪ್ರತಿ ತಿಂಗಳೂ ಕನಿಷ್ಟ ೩೦೦—೪೦೦ ರೂಪಾಯಿಗಳನ್ನಾದರೂ ಸಂಬಳ ಕೊಡ ಬೇಕಾಗುತ್ತದೆ. ಈ ಖರ್ಚನ್ನು ಸರ್ಕಾರದವರೇ ಕೆಲವಾರು ದಿವಸದವರೆಗೆ ವಹಿಸಿಕೊಳ್ಳಬೇಕು.

ಇನ್ನು ನೇಮಕಾತಿ ಸಮಿತಿಗಳೆಂದು ಮಾಡಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಇವತ್ತು ಯಾರಿಗಾದರೂ ಒಬ್ಬರಿಗೆ ಅನುಕೂಲವಾಗಬೇಕಾದರೆ ಇನ್ನೊಬ್ಬರಿಗೆ ಅನಾನುಕೂಲವಾಗಲೇಬೇಕು ಒಬ್ಬರಿಗೆ ಸಂತೋಷವಾಗಬೇಕಾದರೆ ಇನ್ನೊಬ್ಬರಿಗೆ ದು:ಖವಾಗಲೇ ಬೇಕು. ಸಹಕಾರ ಸಂಘಗಳಲ್ಲಿ ಅನುಸೂಚಿತ ಜಾತಿಯವರಿಗೆ, ದೀನದಲಿತರಿಗೆ, ಸದಸ್ಯರಾಗಲು ಅವಕಾಶಗಳಿರಲಿಲ್ಲ. ಕೆಲವು ವರ್ಗದ ಜನರು ಈ ಸಹಕಾರ ಸಂಘಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ವರ್ತಿಸುತ್ತಿದ್ದರು. ಇದು ಕೆಲವೇ ಜನಗಳ ಸ್ವತ್ತಾಗಿದ್ದುದರಿಂದ ಇದರಲ್ಲಿ ಹರಿಜನ ಗಿರಿಜನರಿಗೂ ಅವಕಾಶ ಕೊಟ್ಟು ಅವರನ್ನೂ ಸದಸ್ಯರನ್ನಾಗಿ ತೆಗೆದುಕೊಳ್ಳಬೇಕೆಂದು ಮಾಡಿದೆ. ಈ ಹರಿಜನಗಿರಿಜನರು ಇವತ್ತಿನವರೆಗೂ ಸಹಕಾರ ಸಂಘಗಳ ಬಾಗಿಲನ್ನೇ ನೋಡಿಲ್ಲ. ಇಲ್ಲಿ ಹರಿಜನ ಗಿರಿಜನರಿಗೆ ನೇಮಕಾತಿಯಲ್ಲಿ ಇಷ್ಟು ಭಾಗ ಇಡಬೇಕೆಂದು ಕಾನೂನು ಇದ್ದರೂ ಅದನ್ನೂ ಅನುಸರಿಸಿರಲಿಲ್ಲ. ಸಂಸ್ಥೆಯ ಕಾರ್ಯಕಾರಿ ಮಂಡಲಿಯವರಿಗೆ ಏನು ಅಧಿಕಾರ ಇತ್ತೋ ಅದನ್ನು ಅವರಿಗೇ ವಹಿಸಬೇಕು. ಇದನ್ನು ರಿಜಿಸ್ಟ್ರಾರ್ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ರವರು ಚೆನ್ನಾಗಿ ನೋಡಿಕೊಳ್ಳುವಂತೆ ಮಾಡಬೇಕು. ಸಮಿತಿಯ ಎಲ್ಲ ಕೆಲಸವನ್ನೂ ಅಧ್ಯಕ್ಷರೇ ಮಾಡಬೇಕು ಎನ್ನುವುದು ಒಪ್ಪತಕ್ಕದ್ದಲ್ಲ. ಇಲ್ಲಿಗೆ ಒಬ್ಬ ಅಧಿಕಾರಿಯನ್ನು ಇಡಬೇಕು. ಇದನ್ನೆಲ್ಲಾ ಮಾನ್ಯ ಸಚಿವರು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ, ಏನೆಂದರೆ ಮೊದಲು ಸಹಕಾರ ಸಂಘಗಳಲ್ಲಿ ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಇನ್ನೊಬ್ಬರ ಮೇಲೆ ಯಾರು ದೂರುಗಳನ್ನು ಹೇಳಿದರು ಅವರ ಹಿಂದಿನ ಚರಿತ್ರೆಗಳನ್ನು ತೆಗೆದು ನೋಡಿದರೆ ಬಹುಶಃ ನನಗನಿಸುತ್ತದೆ ಒಬ್ಬ ಕುಲಟೆಯಾದ ಸ್ತ್ರೀಯು ಪತಿವ್ರತೆಗೆ ನೀತಿ ಪಾಠ ಹೇಳುವುದಕ್ಕೆ ಹೋದಹಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಒಂದು ಅಪ್ರಾಸಂಗಿಕವಾದ ವಿಷಯವನ್ನು ಹೇಳಬಯಸುತ್ತೇನೆ. ಮೈಸೂರು ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಕಲ್ಯಾಣ ನಿಧಿ ದುರುಪಯೋಗವಾಗಿದೆ ಎಂದು ಪೇಪರ್‌ಗಳಲ್ಲಿ ಬಂದಿರುವುದಾಗಿ ಹೇಳಿದರು. ಇದು ದುರುಪಯೋಗವಾಗಿದೆಯೋ ಇಲ್ಲವೇ ಎನ್ನುವ ಬಗ್ಗೆ ತಾವು ಒಂದು ವರದಿಯನ್ನು ಅಲ್ಲಿಂದ ತರಿಸಿ ಏಕೆಂದರೆ ಇವತ್ತು ಎಷ್ಟೋ ಸಹಕಾರ ಸಂಘಗಳು ಇಸ್ಪೀಟ್ ಕ್ಲಬ್‌ಗಳಿಗೆ ದುಡ್ಡನ್ನು ಕೊಟ್ಟಿದೆ. ಆಗ ಯಾರು ಮಾತನಾಡದೆ ಈವತ್ತು ಮಾತನಾಡುವುದಕ್ಕೆ ಹೊರಟಿದ್ದಾರೆ. ಮಾನ್ಯ ಕೆ. ವಿ. ಶಂಕರೇಗೌಡರು ಮಂಡ್ಯದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸ್ವಾಮಿ ನಾನು ಹೇಳುತ್ತೇನೆ. ಅವರು ನಿರ್ವಹಿಸತಕ್ಕ ಸಂಘ ಸಂಸ್ಥೆಗಳ ರಿಪೋರ್ಟ್‌ನ್ನು ತಾವು ತರಿಸಿಕೊಂಡು ನೋಡಿದರೆ ತಮಗೆ ಗೊತ್ತಾಗುತ್ತದೆಂದು ಹೇಳಿ ಈ ಬೇಡಿಕೆಗೆ ನನ್ನ ಬೆಂಬಲವನ್ನು ಸೂಚಿಸಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(Mr. K. M. Rudrappa in the Chair)

† ಶ್ರೀ ಬೆಟ್ಟಸ್ವಾಮಿ ಗೌಡ (ಕುದೂರು).—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಹಕಾರಿ ಸಚಿವರು ಹಾಗೂ ಮಾರ್ಕೆಟಿಂಗ್ ಸಚಿವರು ಮಂಡಿಸಿರುವ ಮಸೂದೆಯನ್ನು ವಿರೋಧ ಮಾಡುತ್ತಾ ನಾನು ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆಯ ದಿವಸ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸಚಿವರು ಉತ್ತರ ಕೊಡುತ್ತಿರುವಾಗ ಕಳೆದ ಸಾರಿ ರಾಜ್ಯದಾದ್ಯಂತ ಮಳೆ ಬೆಳೆಗಳಾಗದೆ ಹೋದುದರಿಂದ ಬಹುತೇಕ ಅಂದರೆ ನೂರಕ್ಕೆ ೯೫ ಭಾಗ ಡಿಫಾಲ್ಟರ್ಸ್ ಆಗುತ್ತಿದ್ದಾರೆ, ಸಾಲ ವಸೂಲಾಗುತ್ತಿಲ್ಲ ಎಂದು ಹೇಳಿದೆ. ಆಗ ಸಚಿವರು ಭೂ ಅಭಿವೃದ್ಧಿ ಬ್ಯಾಂಕ್ ಡಿಫಾಲ್ಟರ್ಸ್ ಆಗದ ರೀತಿಯಲ್ಲಿ ೧ಕೋಟಿ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ ಎಂದು ಹೇಳಿದರು. ಈ ಹಣವನ್ನು ಭೂ ನ್ಯಾಯ ಮಂಡಲಿಯ ವ್ಯವಸ್ಥೆಗೆ ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡೆ. ಈ ಭೂ ಅಭಿವೃದ್ಧಿ ಬ್ಯಾಂಕ್‌ಗಳು ಡಿಫಾಲ್ಟರ್ಸ್ ಆಗುತ್ತಿರುವುದಕ್ಕೆ ವರ್ಲ್ಡ್ ಬ್ಯಾಂಕ್‌ನವರೂ, ನಮ್ಮ ಸರ್ಕಾರದವರೂ ಒಂದು ಒಪ್ಪಂದ ಮಾಡಿಕೊಂಡಿರಬಹುದು, ಅದನ್ನು ಮುರಿಯುವುದಕ್ಕೆ ಆಗದೇ ಇರಬಹುದು. ಆದುದರಿಂದ ಇದಕ್ಕಾಗಿ ೧ ಕೋಟಿ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದನ್ನು ಯಾವ ರೀತಿ ಕೊಟ್ಟಿದ್ದೀರಿ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಭೂ ಅಭಿವೃದ್ಧಿ ಬ್ಯಾಂಕ್‌ಗಳು ಯಾವುವೂ ಕೂಡ ೯೫ ಪರ್ಸೆಂಟ್ ಡಿಫಾಲ್ಟರ್ಸ್‌ನಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ ಏಕೆಂದರೆ ಹೋದ ವರ್ಷ ಆದ ನಷ್ಟದಿಂದ ಜನಗಳಿಗೆ ದುಡ್ಡನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಅದನ್ನು ಅಷ್ಟಕ್ಕೇ ಸೀಮಿತ ಮಾಡಿ ಮುಂದೆ ಈ ರೈತರಿಗೆ ಸಾಲಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕಿಗೂ ನನಗೂ ಸ್ವಲ್ಪ ಸಂಬಂಧವಿದೆ. ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಒಬ್ಬ ಸರ್ವಾಧಿಕಾರಿ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಅವರ ಕಛೇರಿಗೆ ಕೆಂಪು ಲೈಟ್ ಹಾಕಿಸಿದ್ದಾರೆ. ಯಾರನ್ನೂ ಒಳಗಡೆ ಬಿಡುವುದಿಲ್ಲ. ಆ ಬ್ಯಾಂಕ್‌ನ ಡೈರೆಕ್ಟರ್‌ಗಳೂ ಸಹ ಅವರನ್ನು ನೋಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಂಥ ಒಂದು ಸರ್ವಾಧಿಕಾರ ಮನೋಭಾವ ಆ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗಿದೆ. ಇಂಥವರಿದ್ದರೆ ನಿಜವಾಗಿಯೂ ಯಾವ ರೈತನಿಗೂ ಇವರಿಂದ ಉಪಯೋಗವಾಗುವುದಿಲ್ಲ. ಬ್ಯಾಂಕ್‌ನ ಅಧ್ಯಕ್ಷರಿಗೂ ಕೂಡ ಅವರು ಗೌರವ ಕೊಡುವ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲವೆಂದು ಹೇಳಬಯಸುತ್ತೇನೆ. ಆದುದರಿಂದ ಮಾನ್ಯ ಸಚಿವರು ದಯಮಾಡಿ ಜನಗಳಿಗೆ ಅನುಕೂಲವಾಗುವಂತಹ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ಅಲ್ಲಿಗೆ ಹಾಕಬೇಕೆಂದು ಹೇಳಬಯಸುತ್ತೇನೆ. ರಾಜ್ಯದ ಅನೇಕ ಸಹಕಾರ ಸಂಘಗಳಲ್ಲಿ ಕಾರ್ಯದರ್ಶಿಗಳಿಂದ ಹಣ ದುರುಪಯೋಗವಾಗಿದೆ, ಅಧ್ಯಕ್ಷರುಗಳಿಂದ ಹಣ ದುರುಪಯೋಗವಾಗಿದೆ, ಎಂದು ಆಡಿಟ್ ರಿಪೋರ್ಟ್‌ಗಳಿಂದ ತಿಳಿದು ಬಂದಿದ್ದರೂ ಕೂಡ ಇದುವರೆಗೂ ಅಂಥವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಕೆಲವು ಸಹಕಾರ ಸಂಘಗಳ ಕಾರ್ಯದರ್ಶಿಗಳ ಮೇಲೆ ಮೊಕದ್ದಮೆಗಳನ್ನು ಹೂಡಿದ್ದಾರೆ. ಅವಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಕೊಡಿ ಎಂದರೆ ಅವರು ಇದುವರೆಗೂ ಕೊಟ್ಟಿಲ್ಲ.

7-30 P. M.

ಹೇಗೆ ಕೊಟ್ಟರು ಎಂದು ಹೇಳಿದರೆ, ನಮ್ಮ ತಾಲ್ಲೂಕಿನ ಪ್ರಕರಣವನ್ನೇ ಉದಹರಿಸುವುದಾದರೆ, ಸಿರಿಗೆರೆಯಲ್ಲಿರತಕ್ಕಂಥ ಕಾರ್ಯದರ್ಶಿ ಕಾಂಗ್ರೆಸ್ ಪಕ್ಷದವರೇ ಇದ್ದಾರೆ, ಅವರು ಏನಾದರೂ ಮೈಸೂರು ಬ್ಯಾಂಕಿಗೆ ಸಹಾಯ ಕೇಳುವುದಕ್ಕೆ ಹೋದರೆ ಅಲ್ಲಿಯ ಕೆಲಸಗಾರರನ್ನು ಹೆದರಿಸಿ ಕೆಲಸ ಮಾಡಿಸಿಕೊಳ್ಳುತ್ತಾರೆ. ಅವರ ಕೆಲಸ ಮಾಡಿಕೊಡದಿದ್ದರೆ, ಅವರನ್ನು ಕೆಲಸದಿಂದ ತೆಗೆಸಿ ಹಾಕಿ ಬಿಡುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದಾರೆ. ಇದರ ಬಗ್ಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಕೇಳುವುದಕ್ಕೆ ಶಕ್ತಿ ಇಲ್ಲ, ಒಂದು ರೀತಿಯಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಕೂಡ ಅಂಥವರಿಗೆ ಹೆಚ್ಚಿನ ಸಹಕಾರ ಮತ್ತು ಕುಮ್ಮಕ್ಕು ಕೊಡುವ ರೀತಿಯಲ್ಲಿ ವ್ಯವಹಾರ ಮಾಡುತ್ತಿದ್ದಾರೋ ಏನೋ ಎಂದು ವಿಶಾದದಿಂದ ಹೇಳಬೇಕಾಗಿದೆ. ಅದನ್ನು ಕೂಡ ಮಾನ್ಯ ಸಚಿವರು ತೀವ್ರವಾಗಿ ಪರೀಕ್ಷಿಸಿ ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಫಾರಂ ಸೊಸೈಟಿಗಳ ಬಗ್ಗೆ ಹೇಳುವುದಾದರೆ ಬಹುತೇಕ ಇಡೀ ರಾಜ್ಯದಲ್ಲಿ ಅವು ರಚನೆಯಾಗಿವೆ. ಸುಮಾರು ೨೦ ವರ್ಷಗಳಿಂದ ಅವು ರಚನೆಯಾಗಿವೆ. ಆಡಿಟ್ ರಿಪೋರ್ಟ್‌ನಂತೆ ಅವರು ಮಾಡಿರತಕ್ಕಂಥ ಕೆಲಸ ಕಾರ್ಯಗಳನ್ನು ನೋಡಿದರೆ, ಅವರು ಒಂದು ಮನೆಯವರೆಲ್ಲಾ ಸೇರಿ ಫಾರಂ ಸೊಸೈಟಿಗಳನ್ನು ರಚನೆ ಮಾಡಿಕೊಂಡಿದ್ದಾರೆ. ಒಂದೇ ಮನೆಯವರೇ ಇಷ್ಟ ಬಂದ ರೀತಿಯಲ್ಲಿ ವ್ಯವಹಾರ ಮಾಡಿಕೊಂಡು ಲಕ್ಷಾಂತರ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ದುರುಪಯೋಗ ಪಡಿಸಿಕೊಂಡಿದ್ದಾರೆ. ಯಾವುದೇ ರೀತಿಯಾದಂಥ ಪ್ರಗತಿಯನ್ನು ಈ ಫಾರಂ ಸೊಸೈಟಿಗಳವರು ಸಾಧಿಸಿಲ್ಲ. ಇದರ ಬಗ್ಗೆ ಸರ್ಕಾರದವರು ಯಾವ ವಿಧವಾದಂಥ ಕ್ರಮವನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಕೂಲಂಕುಷವಾಗಿ ಪರಿಶೀಲನೆ ಮಾಡಿ ಅಂಥ ಸೊಸೈಟಿಗಳನ್ನು ರದ್ದು ಮಾಡಿ ಅದಕ್ಕೆ ಅಲ್ಲಿರತಕ್ಕಂಥವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಹರಿಜನ ಗಿರಿಜನ ಸೊಸೈಟಿಗಳು, ಅಂದರೆ ಹೌಸಿಂಗ್ ಸೊಸೈಟಿ ಮಾಗಡಿ ತಾಲ್ಲೂಕಿನಲ್ಲಿ ಸುಮಾರು ೨೦ ವರ್ಷಗಳಿಂದಲೂ ಇದೆ. ಹರಿಜನ ಗಿರಿಜನರಿಗೆ ಆ ಸೊಸೈಟಿಯಿಂದ ಮನೆ ಕಟ್ಟುವುದಕೋಸ್ಕರವಾಗಿ ಸಾಲ ಕೊಡುತ್ತಿದ್ದೀರಿ. ತಾಲ್ಲೂಕು ಬೋರ್ಡ್ ಅಧ್ಯಕ್ಷರೇ ಅದಕ್ಕೆ ಅಧ್ಯಕ್ಷರಾಗಿರುತ್ತಾರೆ ಮತ್ತು ಕೋ ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರು ಅದಕ್ಕೆ ಸೆಕ್ರಟರಿಗಳು ಆಗಿದ್ದಾರೆ. ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ಹರಿಜನಗಿರಿಜನ ಹೌಸಿಂಗ್ ಸೊಸೈಟಿ ಪ್ರಾರಂಭವಾಗಿ ೧೨-೧೫ ವರ್ಷಗಳಾಗಿದ್ದರೂ ಇಲ್ಲಿಯವರೆಗೂ ಒಬ್ಬರಿಗೂ ಆ ಸೌಲಭ್ಯವನ್ನು ಕೊಟ್ಟಿಲ್ಲ. ಆದರೆ ಆಡಿಟ್ ವರದಿ ಪ್ರಕಾರ ೪೦ ಸಾವಿರ ರೂಪಾಯಿಗಳ ವರೆಗೆ ದುರುಪಯೋಗವಾಗಿದೆಂದು ತಿಳಿದು ಬಂದಿದೆ. ಮತ್ತು ಅವರು ಇನ್ನೂ ಕೊಟ್ಟಿಲ್ಲ ಡಿಫಾಲ್ಟರ್ ಆಗಿದ್ದಾರೆ. ಇದರಿಂದಾಗಿ ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಯಾರಿಗೂ ಸಾಲ ಕೊಡಿಸಿ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ತಾವು ಈ ಸೊಸೈಟಿಯ ಗಮನವನ್ನು ಹರಿಸಿ ಹರಿಜನ ಗಿರಿಜನರಿಗಾಗಿ ನಾನಾ ಸ್ಕೀಂಗಳನ್ನು ಏನು ಹಾಕಿಕೊಂಡಿದ್ದೀರಿ ಅದರಂತೆ ಅವರಿಗೆ ಆ ಸೌಲಭ್ಯವನ್ನು ಒದಗಿಸಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಸಿರಿಗರಿ ಪುಟದಲ್ಲಿ ಗೋಡೌನ್ ಕಟ್ಟುವುದಕ್ಕೆ ನಿಮ್ಮ ಇಲಾಖೆಯ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಮತ್ತು ಜಾಯಿಂಟ್ ರಿಜಿಸ್ಟ್ರಾರ್ ರವರು ಕೂಡ ಒಂದು ಎಸ್ಟಿಮೇಟ್ ಮಾಡಿ ಕೊಟ್ಟಿದ್ದಾರೆ ಅದು ತಮಗೂ ಕೂಡ ಚೆನ್ನಾಗಿ ಗೊತ್ತಿದೆ. ಅದನ್ನು ತಾವು ಇನ್‌ಸ್ಪೆಕ್ಟ್ ಮಾಡಿದ್ದೀರಿ, ಆದರೆ ತಾವು ಬಹಳ ಬುದ್ಧಿವಂತಿಕೆಯಿಂದ ವ್ಯವಹಾರ ಮಾಡಿ ಅದರ ಬಗ್ಗೆ ಬೇರೆ ಕಡೆಗೆ ಕೊಡಬೇಕೆಂದು ಹೇಳಿ ೩ ಸಾವಿರ ರೂಪಾಯಿಗಳನ್ನು ಈ ಸಂಬಂಧದಲ್ಲಿ ಅಲ್ಲಿಯ ಪ್ರೆಸಿಡೆಂಟ್ ರವರಿಗೆ ಕೊಡಬೇಕೆಂದು ಜಾಯಿಂಟ್ ರಿಜಿಸ್ಟ್ರಾರ್ ರವರಿಗೆ ಹೇಳಿ ಅವರ ಮುಖಾಂತರ ಆಜ್ಞೆ ಹೊರಡಿಸಿದ್ದೀರಿ. ಅದು ಹೈ ಕೋರ್ಟಿನಲ್ಲಿ ಸ್ಟೇ ಆಗಿದೆ. ಅದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ. ನಾವು ಅದರ ಬಗ್ಗೆ ಪೂರ್ಣವಾಗಿ ತಿಳಿಸಿದ್ದರೂ ಕೂಡ ಕಾಂಗ್ರೆಸ್ಸಿನವರ ಒತ್ತಾಯದ ಮೇರೆಗೆ, ನಿಮ್ಮ ಸ್ನೇಹಿತರ ಒತ್ತಾಯದ ಮೇರೆಗೆ ಮಾಡಿದ್ದೀರಿ, ಆದುದರಿಂದ ಅದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕೆ ಹೋಗುವುದಿಲ್ಲ.

ಇನ್ನು ಅಮೂಲ್ಯಮೋಟ್ ಸೊಸೈಟಿ ಎಂದು ಹೇಳಿ ನಮ್ಮ ತಾಲ್ಲೂಕಿನ ಸಿರಿಗೆರೆ ಬೋರ್ಡ್ ಸೊಸೈಟಿಯನ್ನು ಮಾರಾಟ ಮಾಡಿದ್ದಾರೆ, ಮಾರಾಟ ಮಾಡಿರತಕ್ಕಂಥದರ ಬಗ್ಗೆ ಸ್ಟೇ ತಂದಿದ್ದಾರೆ, ಸ್ಟೇ ತಂದಿದ್ದರೂ ಕೂಡ ಅಕ್ರಮವಾಗಿ, ದೌರ್ಜನ್ಯದಿಂದ ಮೇಲಿನ ಅಧಿಕಾರಿಗಳು ಒತ್ತಾಯ ಹಾಕಿಸಿ ಅಲ್ಲಿಯ ಕೋ-ಆಪರೇಟಿವ್ ಇನ್ಸ್‌ಪೆಕ್ಟರ್‌ನ್ನು ಹೆದರಿಸಿ ಸೆಕ್ರಟರಿಯವರಿಂದ ಚಾರ್ಜ್ ತೆಗೆದುಕೊಂಡು ಬೇರೆಯವರಿಗೆ ಚಾರ್ಜ್ ಕೊಡಿಸಿದ್ದೀರಿ. ಸ್ಟೇ ಇರುವುದರಿಂದ ಅದರ ಬಗ್ಗೆ ಹೈಕೋರ್ಟಿನಿಂದ ಮುಂದಿನ ಆದೇಶ ಬರುವವ

ರೆಗೂ ಹಿಂದೆ ಇದ್ದ ಕಮಿಟಿಯನ್ನೇ ಮುಂದುವರಿಸಿ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಕಡೆಯದಾಗಿ ರೆಗ್ಯುಲೇಟ್ ಮಾರ್ಕೆಟ್ ಕಮಿಟಿ ಬಗ್ಗೆ ಹೇಳುವುದಾದರೆ, ಮೊದಲು ಉಪಯುಕ್ತವಾಗಿರುವ ಕಡೆಯಲೆಲ್ಲಾ ರಸ್ತೆಯನ್ನು ಮಾಡಬೇಕಾಗಿದೆಂದು ಈ ಸಂದರ್ಭದಲ್ಲಿ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕಾಗಿ ತಾವು ಒಂದು ಕಮಿಟಿಯನ್ನು ಮಾಡಿ ತನ್ಮೂಲಕ ರಸ್ತೆ ಮಾಡಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಸ್. ವೀರಭದ್ರಪ್ಪ (ಪಡಿಗಿ).—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸದಸ್ಯರನೇಕರು ಸಹಕಾರ ಸಂಘಗಳಲ್ಲಿರತಕ್ಕಂಥ ಅನೇಕ ಲೋಪದೋಷಗಳನ್ನು ಎತ್ತಿ ಹೇಳಿದ್ದಾರೆ ಆ ಲೋಪದೋಷಗಳ ಬಗ್ಗೆ ಮಾನ್ಯ ಮಂತ್ರಿಗಳವರು ಗಮನ ಕೊಟ್ಟು ಅವುಗಳನ್ನು ಸರಿಪಡಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮುಖ್ಯವಾಗಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಅನೇಕ ಸಣ್ಣ ಸಣ್ಣ ರೈತರು ಭಾವಿಗಳಿಗೆ ಸಾಲ ತೆಗೆದುಕೊಂಡಿದ್ದಾರೆ, ಆದರೆ ಎಷ್ಟೋ ಭಾವಿಗಳು ಫೇಲ್ ಆಗಿವೆ. ಅವುಗಳಲ್ಲಿ ಸಾಕಷ್ಟು ನೀರು ಇಲ್ಲದೇ ಇವತ್ತಿನ ದಿವಸ ಅವರು ಸಾಲದ ಕಂತುಗಳನ್ನೂ ಕಟ್ಟುವುದಕ್ಕೆ ಕೂಡ ಸಾಧ್ಯವಾಗುತ್ತಿಲ್ಲ. ಉದಾಹರಣೆಗೆ ನಮ್ಮ ತಾಲ್ಲೂಕಿನ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸುಮಾರು ೫ ನೂರು ಭಾವಿಗಳಿಗೆ ಸಾಲ ಕೊಟ್ಟಿದ್ದಾರೆ. ಅದರಲ್ಲಿ ೭೦-೮೦ ಭಾವಿಗಳಲ್ಲಿ ನೀರಿಲ್ಲದೆ ಫೇಲ್ ಆಗಿದೆ, ಅದಕ್ಕಾಗಿ ಸರ್ಕಾರದವರು ಒಂದು ಸಮಿತಿ ನೇಮಿಸಿ, ಆ ರೀತಿ ಸಾಲ ತೆಗೆದುಕೊಂಡಿರತಕ್ಕಂಥವರ ಭಾವಿಗಳು ಫೇಲ್ ಆಗಿರುವುದಕ್ಕೆ ಪರಿಶೀಲನೆ ಮಾಡಿಸಿ ಅವರಿಗೆ ಆದಷ್ಟು ಮಟ್ಟಿಗೆ ಹೆಚ್ಚಿನ ಸವಲತ್ತನ್ನು ಕೊಟ್ಟು ಅದನ್ನು ಪೂರ್ಣಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಅದಕ್ಕೆ ಅವಕಾಶವಿದೆ. ಅದಕ್ಕೆ ನಾವು ಈಗ ೫೦ ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ಭಾವಿಗಳಲ್ಲಿ ನೀರು ಇಲ್ಲವೆಂದು ಅಧಿಕಾರಿಗಳಿಂದ ರಿಪೋರ್ಟ್ ಬಂದರೆ ೫೦ ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆ. ಆ ಒಂದು ವ್ಯವಸ್ಥೆ ಇದೆ.

ಶ್ರೀ ಬಿ.ಎಸ್. ವೀರಭದ್ರಪ್ಪ.—ಆ ವ್ಯವಸ್ಥೆ ಇದೆ. ಆದರೆ ತ್ವರಿತ ಗತಿಯಲ್ಲಿ ರಿಕಾರ್ಡುಗಳನ್ನು ಬಿಲ್ಡ್ ಅಪ್ ಮಾಡುತ್ತಿಲ್ಲ. ಇವತ್ತು ೩-೪ ಎಕರೆಗಳಷ್ಟಾದರೂ ನೀರಾವರಿಯಾದರೆ ಅವರ ಜೀವನ ಹಸನವಾಗುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಅವರು ಸಾಲದ ಕಂತುಗಳನ್ನು ಕಟ್ಟುವುದಕ್ಕೆ ಬಹಳ ತೊಂದರೆಯಾಗುತ್ತದೆ. ಅದಕ್ಕಾಗಿ ತಾವು ಬೋರ್‌ವೆಲ್ಸ್‌ಗಳನ್ನು ತೆಗೆಸಿ ಅವರಿಗೆ ಅನುಕೂಲ ಮಾಡಿಕೊಟ್ಟರೆ ಸಾಲವನ್ನು ತೀರಿಸುವುದಕ್ಕೆ ಅನುಕೂಲವಾಗುತ್ತದೆ. ಡಿಫಾಲ್ಟರ್ಸ್ ಕಡಿಮೆಯಾಗುತ್ತದೆ. ಈಗ ಸರ್ಕಾರದವರು ಯಾರು ಡಿಫಾಲ್ಟರ್ಸ್ ಆಗಿದ್ದಾರೆ ಅಂಥವರಿಂದ ವಸೂಲು ಮಾಡುವುದಕ್ಕಾಗಿ ೧ ಕೋಟಿ ರೂಪಾಯಿಗಳ ಖರ್ಚನ್ನು ಹಿಂದಿನ ವರ್ಷದಲ್ಲಿ ತೋರಿಸಿದ್ದಾರೆ. ಆ ಒಂದು ಕಾರಣಕ್ಕಾಗಿ ಯಾರು ಕಂತುಗಳನ್ನು ಸರಿಯಾಗಿ ಕಟ್ಟುತ್ತಿಲ್ಲ ಅಂಥವರ ಆಸ್ತಿಯನ್ನು ಹರಾಜಿನಲ್ಲಿ ಯಾರೂ ತೆಗೆದುಕೊಳ್ಳದಿದ್ದರೆ, ಅಲ್ಲಿ ಯಾರೂ ಹರಾಜುದಾರರು ಬಾರದಿದ್ದರೆ ಆಗ ಅಂಥ ಕಡೆ ಸರ್ಕಾರದವರೇ ಖರೀದಿ ಮಾಡುವ ಕ್ರಮವಿದೆ.

ಆದರೆ ಈ ಒಂದು ಕ್ರಮವನ್ನು ಸಣ್ಣ ಸಣ್ಣ ರೈತರ ಮೇಲೆ ಪ್ರಯೋಗ ಮಾಡಿದ್ದಾರೆ ಅನೇಕ ಕಡೆ ದೊಡ್ಡ ದೊಡ್ಡ ರೈತರು ಟ್ರಾಕ್ಟರ್ ಮೇಲಿನ ಲೋನ್ ತೆಗೆದುಕೊಂಡು ೧೦-೨೦ ಸಾವಿರ ರೂಪಾಯಿಗಳವರೆಗೆ ಬಾಕಿ ಇದ್ದರೂ ಅವರ ಮೇಲೆ ಈ ಕ್ರಮವನ್ನು ತೆಗೆದುಕೊಳ್ಳದೇ ಕೇವಲ ಭಾವಿ ಮತ್ತು ಪಂಪ್ ಸೆಟ್‌ಗಾಗಿ ಸಾಲವನ್ನು ತೆಗೆದುಕೊಂಡಂತಹ ರೈತರ ಮೇಲೆ ಈ ಒಂದು ಕ್ರಮವನ್ನು ತೆಗೆದುಕೊಂಡಿದ್ದಾರೆ. ಆಮೇಲೆ ನಮ್ಮ ತಾಲ್ಲೂಕಿನಲ್ಲಿ ೭೦೦ ಎಕರೆಯನ್ನು ಸರ್ಕಾರ ಖರೀದಿ ಮಾಡಿದೆ. ಅದನ್ನು ಖರೀದಿ ಮಾಡಿ ೩-೪ ತಿಂಗಳಾಗಿದೆ. ಸರ್ಕಾರ ಇದಕ್ಕಾಗಿ ೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಆದರೆ ಅದನ್ನು ಸರ್ಕಾರ ಇನ್ನೂ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ. ಮತ್ತು ರೈತನಿಗೂ ಅದನ್ನು ಕೊಡದೇ ಪಂಪ್‌ಸೆಟ್ ಹಾಕಿಸಿ ನಿರ್ಲಕ್ಷ ಮಾಡಿ ಕೈಬಿಟ್ಟಿದ್ದಾರೆ. ಅಲ್ಲಿರುವ ಪಂಪ್‌ಸೆಟ್ಟನ್ನು ಯಾರಾದರೂ ಕಳ್ಳತನ ಮಾಡಿದರೆ ಅದಕ್ಕೆ ಯಾರು ಜವಾಬ್ದಾರರು ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಹರಾಜು ಮುಖಾಂತರ ಯಾರು ಅದರ ಪೂರ್ಣ ಹಣವನ್ನು ಕೊಡುತ್ತಾರೋ ಅವರಿಗೇ ಅದನ್ನು ಕೊಟ್ಟುಬಿಡುತ್ತೇವೆ ಎಂದು ಮಾನ್ಯಮಂತ್ರಿಯವರು ಹೇಳಬಹುದು ಅದನ್ನು ಪೂರ್ಣ ಹಣಕ್ಕೆ ಹರಾಜು ಹಾಕಿ, ಅದರ ಪೂರ್ಣ ಹಣವನ್ನು ಒಂದೇ ಸಾರಿ ಕೊಡಿ ಎಂದರೆ ಅದು ಸಾಧ್ಯವಾಗುವುದಿಲ್ಲ. ಅವರಿಗೆ ೩-೪

ಕಂತುಗಳನ್ನು ಕೊಟ್ಟು ಹಣವನ್ನು ವಸೂಲು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಆಮೇಲೆ ಸರ್ಕಾರದವರು ತೆಗೆದುಕೊಂಡಿರುವಂಥ ಆಸ್ತಿಯನ್ನು ಪುನಃ ರೈತರಿಗೆ ಕೊಡುವುದಾದರೆ ಯಾರು ಅವರ ಸಾಲದ ಬಾಕಿಯನ್ನೆಲ್ಲಾ ಕೊಟ್ಟಿರುತ್ತಾರೋ ಅವರಿಗೆ ಆ ಆಸ್ತಿಯನ್ನು ಸ್ವಾಧೀನಕ್ಕೆ ಕೊಟ್ಟು ಅದರಲ್ಲಿ ದುಡಿಯುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದಕ್ಕಾಗಿ ಒಂದು ಪ್ರತ್ಯೇಕವಾದ ಕಾನೂನನ್ನು ತಂದು ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಈಗಾಗಲೇ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪಿ.ಎಲ್.ಡಿ ಬ್ಯಾಂಕ್‌ನವರು ಸಾಲ ಕೊಟ್ಟು ಸಾಕಷ್ಟು ಭಾವಿಗಳನ್ನು ತೋಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಅದರಂತೆಯೇ ಕ್ರಾಪ್ ಲೋನ್ ಕೊಡುವುದಕ್ಕೆ ಪಿ.ಎಲ್.ಡಿ. ಬ್ಯಾಂಕ್‌ನವರಿಗೆ ವಹಿಸಿಕೊಟ್ಟರೆ ಬೆಳೆ ಬಂದಾಗ ರೈತರಿಂದ ಆ ಸಾಲದ ಬಾಕಿಯನ್ನು ಮತ್ತು ಈ ಸಾಲದ ಬಾಕಿಯನ್ನು ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅವರಿಗೆ ಈ ಕ್ರಾಪ್ ಲೋನ್ ಸಿಕ್ಕುವುದಿಲ್ಲವೆಂದರೆ ಅವರು ಬೆಳೆಯನ್ನು ಬೆಳೆಯುವುದಕ್ಕೂ ಸಾಧ್ಯವಾಗುವುದಿಲ್ಲ. ಮತ್ತು ಆ ಸಾಲವನ್ನು ತೀರಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಪಿ. ಎಲ್. ಡಿ. ಬ್ಯಾಂಕ್‌ನವರಿಂದ ರೈತರಿಗೆ ಕ್ರಾಪ್ ಲೋನ್ ಕೊಡುವ ವ್ಯವಸ್ಥೆ ಮಾಡುವುದು ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. ನನ್ನ ತಾಲ್ಲೂಕಿನಲ್ಲಿರುವ ಹರಪನಹಳ್ಳಿಯಲ್ಲಿ ಮಲ್ಲೇಶ್ವರಂ ಸೊಸೈಟಿ ಎಂದು ಇದೆ. ಇದು ಅನೇಕ ವರ್ಷಗಳಿಂದ ನಿದ್ರಾವಸ್ಥೆಯಲ್ಲಿದೆ. ೧೯೬೯ನೇ ಇಸವಿಯಲ್ಲಿ ಇದನ್ನು ಸೂಪರ್‌ಸೀಡ್ ಮಾಡಿದರು. ಇವತ್ತಿನವರೆಗೂ ಇದು ಕೆಲಸ ಮಾಡುತ್ತಿಲ್ಲ ಮಾನ್ಯ ಮಂತ್ರಿಯವರು ಇದನ್ನು ರಿವ್ಯೂ ಮಾಡಿದ್ದಾರೆ. ಇದನ್ನು ರಿವ್ಯೂ ಮಾಡುವುದರಲ್ಲಿ ಬಹಳ ಜಾಣತನದಿಂದ ಮಾಡಿದ್ದಾರೆ. ಆದರೆ ಆಗ ಸೂಪರ್‌ಸೀಡ್ ಮಾಡಿದಂತ ಸೊಸೈಟಿಯನ್ನು ಮತ್ತೆ ಅದೇ ಡೈರೆಕ್ಟರ ಸ್ವಾಧೀನಕ್ಕೆ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಅದನ್ನು ರಿವ್ಯೂ ಮಾಡಬೇಕೆಂದು ಹೇಳಿದ್ದೇವೆ. ಆದರೆ ಅವರಿಗೇ ಕೊಡಬೇಕೆಂದು ಹೇಳಿಲ್ಲ. ಈ ಬಗ್ಗೆ ಯಾರಾದರೂ ತಪ್ಪು ಪ್ರಚಾರ ಮಾಡಿರಬೇಕು. ಆ ಒಂದು ವಿಚಾರ ಸರ್ಕಾರದವರ ಗಮನದಲ್ಲಿ ಇಲ್ಲ, ಆ ರೀತಿ ಮಾಡಿಲ್ಲ.

ಶ್ರೀ ಬಿ.ಎಸ್ ವೀರಭದ್ರಪ್ಪ —ತಾವು ಆ ಆರ್ಡರನ್ನು ಮತ್ತೆ ಪರಿಶೀಲನೆ ಮಾಡಿ ಅದನ್ನು ಬೇರೆ ರೀತಿಯಲ್ಲಿ ಮಾಡಬೇಕೆಂದು ಹೇಳಬಯಸುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕಂಥ ಸೊಸೈಟಿಗಳಿಗೆ ಹೊಸದಾಗಿ ದಕ್ಷರಾದ ಡೈರೆಕ್ಟರುಗಳನ್ನು ಮತ್ತು ಮ್ಯಾನೇಜಿಂಗ್ ಡೈರೆಕ್ಟರುಗಳನ್ನು ನೇಮಕ ಮಾಡಿ ಸೊಸೈಟಿಗಳನ್ನು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತೇನೆ. ಈಗಾಗಲೇ ಜಿಲ್ಲಾ ಸಂಸ್ಥೆಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಲ್ಲಿ ೪ ಲಕ್ಷ ರೂಪಾಯಿಗಳ ದುರ್ವ್ಯವಹಾರವಾಗಿದೆ. ಈ ದುರ್ವ್ಯವಹಾರವನ್ನು ತಪ್ಪಿಸಬೇಕಾದರೆ ದಕ್ಷರಾದ ಡೈರೆಕ್ಟರ್ಸ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರುಗಳನ್ನು ಹೊಸದಾಗಿ ನಾಮಕರಣ ಮಾಡಬೇಕೆಂದು ಸೂಚನೆ ಮಾಡುತ್ತೇನೆ ಮತ್ತು ಅವುಗಳಿಗೆ ಸಾಕಷ್ಟು ಹಣದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಮತ್ತೊಂದು ವಿಷಯವೇನೆಂದರೆ ಆ ಒಂದು ಸೊಸೈಟಿಯಲ್ಲಿ ೨೦೦ ತಗಡುಗಳನ್ನು ಕಳ್ಳತನದಲ್ಲಿ ಲಿಕ್ವಿಡೇಟ್ ಮಾಡಿ ಅಡ್ಮಿನಿಸ್ಟ್ರೇಟರ್ ಕೈಗೆ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಬಳ್ಳಾರಿ ಜಿಲ್ಲೆಯು ಸಹಕಾರಿ ರಂಗಕ್ಕೆ ಅದು ಹೊಂದಿಕೊಂಡು ಬರಲಿಲ್ಲವೋ ಏನೋ. ಯಾವ ತಾಲ್ಲೂಕಿನಲ್ಲಿ ಯಾವ ಸಹಕಾರ ಸಂಘವನ್ನು ತೆಗೆದುಕೊಂಡರೂ ತಗಡು ಹೋಯಿತು ಎಂದು ಹೇಳುತ್ತಿದ್ದಾರೆ, ತಮ್ಮ ಜಿಲ್ಲೆಯಲ್ಲಿ ಯಾವ ಸಹಕಾರ ಸಂಘ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಹೇಳಿ ನೋಡೋಣ.

ಶ್ರೀ ಬಿ.ಎಸ್. ವೀರಭದ್ರಪ್ಪ.—ಇನ್ನು ನಮ್ಮ ಮಲ್ಲೇಶ್ವರಂ ಸೊಸೈಟಿಯನ್ನು ಚೆನ್ನಾಗಿ ಬೆಳೆಸುವುದಕ್ಕೆ ಸಾಕಷ್ಟು ಹಣವನ್ನು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ —ಈಗ ತಾವು ರೀ ಆರ್ಗನೈಸೇಷನ್ ಆಫ್ ಸೊಸೈಟಿ ಎಂದು ಮಾಡಿದ ಮೇಲೆ ಅನೇಕ ಕಡೆ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಸಾಲವನ್ನು ಕೊಡುತ್ತಾ ಇಲ್ಲ ಮತ್ತು ಡಿ.ಸಿ.ಸಿ. ಬ್ಯಾಂಕ್‌ನಲ್ಲೂ ಸಹ ದುಡ್ಡು ಇಲ್ಲ ಎನ್ನುವ ಸುದ್ದಿ ಇದೆ. ಈ ಬಗ್ಗೆ ತಾವು ಗಮನ ಕೊಟ್ಟು ರೈತರಿಗೆ ಸಾಲ ದೊರಕುವಂತೆ ವ್ಯವಸ್ಥೆ ಮಾಡಬೇಕು. ಏಕೆಂದರೆ ಈ ಋಣ ವಿಮೋಚನಾ ಕಾಯಿದೆ ಬಂದಮೇಲೆ ರೈತನಿಗೆ ಖಾಸಗೀ ಜನರಿಂದ ಸಾಲ ಸಿಕ್ಕುತ್ತಾ ಇಲ್ಲ. ಈ ಸೊಸೈಟಿಗಳಿಂದಲೇ ಅವರಿಗೆ ಸಾಲ ಸಿಕ್ಕಬೇಕು. ನಮ್ಮ ಡಿ ಸಿ.ಸಿ. ಬ್ಯಾಂಕ್‌ನವರು ಸುಮಾರು ೧೬ ಲಕ್ಷ ರೂಪಾಯಿಗಳಷ್ಟು

ಮಾತ್ರ ಸಾಲ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಅದಲ್ಲದೆ ಸಣ್ಣ ಹಿಡುವಳಿದಾರರಿಗೆ ಒಬ್ಬೊಬ್ಬರಿಗೂ ೧೦೦ ರೂಪಾಯಿಗಳ ಸಾಲವನ್ನು ಕೊಡಬೇಕೆಂಬುದಾಗಿ ಜಿಲ್ಲಾಧಿಕಾರಿಗಳು ಸೂಚನೆ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ ಮಳೆಬೆಳೆ ಆಗದೆ ತೊಂದರೆಪಡತಕ್ಕಂಥ ಸಣ್ಣ ರೈತರಿಗೆ ಸೊಸೈಟಿಗಳ ಮುಖಾಂತರ ಹೆಚ್ಚಿನ ಸಾಲವನ್ನು ಕೊಟ್ಟು ಅವರಿಗೆ ಸಹಾಯ ಮಾಡಬೇಕೆಂದು ಸೂಚನೆ ಮಾಡುತ್ತೇನೆ ಇನ್ನು ದುರ್ಬಲವರ್ಗದವರ ಯೋಗಕ್ಷೇಮವನ್ನು ನೋಡುವುದಾದರೆ ಸರ್ಕಾರದವರು ಈ ದುರ್ಬಲ ವರ್ಗದ ರೈತರಿಗೆ ಭಾವಿಗಳನ್ನು ತೋಡಿಸಿಕೊಟ್ಟು, ಪಂಪುಸೆಟ್ಟುಗಳನ್ನು ಹಾಕಿಸಿಕೊಟ್ಟು ಅವರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಆ ಹಣವನ್ನು ಕಂತಿನ ರೂಪದಲ್ಲಿ ಅವರಿಂದ ವಸೂಲು ಮಾಡಿ ಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಸರ್ಕಾರದವರು ಈ ಬಗ್ಗೆ ಒಂದು ಯೋಜನೆಯನ್ನು ಹಾಕಿ ಕೊಂಡು ಈ ಕೆಲಸವನ್ನು ಮಾಡಬೇಕು. ಏಕೆಂದರೆ ರೈತರಿಗೆ ಬೇರೆ ಕಡೆಗಳಲ್ಲಿ ಸಾಲ ಸಿಕ್ಕುವುದು ಕಷ್ಟ ವಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ವಿಚಾರದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳು ಬಹಳ ವರ್ಷಗಳಿಂದ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಆ ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಇನ್ನೂ ಅಭಿವೃದ್ಧಿ ಹೊಂದಿಲ್ಲ. ಅನೇಕ ರೀತಿಯಲ್ಲಿ ಅಲ್ಲಿ ಟ್ಯಾಕ್ಸ್‌ನಿಂದ ಬರತಕ್ಕಂಥ ಹಣ ಪೋಲಾಗುತ್ತಿದೆ ಆದ್ದರಿಂದ ಮಾನ್ಯ ಮಂತ್ರಿಯವರು ಈ ಬಗ್ಗೆ ಗಮನಕೊಟ್ಟು ದಕ್ಷತೆಯಿಂದ ಈ ಹಣ ಪೋಲಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಬಯಸುತ್ತೇನೆ ನಮ್ಮ ತಾಲ್ಲೂಕಿನಲ್ಲಿ ಸರ್ವೋದಯ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿ ಗುಡೇಕೋಟೆ ಎಂದು ಇದೆ. ಅಲ್ಲಿ ೧೦೦ ಎಕರೆ ಜಮೀನು ತೆಗೆದುಕೊಂಡು ಸೊಸೈಟಿಯನ್ನು ಫಾರಂ ಮಾಡಿದ್ದಾರೆ. ಒಬ್ಬರು ಆ ಒಂದು ಸೊಸೈಟಿಯನ್ನು ನಡೆಸುತ್ತಿದ್ದಾರೆ. ಸರ್ಕಾರದವರು ೧೦-೧೫ ಮನೆಗಳನ್ನು ಕಟ್ಟಿಸಿದ್ದಾರೆ. ಅಲ್ಲಿ ಪಂಪ ಸೆಟ್ ಕೊಟ್ಟು ಭಾವಿಗಳನ್ನು ತೋಡಿಸಿದ್ದಾರೆ. ಅಲ್ಲಿ ಒಂದು ಪ್ರತ್ಯೇಕವಾದ ಕೆರೆಯನ್ನೂ ಕೊಟ್ಟಿದ್ದಾರೆ. ಆದ್ದರಿಂದ ದುರ್ಬಲವರ್ಗದ ಜನರನ್ನು ಅಲ್ಲಿ ಇಟ್ಟು ಅಲ್ಲಿರುವ ನೂರು ಎಕರೆ ಜಮೀನು ಮಾಡುವುದಕ್ಕೆ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಸೂಚಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಂತ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಎಂ ಕೆ. ಕುಲಕರ್ಣಿ (ನವಲಗುಂದ).—ಮಾನ್ಯ ಅಧ್ಯಕ್ಷರೇ; ಇವತ್ತಿನ ದಿವಸ ಈ ಸಹ ಕಾರ ಖಾತೆಯ ಬೇಡಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ ಈ ಗ್ರಾಮಸೇವಾ ಸಹಕಾರ ಸಂಘಗಳ ಬಗ್ಗೆ ಹೇಳಬೇಕೆಂದರೆ ಸೊಸೈಟಿಗಳ ಫೈನಾನ್ಸಿಯಲ್‌ಸೈಡ್‌ನಲ್ಲಿ "ತ್ರೀ ಟೈಯರ್ ಸಿಸ್ಟಮ್" ಎಂದು ಮಾಡಿದ್ದಾರೆ. ಹೇಗೆಂದರೆ ರಿಸರ್ವ್ ಬ್ಯಾಂಕ್‌ನಿಂದ ಅಪೆಕ್ಸ್ ಬ್ಯಾಂಕ್ ಅಪೆಕ್ಸ್ ಬ್ಯಾಂಕ್‌ನಿಂದ ಡಿ. ಸಿ. ಸಿ. ಬ್ಯಾಂಕು ಮತ್ತು ಡಿ. ಸಿ. ಸಿ. ಬ್ಯಾಂಕ್‌ನಿಂದ ಸೊಸೈಟಿಗೆ ಹಣವನ್ನು ಕೊಡುತ್ತಾರೆ. ರಿಸರ್ವ್ ಬ್ಯಾಂಕ್‌ನಿಂದ ಡಿ. ಸಿ. ಸಿ. ಬ್ಯಾಂಕ್‌ಗೆ ನೇರವಾಗಿ ಕೊಟ್ಟರೆ ೨ ಪರ್ಸೆಂಟ್ ಉಳಿಸಿದಂತಾಗುತ್ತದೆ. ಇಲ್ಲದಿದ್ದರೆ ೨ ಪರ್ಸೆಂಟ್ ರೈತನಿಗೆ ಹೊರೆಯಾಗುತ್ತದೆ. ಈ ೨ ಪರ್ಸೆಂಟ್ ರೈತನ ಮೇಲೆ ಏತಕ್ಕೆ ಹೊರೆಯಾಗಬೇಕು ಎಂದು ಕೇಳುತ್ತೇನೆ. ಆದ್ದರಿಂದ ಡಿ. ಸಿ. ಸಿ ಬ್ಯಾಂಕ್‌ನಿಂದ ರಿಸರ್ವ್ ಬ್ಯಾಂಕ್‌ಗೆ ಕೊಟ್ಟರೆ ಆಗುವುದಿಲ್ಲ. ೨ ಪರ್ಸೆಂಟ್ ರೈತರ ಮೇಲೆ ಹೊರೆಯಾಗುವು ದನ್ನು ತಪ್ಪಿಸಲು ಅಪೆಕ್ಸ್ ಬ್ಯಾಂಕ್‌ನ್ನು ಬಿಟ್ಟು ರಿಸರ್ವ್ ಬ್ಯಾಂಕ್‌ನಿಂದ ಡಿ. ಸಿ. ಸಿ. ಬ್ಯಾಂಕ್‌ಗೆ ನೇರ ವಾಗಿ ಕೊಡುವ ಹಾಗೆ ಮಾಡಬೇಕು ತಾವು ಇದರ ಬಗ್ಗೆ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ನನ್ನ ತಾಲ್ಲೂಕಿನ ಬಗ್ಗೆ ಹೇಳಬೇಕೆಂದರೆ ಅಲ್ಲಿನ ಮಾರ್ಕೆಟಿಂಗ್ ಸೇಲ್ಸ್ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದ್ದಾರೆ. ಈಗ ಅದಕ್ಕೆ ಸಂಬಂಧಪಟ್ಟಂತೆ ಕೇಸು ಕೋರ್ಟಿನಲ್ಲಿದೆ. ಅದು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿತ್ತು ಸೂಪರ್‌ಸೀಡ್ ಆಗುವುದಕ್ಕೆ ಮುಂಚೆ ಬಹಳ ಒಳ್ಳೆಯ ರೀತಿಯಿಂದ ಕೆಲಸ ಮಾಡಿ ಲಕ್ಷಗಟ್ಟಲೆ ಫಾಯಿದೆ ಬರುವಂತೆ ಮಾಡಿತ್ತು. ಅಂಥ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿ ದ್ದೀರಿ. ಸೂಪರ್‌ಸೀಡ್ ಮಾಡಿದ ಮೇಲೆ ಆ ಸೊಸೈಟಿ ೧ ವರ್ಷದೊಳಗೆ ೧,೬೫,೦೦೦ ರೂಪಾಯಿ ಲುಕ್ಸಾನನ್ನು ಅನುಭವಿಸಿದೆ ನವಲಗುಂದ ತಾಲ್ಲೂಕು ರೆಗ್ಯುಲೇಟಿಂಗ್ ಮಾರ್ಕೆಟಿಂಗ್ ಏರಿಯಾ ಮೂರು ತಾಲ್ಲೂಕುಗಳಿಗೆ ಹಂಚಿಕೊಂಡಿದೆ. ಅದನ್ನು ತಪ್ಪಿಸಿ ಒಂದೇ ತಾಲ್ಲೂಕಿನ ಮಾರ್ಕೆಟಿಂಗ್ ಏರಿಯಾ ಆಗುವಂತೆ ಮಾಡಬೇಕು. ಏರಿಯಾವೈಸ್ ವಿಂಗಡಿಸಬೇಕೆಂದು ನನ್ನ ವಿನಂತಿ ಇದೆ. ನಮ್ಮ ತಾಲ್ಲೂಕಿ ನಲ್ಲಿ ಇನ್ನು ಕೆಲವು ಸಣ್ಣ ಸೊಸೈಟಿಗಳು ಡಿಫಂಕ್ಟ್ ಆಗಿಬಿಟ್ಟಿವೆ. ಅವುಗಳನ್ನು ಹೇಗಾದರೂ ಮಾಡಿ ಸುಧಾರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೆಲವು ಸೊಸೈಟಿಗಳು ಗಂಡಾರ ಜಮಾಖಾನ, ಮುಂತಾದ

ವನ್ನು ನೇಯುವಂಥ ಕೆಲಸವನ್ನು ಮಾಡುತ್ತದೆ. ಅವು ಡಿಫಂಕ್ಟ್ ಆಗಿರುವುದನ್ನು ತಪ್ಪಿಸಿ ಏನಾದರೂ ಮಾಡಿ ಅವರಿಗೆ ಸಹಾಯ ಮಾಡಿ ಮತ್ತೆ ಅದಕ್ಕೆ ಜೀವ ತುಂಬಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI K PUTTASWAMY (Chamundeswari).—Mr. Chairman, Sir, I think the members who have been kind enough to sit in the House till now must have been very much tired Therefore, I do not want to inflict any speech.

SRI J. S. AMMANNANAVAR.—I rise on a point of order, Sir. I want to know whether there is quorum.

MR. CHAIRMAN.—There is quorum.

SRI K. PUTTASWAMY (Chamundeswari).—Mr. Chairman. Sir, one of my professors told me when I was a student that I should reserve my best point to the last. Perhaps the best point on behalf of the Opposition is reserved to the last. That is the honour I am having.

I wish to refer to the administration of the Agricultural Produce Marketing Act. The title is very clear.

(At this stage some members expressed that it was already very late).

SRI K. PUTTASWAMY.—When the House is not in a receptive mood, I do not wish to proceed. If you are pleased to give me some time tomorrow I will be very much obliged.

MR. CHAIRMAN.—The hon'ble Member Sri Puttaswamy will continue tomorrow. The House will now adjourn and meet tomorrow at 12 noon.

The House adjourned at Eight of the Clock to meet at Twelve of the Clock on Thursday, the 7th July 1977.

7138 GPB